ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 15 ಏಪ್ರಿಲ್ 5-11, 1999 ರೂ. 2.00

ಬಿಜೆಪಿ ಸರಕಾರವನ್ನು ನಡುಗಿಸಿರುವ 'ರಾಜಕೀಯ ಭೂಕಂಪ'

ಕಳೆದ ವಾರವಷ್ಟೇ ಬಿಜೆಪಿ ಪಕ್ಷ ಅಧಿಕಾರದಲ್ಲಿ ತನ್ನ ಒಂದು ವರ್ಷವನ್ನುಆಚರಿಸುವುದರಲ್ಲಿ ಮಗ್ನವಾಗಿತ್ತು- ಒಂದು ವರ್ಷ ಮುಗಿಸಿದ್ದೇ ಒಂದು ಸಾಧನೆಯೆಂಬಂತೆ. ಆದರೆ ನಂತರದ ಘಟನೆಗಳು ಆ ಬಲೂನನ್ನು ಒಡೆದು ಬಿಟ್ಟಂತಿದೆ. ಬಿಜೆಪಿ ಮುಖಂಡರೇನೋ ಈಗಲೂ ತಮ್ಮ ಸರಕಾರ ಭದ್ರವಾಗಿದೆ ಎಂದು ನಟಿಸುತ್ತಿದ್ದಾರೆ. ಆದರೆ ಸಂಸತ್ತಿನ ಅಧಿವೇಶನ ಮುಂದಿನ ವಾರ ಆರಂಭವಾದಾಗ ಅಡ್ಮಿರಲ್ ವಿಷ್ಣು ಭಾಗವತರ ವಜಾದ ಚರ್ಚೆ ಎತ್ತಿ ಆ ಬಗ್ಗೆ ಜಂಟಿ ಸಂಸದೀಯ ಸಮಿತಿ ರಚನೆಯಾಗಬೇಕೆಂದು ನಿಲುವಳಿ ಸೂಚನೆಯನ್ನು ಪ್ರತಿಪಕ್ಷಗಳು ಮಂಡಿಸಿ ದಾಗ ಅದು ಎಲ್ಲಾ ಸಂಸತ್ ಸದಸ್ಯರ ದೇಶಪ್ರೇಮದ ಅಗ್ನಿಪರೀಕ್ಷೆಯಾಗಲಿದೆ, ಬಹುಶ: ಬಿಜೆಪಿಯ ಅಧಿಕಾರದ ಕೊನೆಯ ದಿನವೂ ಆಗಬಹುದು ಎಂದು ಸಿಪಿಐ(ಎಂ) ಪ್ರದಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಈ ಜನ-ವಿರೋಧಿ ಸರಕಾರವನ್ನು ಕಟಕಟೆಗೆ ತರಲು ಆಂದೋಲನವನ್ನು ಹರಿಯಬಿಟ್ಟು ರಾಷ್ಟ್ರೀಯ ಐಕ್ಯತೆ, ಧರ್ಮನಿರಪೇಕ್ಷತೆ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಬೆಂಬಲಿಸುವ ಎಲ್ಲಾ ಶಕ್ತಿಗಳನ್ನು ಕ್ರೋಢೀಕರಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

ಅವರು ನವದೆಹಲಿಯ ಆಳುವ ವಲಯಗಳಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ವಿಮರ್ಶಿಸುತ್ತಾ ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ಲೇಖನದಲ್ಲಿ ಹೀಗೆ ಹೇಳಿದ್ದಾರೆ.

ಸುಬ್ರಹ್ಮಣ್ಯ ಸ್ವಾಮಿಯವರಿಗೆ ಬಿಜೆಪಿಯನ್ನು ವಿರೋಧಿಸಲು ತಮ್ಮದೇ ಕಾರಣಗಳಿರಬಹುದು.ಆದರೆ ಅದಕ್ಕಾಗಿ ಅವರು ಏರ್ಪಡಿಸಿದ ಮಾರ್ಚ್ 30ರ 'ಟೀಪಾರ್ಟಿ', ಅಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾದಿಯಾಗಿ ಆ ಪಕ್ಷದ ಪ್ರಮುಖ ಮುಖಂಡರ ಉಪಸ್ಥಿತಿ,ಅಲ್ಲಿ ಸೋನಿಯಾ ಗಾಂಧಿ ಮತ್ತು ಜಯಲಲಿತಾ ಭೇಟಿ,'ರಾಜಕೀಯ ಭೂಕಂಪ 'ಹಾಗೂ 'ದೇಶದ ರಾಜಕೀಯ ನಿರಂತರ ಚಲನೆಯಲ್ಲಿದೆ' ಎಂಬ ಉದ್ಗಾರಗಳು ಇವೆಲ್ಲಾ ಬಿಜೆಪಿ ಮುಖಂಡರನ್ನು ನಡುಗಿಸಿಬಿಟ್ಟಿವೆ.ಪ್ರಮೋದ ಮಹಾಜನರಿಂದ ಹಿಡಿದು ರಂಗರಾಜನ್ ಕುಮಾರ ಮಂಗಲಂವರೆಗೆ ಮುಖಂಡರ ಮಾತುಗಳು ಅವರ ಹತಾಶೆಯನ್ನು ಬಯಲು ಮಾಡಿವೆ.

ಜಯಲಲಿತಾರವರು ರಾಷ್ಟ್ರದ ರಾಜಧಾನಿಯಲ್ಲಿದ್ದ ಐದು ದಿನ ಬಿಜೆಪಿ ಆಕೆಯನ್ನು ಸಂತುಷ್ಟಗೊಳಿಸಲು ನಡೆಸದ ಪ್ರಯತ್ನಗಳಿಲ್ಲ.ಆಕೆಯನ್ನು ಹೊಗಳಿ ಅಟ್ಟಕ್ಕೇರಿಸಲಾಯಿತು ;ದಿಲ್ಲಿಯ ಬಿಜೆಪಿ ಸಂಸತ್ ಸದಸ್ಯ ವಿಜಯ್ ಗೋಯಲ್ 'ಟೀ ಪಾರ್ಟಿ' ಏರ್ಪಡಿಸಿದರು; ಆತುರಾತುರ ವಾಗಿ ಸಂಯೋಜಕ ಸಮಿತಿಯ ಸಭೆ ಕರೆದು ನೌಕಾಪಡೆಯ ಹಿಂದಿನ ಸೇನಾಪತಿ ಅಡ್ಮಿರಲ್ ಭಾಗವತ್‌ರ ವಜಾ ವಿಷಯದಲ್ಲಿ ಸರಕಾರದ ನಿಲುವನ್ನು ಒಪ್ಪುವಂತೆ ಮಾಡಲಾಯಿತು; ಸಭೆಯ ನಂತರ ಆಕೆ ಆಳುವ ಕೂಟದ ಬಹುಮತದ ನಿಲುವನ್ನು ಒಪ್ಪಿದ್ದಾರೆ ಎಂಬ ಭಾವನೆ ಮೂಡಿಸಲಾಯಿತು; ಈ ರೀತಿ ಈ ಸಮಸ್ಯೆ ಇಲ್ಲಿಗೆ ಪರಿಹಾರವಾಯಿತು ಎಂದು ನಂಬಿಸಲು ಪ್ರಯತ್ನಿಸಲಾಯಿತು.ಆದರೆ ಈ ಬಾರಿ ಮಾತ್ರ ದೇಶದ ರಕ್ಷಣೆ ಹಾಗೂ ಭದ್ರತೆಯ ಒಂದು ವಿಷಯವನ್ನು ಎತ್ತಿದ ಜಯಲಲಿತಾರವರು ಅಡ್ಮಿರಲ್ ಭಾಗವತರನ್ನು ಮತ್ತೆ ಆ ಸ್ಥಾನಕ್ಕೆ ತರಬೇಕು ಇಲ್ಲವೇ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸರನ್ನು ಬೇರೆ ಇಲಾಖೆಗೆ ವರ್ಗಾಯಿಸಬೇಕು ಎಂದು ಪುನರುಚ್ಚರಿಸಿದರು.

ಹತಾಶೆಯಿಂದ ಗಾಬರಿಯತ್ತ

ಬಿಜೆಪಿ ಸರಕಾರ ಈಗ ವರ್ತಿಸುತ್ತಿರುವ ರೀತಿಯಂತೂ ಬಿಜೆಪಿ ಮುಖಂಡರ ಹತಾಶೆಯನ್ನು ಮಾತ್ರವಲ್ಲ, ಭಯಂಕರ ಗಾಬರಿ ಅವರನ್ನುಆವರಿಸಿದ್ದನ್ನು ತೋರಿಸುತ್ತದೆ ಎಂದು ಸುರ್ಜಿತ್ ಹೇಳಿದ್ದಾರೆ. ಉದಾಹರಣೆಗೆ, ಈ ಸರಕಾರ ಈಗ ರಶ್ಯಾ ಮತ್ತು ಚೀಣಾದೊಂದಿಗೆ ಸಹಕಾರದ ಮಾತಾಡುತ್ತಿದೆ.ಕೆಲವು ಸಮಯದ ಹಿಂದೆ ರಶ್ಯನ್ ಒಕ್ಕೂಟ ಅಮೆರಿಕನ್ ಸಾಮ್ರಾಜ್ಯಶಾಹಿಯ ಜಾಗತಿಕ ಯಜಮಾನಿಕೆಯ ಪ್ರಯತ್ನವನ್ನು ಎದುರಿಸಲು ಈ ಸಹಕಾರದ ಪ್ರಸ್ತಾವವಿಟ್ಟಾಗ ಇದೇ ಸರಕಾರ ಯಾವ ಸಕಾರಾತ್ಮಕ ಪ್ರತಿಕ್ರಿಯೆಯನ್ನೂ ತೋರಲಿಲ್ಲ ಎಂಬುದನ್ನುಇಲ್ಲಿ ನೆನಪಿಸಿ ಕೊಳ್ಳಬಹುದು. ಇನ್ನು ಚೀಣಾವಂತೂ ಭಾರತದ ಪ್ರಥಮ ಶತ್ರು ಎಂಬಂತೆ ರಕ್ಷಣಾ ಮಂತ್ರಿಗಳ ಪ್ರಚಾರ, ಸ್ವತ: ಪ್ರಧಾನಮಂತ್ರಿಗಳೇ ಅಮೆರಿಕನ್ ಅಧ್ಯಕ್ಷರಿಗೆ ಹೀಗೆಂದು ಪತ್ರ ಬರೆದು ಪೋಖ್ರಾನ್ ಸ್ಫೋಟವನ್ನು ಸಮರ್ಥಿಸಿಕೊಂಡಿದ್ದರು ತಾನೇ?ಆದರೆ ಈಗ ಅವರೇ ಸಹಕಾರದ ಮಾತಾಡುತ್ತಿದ್ದಾರೆ.ಭಾರತದ ಭವಿಷ್ಯತ್ತಿಗೆ ಚೀಣಾದೊಂದಿಗೆ ಸಹಕಾರ ಅಗತ್ಯ ಎಂದು ಈಗ ಅನಿಸುತ್ತಿದೆಯಾದರೆ ಆಗ ತಾನು ಹಾಗೂ ತನ್ನ ರಕ್ಷಣಾ ಮಂತ್ರಿ ಚೀಣಾ ದೂಷಣೆಯಲ್ಲಿ ತೊಡಗಿದ್ದೇಕೆ ಎಂದು ಪ್ರಧಾನಮಂತ್ರಿಗಳು ಸ್ಪಷ್ಟೀಕರಣ ನೀಡಬಲ್ಲರೇ ಎಂದು ಸುರ್ಜಿತ್ ಪ್ರಶ್ನಿಸಿದ್ದಾರೆ.

ಪೀಡೆ ತೊಲಗುವುದೇ?

ಎರಡು ಬಾರಿ ವಿಶ್ವಾಸ ಮತ ಗೆದ್ದಿದ್ದೇವೆ, ಇನ್ನೊಮ್ಮೆಯೂ ಗೆಲ್ಲುತ್ತೇವೆ ಎಂದು ಬಿಜೆಪಿ ಮುಖಂಡರು ಪೇಸು ಕೊಡುತ್ತಿದ್ದಾರೆ.ತನ್ನ ಬೆಂಬಲಕ್ಕೆ ಪ್ರತಿಯಾಗಿ 'ಪ್ಯಾಕೆಜು'ಗಳನ್ನು ಕಿತ್ತುಕೊಳ್ಳುವ ಮಮತಾ ಬ್ಯಾನರ್ಜಿಯವರೂ ಅದಕ್ಕೆ ದನಿಗೂಡಿಸಿದ್ದಾರೆ. ಮೊದಲ ಬಾರಿ ತೆಲುಗು ದೇಶಂ ಊರುಗೋಲು ಕೊಟ್ಟಿತು, ಎರಡನೇ ಬಾರಿ ಅದೇ ಟಿಡಿಪಿ ಮತ್ತು ಅಕಾಲಿದಳ ಒಕ್ಕೂಟ ತತ್ವ ಕುರಿತಂತೆ ಹಾಕಿದ ತಿಪ್ಪರಲಾಗ ,ಬಿಹಾರದಲ್ಲಿ ದಲಿತರ ಕಗ್ಗೊಲೆಯಿಂದ ಖಿನ್ನಗೊಂಡ ಬಿಎಸ್ಪಿಯ ಬೆಂಬಲ ಸಹಾಯ ಮಾಡಿತು.ಆದರೆ ಈ ಬಾರಿ ಹಾಗಲ್ಲ, ದೇಶದ ಭದ್ರತೆಯ ಪ್ರಶ್ನೆಯಿದೆ.ಅಡ್ಮಿರಲ್ ಭಾಗವತ್ ಹೇಳುವುದನ್ನು ನಂಬಬಹುದಾದರೆ, ದೇಶದ ರಕ್ಷಣಾಮಂತ್ರಿ ರಕ್ಷಣಾವ್ಯವಹಾರಗಳಲ್ಲೇ ಅವ್ಯವಹಾರ ಮಾಡಿದ್ದಾರೆ, ಉಗ್ರಗಾಮಿ ಗುಂಪುಗಳಿಗೆ ನೆರವಾಗುತ್ತಿದ್ದಾರೆ. ಸಹಜವಾಗಿ ಸಂಸತ್ತಿನ ಮುಂದೆ ಇದು ಬಂದಾಗ ಎಲ್ಲಾ ಸಂಸತ್ ಸದಸ್ಯರ ದೇಶಪ್ರೇಮದ ಅಗ್ನಿಪರೀಕ್ಷೆ ನಡೆಯಲಿದೆ.ಜಂಟಿ ಸಂಸದೀಯ ಸಮಿತಿ ರಚಿಸಬೇಕೆಂಬ ನಿಲುವಳಿ ಸೂಚನೆ ಬಿಜೆಪಿಯ ಅಧಿಕಾರಕ್ಕೆ ಕುನೆ ಹಾಕಲೂ ಬಹುದು. ಹಾಗಾದರೆ ದೇಶಕ್ಕೊಂದು ಪೀಡೆ ತೊಲಗಿದಂತೆ, ಏಕೆಂದರೆ ಜನಸಾಮಾನ್ಯರು ಈ ಸರಕಾರದ ಜನ-ವಿರೋಧಿ, ಶ್ರೀಮಂತ-ಪರ, ರಾಷ್ಟ್ರೀಯ ಐಕ್ಯತೆ-ವಿರೋಧಿ ಹಾಗೂ ಸಾಮ್ರಾಜ್ಯಶಾಹಿ-ಪರ ನೀತಿಗಳಿಂದ ಸಾಕಷ್ಟು ಸಂಕಟ ಗಳನ್ನು ಅನುಭವುಸಿದ್ದಾರೆ ಎಂದು ಸುರ್ಜಿತ್ ಹೇಳಿದ್ದಾರೆ.

ಆದರೆ ಇದರರ್ಥ ಎಡಪಕ್ಷಗಳು ಮೂರನೇ ಪರ್ಯಾಯಕ್ಕಾಗಿ ಹೋರಾಟವನ್ನು ಬಿಟ್ಟುಬಿಡಬೇಕೆಂದಲ್ಲ. ಸದ್ಯ ಯಾವುದೇ ರಾಜಕೀಯ ಬದಲಾವಣೆ ನಡೆದರೂ ದೇಶದ ಭವಿಷ್ಯತ್ತಿಗೆ ಮೂರನೇ ಪರ್ಯಾಯ ಅತ್ಯಗತ್ಯ ಎಂದು ಸ್ಪಷ್ಟಪಡಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಮುಂಬರುವ ನಿರ್ಣಾಯಕ ದಿನಗಳಲ್ಲಿ ಎಡ ಪ್ರಜಾಪ್ರಭುತ್ವವಾದಿ ಹಾಗೂ ದರ್ಮನಿರಪೇಕ್ಷ ಶಕ್ತಿಗಳು ಒಂದು ಆಂದೋಲನ ಹರಿಯಬಿಟ್ಟು ಈ ಸರಕಾರವನ್ನು ಅದರ ದುರಾಡಳಿತ ಕ್ಕಾಗಿ ಕಟಕಟೆಯಲ್ಲಿ ನಿಲ್ಲಿಸಬೇಕು, ರಾಷ್ಟ್ರೀಯ ಐಕ್ಯತೆ ಧರ್ಮನಿರಪೇಕ್ಷತೆ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಬೆಂಬಲಿಸುವ ಶಕ್ತಿಗಳನ್ನು ಕ್ರೋಢೀಕರಿಸಬೇಕು ಎಂದು ಕರೆ ನೀಡಿದ್ದಾರೆ.

ದೇಶದ ಕೃಷಿ ಮತ್ತು ದೇಶೀ ಉದ್ದಿಮೆಯನ್ನು ಇನ್ನಷ್ಟು ನಲುಗಿಸಲಿರುವ ಬಿಜೆಪಿ ಸರಕಾರದ ಆಮದು - ರಫ್ತು ನೀತಿ

ಸಿಪಿಐ(ಎಂ), ಕಿಸಾನ್ ಸಭಾ ಖಂಡನೆ

ಬೇಕಾಬಿಟ್ಟಿ ಆಮದು ಉದಾರೀಕರಣದಲ್ಲಿ ತೊಡಗಿರುವ ಬಿಜೆಪಿ ನೇತೃತ್ವದ ಸರಕಾರದ ವಾಣಿಜ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಏಪ್ರಿಲ್ 1 ರಂದು ಪ್ರಕಟಿಸಿದ ವಾರ್ಷಿಕ ಆಮದು - ರಫ್ತು ನೀತಿ ವ್ಯಾಪಾರ ಕೊರತೆಯನ್ನು ಇನ್ನಷ್ಟು ಹದಗೆಡಿಸುತ್ತದೆ, ಕೃಷಿ ಮತ್ತು ದೇಶೀ ಉದ್ದಿಮೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಇದು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಶ್ರೀಮಂತ ದೇಶಗಳ ಗುಂಪು -7 ನ್ನು ಸಂತುಷ್ಟಗೊಳಿಸುವ ಆತುರದಿಂದ ಪ್ರಕಟಿಸಿದ ನೀತಿ ಎಂದು ಅದು ಟೀಕಿಸಿದೆ.

ಹೆಗಡೆಯವರು ಪ್ರಕಟಿಸಿದ ಈ ನೀತಿಯಲ್ಲಿ 894 ಐಟಂಗಳನ್ನು ಮುಕ್ತ ಆಮದು ಪಟ್ಟಿಗೆ ವರ್ಗಾಯಿಸಲಾಗಿದೆ. ಇನ್ನೂ 414 ಐಟಂಗಳನ್ನು ಮಿತಿಯಿರುವ ಪಟ್ಟಿಯಿಂದ ತೆಗೆಯಲಾಗಿದೆ. ಸ್ಥಳೀಯ ಉದ್ದಿಮೆ ಮತ್ತು ಕೃಷಿಯ ಮೇಲೆ ಈಗಾಗಲೇ ಬಹಳ ವಿನಾಶಕಾರಿ ಪರಿಣಾಮ ಬೀರಿರುವ ಉದಾರೀಕರಣ ನೀತಿಯ ಮುಂದುವರಿಕೆ ಇದು ಎಂದು ಸಿಪಿಐ(ಎಂ) ಹೇಳಿದೆ. ಆಮದು ನೀತಿಗಳಿಂದ ಮುಕ್ತಗೊಳಿಸಿದ 414 ಐಟಂಗಳಲ್ಲಿ ಅರ್ಧಕ್ಕಿಂತ ಹೆಚ್ಚು. ಕೃಷಿ ಉತ್ಪನ್ನಗಳು. ಇವುಗಳಲ್ಲಿ ಭಾರತದಲ್ಲಿ ಬೆಳೆಯುವ ಹೆಚ್ಚಿನ ತರಕಾರಿಗಳು, ಹಣ್ಣುಗಳು, ಬೆಳೆಗಳು ಸೇರಿವೆ. ಹಾಲು ಮತ್ತು ಸಾಗರ ಉತ್ಪನ್ನಗಳನ್ನೂ ಬಿಟ್ಟಿಲ್ಲ. ಇದರಿಂದ ಈಗಾಗಲೇ ಬೆಲೆಗಳಲ್ಲಿ ತೀವ್ರ ಕುಸಿತದಿಂದ ಸಂಕಟ ಪಡುತ್ತಿರುವ ರೈತಾಪಿ ಜನಗಳ ಮೇಲೆ ಅತ್ಯಂತ ಹೆಚ್ಚು ಪರಿಣಾಮ ಬೀರಲಿದೆ.

ರಫ್ತುಗಳು ಇಳಿಮುಖವಾಗುತ್ತಿರುವಾಗ ಇಂತಹ ಬೇಕಾಬಿಟ್ಟಿ ಉದಾರೀಕರಣದಿಂದ ಈಗಾಗಲೇ ವಿಪರೀತ ಮಟ್ಟ ತಲುಪಿರುವ ವ್ಯಾಪಾರ ಕೊರತೆ ಇನ್ನಷ್ಟು ಹೆಚ್ಚಲಿದೆ. ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಸಂಬಂಧಪಟ್ಟಂತೆ ಮಿತಿಯಿರುವ ಪಟ್ಟಿಯಲ್ಲಿರುವ ಐಟಂಗಳನ್ನು ಮುಕ್ತ ಆಮದಿಗೆ ತೆರೆದಿರುವುದು ಇನ್ನೊಂದು ಪ್ರತಿಗಾಮಿ ಕ್ರಮ. ಕಳೆದ ವರ್ಷದ ವ್ಯಾಪಾರ ರಂಗದಲ್ಲಿ ಶೋಚನೀಯವಾಗಿ ವಿಫಲಗೊಂಡ ನಂತರ ಪ್ರಸಕ್ತ ಧೋರಣೆ ದೇಶ ಎದುರಿಸುತ್ತಿರುವ ಆರ್ಥಿಕ ಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಲಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ನೀತಿಯನ್ನು ತಡೆಹಿಡಿಯಬೇಕು ಹಾಗೂ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಪಡಿಸಿದೆ.

ರೈತ ವಿರೋಧಿ, ದೇಶ-ವಿರೋಧಿ ನೀತಿಯನ್ನು ಪ್ರತಿಭಟಿಸಿ

ಅಖಿಲ ಭಾರತ ಕಿಸಾನ್ ಸಭಾ 1308 ಐಟಂಗಳ ಮೇಲೆ ಆಮದು ಮಿತಿಗಳನ್ನು ತೆಗೆದಿರುವುದನ್ನು ಬಲವಾಗಿ ಪ್ರತಿಭಟಿಸಿದೆ. ಇದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಕೃಷಿ ಉತ್ಪನ್ನಗಳು. ಹಲವು ಬೆಳೆಗಳ ಬೆಲೆಗಳು ಕುಸಿದಿರುವಾಗ, ವಿಪರೀತ ಏರುಪೇರು ಇರುವಾಗ ಸರಕಾರ ಇಂತಹ ನಿರ್ಣಯ ಕೈಗೊಂಡಿರುವುದು ಇನ್ನಷ್ಟು ಕುಸಿತಕ್ಕೆ, ತೀವ್ರ ಏರುಪೇರಿಗೆ ಕಾರಣವಾಗುತ್ತದೆ. ಈಗಾಗಲೇ ಹತ್ತಿ ಮತ್ತಿತರ ಬೆಳೆಗಳ ಬೆಲೆಗಳ ಕುಸಿತದಿಂದ ದೇಶದ ಹಲವು ಭಾಗಗಳಲ್ಲಿ ರೈತರು ಆತ್ಮಹತ್ಯೆಗಿಳಿಯುವಂತಾಗಿದೆ. ಈ ಹೊಸ ನೀತಿ ಭಾರತೀಯ ಕೃಷಿಯ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸಿ ರೈತಾಪಿ ಜನಗಳ ಬದುಕಿಗೆ ಇನ್ನಷ್ಟು ಸಂಕಟಗಳನ್ನು ತರಲಿದೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಎಸ್.ರಾಮಚಂದ್ರನ್ ಪಿಳ್ಳೆಯವರು 'ವಿಶ್ವ ವ್ಯಾಪಾರ ಸಂಘಟನೆ ಬಯಸುವ ಆಮದಿನ 'ಪ್ರಮಾಣದ ಮೇಲಿನ ಮಿತಿಗಳನ್ನು ಕ್ರಮೇಣ ತೆಗೆಯಲು 2003 ರ ವರೆಗೆ ಅಂದರೆ ಇನ್ನೂ ನಾಲ್ಕು ವರ್ಷಗಳಿರುವಾಗ ಇಂತಹ ನಿರ್ಣಯ ಕೈಗೊಳ್ಳಲಾಗಿದೆ' ಎಂದು ನೆನಪಿಸಿದ್ದಾರೆ. ಸರಕಾರ ರೈತರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿ ವಿಶ್ವ ವ್ಯಾಪಾರ ಸಂಘಟನೆಯಂತಹ ಅಂತರ್ರಾಷ್ಟ್ರೀಯ ಕಂಪನಿಗಳು ಮತ್ತು ಸಾಮ್ರಾಜ್ಯಶಾಹಿಗಳಿಗೆ ನೆರವಾಗಲು ಬಹಳ ಮುಂದೆ ಹೋಗುತ್ತಿವೆ ಎಂದು ಅವರು ಟೀಕಿಸಿದ್ದಾರೆ.

ಕೇಂದ್ರ ಸರಕಾರದ ಈ ರೈತ-ವಿರೋಧಿ, ದೇಶ-ವಿರೋಧಿ ಕ್ರಮವನ್ನು ಪ್ರತಿಭಟಿಸಲು ಮುಂದೆ ಬರಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ರೈತಾಪಿ ವರ್ಗಕ್ಕೆ ಆಗ್ರಹ ಪಡಿಸಿದೆ.

ಯುಗೋಸ್ಲಾವಿಯ ಮೇಲೆ ನಾಟೋ ಪಡೆಗಳ ಧಾಳಿ

ಅಮೆರಿಕನ್ ಸಾಮ್ರಾಜ್ಯಶಾಹಿ ಆಕ್ರಮಣಕೋರತನದ ನಗ್ನ ಅಭಿವ್ಯಕ್ತಿ

ಸಿಪಿಐ(ಎಂ) ಖಂಡನೆ

ಯುಗೋಸ್ಲಾವಿಯಾ ಮೇಲೆ ಅಮೆರಿಕನ್ ನೇತೃತ್ವದಲ್ಲಿ ನಾಟೋ ಪಡೆಗಳ ನಗ್ನ ಮಿಲಿಟರಿ ಧಾಳಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಈ ಅಪ್ರಚೋದಿತ ಕಾರ್ಯಾಚರಣೆ ತನ್ನ ಜಾಗತಿಕ ಯಜಮಾನಿಕೆಯನ್ನು ಹೇರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಆಕ್ರಮಣಕೋರತನದ ಒಂದು ನಗ್ನ ಅಭಿವ್ಯಕ್ತಿ ಎಂದು ಅದು ವರ್ಣಿಸಿದೆ.

ಒಂದು ದೇಶದ ಮೇಲೆ ತನ್ನ ರಾಷ್ಟ್ರೀಯ ಹಿತಾಸಕ್ತಿಗಳು ಹಾಗೂ ಸಾರ್ವಭೌಮತೆಗೆ ವಿರುದ್ಧವಾದ ಒಂದು 'ಒಪ್ಪಂದ'ವನ್ನು ಒಪ್ಪುವಂತೆ ಬಲವಂತ ಮಾಡುವುದಕ್ಕಾಗಿ ಮಿಲಿಟರಿ ಆಕ್ರಮಣ ನಡೆಸುವುದು ಅಂತರ್ರಾಷ್ಟ್ರೀಯ ಕಾನೂನಿನಲ್ಲಿ ಅಭೂತಪೂರ್ವವಾದ ಒಂದು ಘಟನೆ. ಕೊಸೋವೊ ಅಲ್ಬೇನಿಯನ್ನರ ಸಮಸ್ಯೆಯನ್ನು ತನ್ನ ರಾಷ್ಟ್ರೀಯ ಸಾರ್ವಭೌಮತೆಯ ಚೌಕಟ್ಟಿನೊಳಗೆ ಆ ಪ್ರದೇಶಕ್ಕೆ ಸ್ವಾಯತ್ತತೆ ನೀಡಿ ಇತ್ಯರ್ಥ ಮಾಡುವ ಇಚ್ಛೆಯನ್ನು ಯುಗೋಸ್ಲಾವಿಯ ಸ್ಪಷ್ಟವಾಗಿ ಹೇಳಿತ್ತು.

ಪುಟ 7 ನೋಡಿ

ಕಳ್ಳರಿಗೆ ಮತ್ತೊಂದು ಸಮಾಧಾನ ಯೋಜನೆ

ತೆರಿಗೆ ಕಳ್ಳರಿಗೆ ಸ್ವಯಂ ತೆರಿಗೆ ಘೋಷಣೆ ಯೋಜನೆ ಮತ್ತು ಸಮಾಧಾನ್ ಗಳಂತಹ ಸಮಾಧಾನ ಮಾಡುವ ಯೋಜನೆಗಳು ಆಗಲೇ ಬಂದವು. ತೆರಿಗೆ ಕಳ್ಳರಿಗೆ ಪ್ರೋತ್ಸಾಹ ನೀಡಿ ಅವರ ಅಪರಾಧಗಳನ್ನು ಸಿಂಧುಗೊಳಿಸುವ ಕೆಲಸವನ್ನು ಸರ್ಕಾರಗಳು ಆಗಲೇ ಮಾಡಿವೆ. ಈಗ ಅಂತಹುದೇ ಯೋಜನೆಯೊಂದನ್ನು ರಫ್ತುದಾರರಿಗಾಗಿ ಜಾರಿಗೆ ತರಲು ಸರ್ಕಾರ ಯೋಜಿಸುತ್ತಿದೆಯಂತೆ. ಹೊಸ ಆಮದು ರಫ್ತು ನೀತಿಯಲ್ಲಿ ಇಂತಹ ಸಮಾಧಾನ ಕಾಣಿಸಿಕೊಳ್ಳುವ ಲಕ್ಷಣಗಳು ಆಗಲೇ ಇವೆ.

ರಫ್ತನ್ನು ಪ್ರೋತ್ಸಾಹಿಸಲು ಆಗಲೇ ಹಲವಾರು ಯೋಜನೆಗಳು ಜಾರಿಯಲ್ಲಿವೆ. ಈ ರಫ್ತು ಪ್ರೋತ್ಸಾಹಕ ಯೋಜನೆಗಳ ಲಾಭ ಪಡೆದವರು ರಫ್ತು ಮಾಡಲು ಬದ್ಧರು. ಆದರೆ ಮೊದಲೇ ಈ ಯೋಜನೆಗಳ ಫಲ ಅನುಭವಿಸಿದವರು ಆಮೇಲೆ ರಫ್ತು ಮಾಡವಲ್ಲಿ ವಿಫಲರಾದರೆ? ಆದರೆ ರಫ್ತು ಮಾಡುವ ಹೆಸರಿನಲ್ಲಿ ಅನುಕೂಲ ಪಡೆದು ರಫ್ತು ಮಾಡಲಿಲ್ಲ ಎಂದರ್ಥ. ಇದು ಒಂದು ತರಹದಲ್ಲಿ ದೇಶದ್ರೋಹ. ರಫ್ತಿನಿಂದ ವಿದೇಶೀ ವಿನಿಮಯ ಹರಿದು ಬಂದು ದೇಶದ ಆರ್ಥಿಕಕ್ಕೆ ಚೇತನ ನೀಡುತ್ತದೆ ಎಂಬುದು ನಿರೀಕ್ಷೆ. ಈ ನಿರೀಕ್ಷೆಯಿಂದಲೇ ಅವರಿಗೆ ಅನುಕೂಲಗಳನ್ನು ನೀಡುವುದು. ಇದು ದೇಶದ ಆರ್ಥಿಕಕ್ಕೆ ಒಂದು ಹೊರೆ. ಈ ಹೊರೆ ಹೊತ್ತು ಆರ್ಥಿಕ ಅದರಿಂದಾಗುವ ಲಾಭವನ್ನು ಪಡೆಯುವಂತಾಗಬೇಕು.

ಈಗ ಇಂತಹ ಬದ್ಧತೆಗಳನ್ನು ಪೂರೈಸದೇ ಹೋಗಿರುವ ಪ್ರಕರಣಗಳಲ್ಲಿ ಸರ್ಕಾರದ ಖಜಾನೆಗೆ ಹಾನಿಯಾಗಿ ತಕರಾರುಗಳು ಹುಟ್ಟಿಕೊಂಡಿವೆ. ಒಂದು ಅಂದಾಜಿನ ಪ್ರಕಾರ ಇಂತಹ ಐದು ಲಕ್ಷ ತಕರಾರುಗಳಿದ್ದು ಸುಮಾರು 40000 ಕೋಟಿ ರೂಪಾಯಿಗಳು ಇಲ್ಲಿ ಸಿಕ್ಕಿ ಹಾಕಿಕೊಂಡಿದೆಯಂತೆ. ಆಮದು-ರಫ್ತು ಮತ್ತು ಅಬ್ಕಾರಿ ಸುಂಕಗಳಿಂದ 1.7 ಲಕ್ಷ ಪ್ರಕರಣಗಳಲ್ಲಿ ಇನ್ನೊಂದು 12000 ಕೋಟಿ ರೂಪಾಯಿಗಳು ಒಳಗೊಂಡಿವೆಯಂತೆ.

ನಿಜವಾಗಿಯೂ ಬಹುದೊಡ್ಡ ಮೊತ್ತದ ಹಣ ಇಲ್ಲಿ ಒಳಗೊಂಡಿದೆ. ಹೀಗೆ ಇಲ್ಲಿ ಸಮಾಧಾನ ನೀಡಿದರೆ ದೇಶಕ್ಕೆ ಯಾವ ತರಹದ ಹಾನಿ ಆಗಬಹುದು? ಈ ಬಗ್ಗೆ ಉದಾರ ನಿಲುವು ತಳೆದು ಬಂಡವಾಳಿಗರಿಗೆ ಅತ್ಯಂತ ದೊಡ್ಡ ಪ್ರಮಾಣದ ಪರಿಹಾರ ನೀಡುವ ಹುನ್ನಾರ ಬಿಜೆಪಿ ಸರ್ಕಾರದ್ದು ಎಂದು ಬೇರೆ ಹೇಳಬೇಕಾಗಿಲ್ಲ. ಭ್ರಷ್ಟಾಚಾರವೇ ಮೈವೆತ್ತಿ ಬಂದಂತಿರುವ ಸರ್ಕಾರ ಇಂತಹ ದೊಡ್ಡ ಮೊತ್ತದ ಬಗ್ಗೆ ನಿರ್ಧಾರ ತೆಗೆದುಕೊಂಡು ಬಂಡವಾಳಿಗರಿಗೆ ಬಹುದೊಡ್ಡ ಬಹುಮಾನ ನೀಡಿದರೆ ಆಶ್ಚರ್ಯವೇನಿಲ್ಲ. ಇದೂ ಸ್ವದೇಶಿ ಎಂದು ಹೊಗಳಿಕೊಳ್ಳಬಹುದೇನೊ?



ರಂಗೋಲೆಯ ಕೆಳಗೆ ನುಸುಳುವವರು

ಬಹುರಾಷ್ಟ್ರೀಯ ಕಂಪನಿಗಳು ತಾವು ದೇಶ ಕೊಳ್ಳೆ ಹೊಡೆಯುವುದರ ಜೊತೆಗೆ ತಮ್ಮ ಉದ್ಯೋಗಿಗಳೂ ಭಾರತ ಸರ್ಕಾರಕ್ಕೆ ಆದಾಯಕರ ತೆರದಂತೆ ನೋವು ನೀಡುತ್ತಿದ್ದಾರೆ. ಕಂಪನಿಗಳು ತಮ್ಮ ಉದ್ಯೋಗಿಗಳ ಆದಾಯದ ಮೇಲಿನ ತೆರಿಗೆಯನ್ನು ಮೂಲದಲ್ಲೇ ಹಿಡಿದು ಸರ್ಕಾರಕ್ಕೆ ಪಾವತಿ ಮಾಡಬೇಕು. ಇದು ಆದಾಯ ತೆರಿಗೆ ನಿಯಮದ ಪ್ರಕಾರ ಕಡ್ಡಾಯ. ಭಾರತೀಯ ಕಂಪನಿಗಳು ಇದನ್ನು ಮಾಡುತ್ತವೆ. ಯಾಕೆಂದರೆ ಅವು ತಪ್ಪಿಸಿ ಕೊಳ್ಳುವಂತಿಲ್ಲ.

ಆದರೆ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಕೇಂದ್ರ ಕಛೇರಿ ಭಾರತದ ಹೊರಗಿದೆ ಎಂಬ ನೆಪವೊಡ್ಡಿ ತೆರಿಗೆಯನ್ನು ಹಿಡಿಯುತ್ತಿಲ್ಲ. ಅಂದರೆ ಈ ಕಂಪನಿಗಳ ಉದ್ಯೋಗಿಗಳ ಆದಾಯತೆರಿಗೆ ಸರ್ಕಾರಕ್ಕೆ ಬರುತ್ತಿಲ್ಲ. ಸದ್ಯಕ್ಕಿರುವ ಕಾನೂನಿನ ಪ್ರಕಾರ ಈ ಕಂಪನಿಗಳು ತೆರಿಗೆ ತೆರುವಂತೆ ಬಲವಂತ ಮಾಡಲುಬಾರದು.

ಈ ಬ.ಕ.ಗಳ ಉದ್ಯೋಗಿಗಳ ವಿರುದ್ಧವೇ ಪ್ರಕರಣಗಳನ್ನು ದಾಖಲು ಮಾಡಿ ತೆರಿಗೆ ವಸೂಲು ಮಾಡಲು ಸಾಧ್ಯ. ಆದರೆ ಸರ್ಕಾರಕ್ಕೆ ಆ ಧೃಢ ಸಂಕಲ್ಪ ಇರಬೇಕು. ವಿದೇಶಿ ಹೂಡಿಕೆಗಾಗಿ ಕಂಡ ಕಂಡವರ ಷರತ್ತುಗಳಿಗೆಲ್ಲ ತಲೆಬಾಗಿ ಒಪ್ಪಿಕೊಳ್ಳುತ್ತಿರುವ ಸರ್ಕಾರ ಇಂತಹ ಕ್ರಮಗಳಿಂದ ವಿದೇಶೀ ಕಂಪನಿಗಳು ಕೋಪಗೊಳ್ಳಬಹುದೆಂದು ಭಯಗೊಂಡಿದೆಯಂತೆ. ಆದ್ದರಿಂದಲೇ ಯಾವುದೇ ಕ್ರಮವನ್ನು ಕೈಗೊಳ್ಳುವ ಸ್ಥಿತಿಯಲ್ಲಿ ಅದಿಲ್ಲ. ಬಹುರಾಷ್ಟ್ರೀಯ ಕಂಪನಿಗಳು ದೇಶದ ಅತ್ಯಂತ ಪ್ರತಿಭಾವಂತರನ್ನು ತಮ್ಮ ಸೇವೆಗೆ ಸುಲಭವಾಗಿ ಬಳಸಿಕೊಳ್ಳುವ ಅವಕಾಶವನ್ನು ಇದು ಒದಗಿಸಿ ಕೊಟ್ಟಿದೆ. ಇದೂ ಉದಾರೀಕರಣದ ಆರ್ಥಿಕದ ಒಂದು ಫಲ ಅಲ್ಲವೇ?

ಬಡರೈತರ ಭಾಗ್ಯದೇಳಿಲ್ಲದ ಸಾಲ

ಬಡರೈತರಿಗೇಕೆ ಸಾಲ ಎಂದು ಕೇಳಬಹುದು. ಈ ದೇಶದ ಜನಕೋಟಿಗೆ ಬೇಕಾಗುವಷ್ಟು ಆಹಾರ ಬೆಳೆಯ ಬೇಕಾದರೆ ಸಣ್ಣ ರೈತರೆ ಹೆಚ್ಚಿಗೆ ಬೆಳೆಯುವಂತಾಗಬೇಕು. ಬಡರೈತರು ಹೆಚ್ಚು ಬೆಳೆಯಲು ಭೂಮಿಗೆ ಅವರು ಲಾಗುವಾಡು ಹಾಕುವಂತಾಗಬೇಕು. ಲಾಗುವಾಡು ಹಾಕಲು ಬಂಡವಾಳ ಬೇಕು. ಈ ಬಂಡವಾಳಕ್ಕಾಗಿ ಸಾಲ ಬೇಕು ಎಂತಹ ಸಾಲ ಬೇಕು? ಕಡಿಮೆ ಬಡ್ಡಿದರದಲ್ಲಿ ಸುಲಭವಾಗಿ ಈ ಸಾಲ ದೊರೆಯುವಂತಾಗಬೇಕು. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳ ಮೇಲಾದರೂ ಬಡ ರೈತರಿಗೆ ಸಾಂಸ್ಥಿಕ ಸಾಲ ಬೇಕಾದ ಪ್ರಮಾಣದಲ್ಲಿ ಇಂದಿಗೂ ದೊರೆಯುತ್ತಿಲ್ಲ. ಹಣಕಾಸು ವಲಯದ ಉದಾರೀಕರಣ ಒಂದು ಆದ್ಯತೆಯ ವಲಯಕ್ಕೆ ಆದ್ಯತೆ ಹೊರಟು ಹೋದ ಮೇಲೆ ಪರಿಸ್ಥಿತಿ ಇನ್ನೂ ಬಿಗಡಾಯಿಸಿದೆ.

ಈಗಿರುವ ಪರಿಸ್ಥಿತಿಯಲ್ಲಿ ಪ್ರತಿ ಹೆಕ್ಟೇರ್ ಜಮೀನಿಗೆ ಅಂದರೆ ಪ್ರತಿ ಎರಡೂವರೆ ಎಕರೆ ಜಮೀನಿಗೆ ಸಿಗುವ ಸಾಲ ಎಷ್ಟು ಗೊತ್ತೆ? ಕೇರಳದಂತಹ ರಾಜ್ಯದಲ್ಲಿ ಅದು 5207 ರೂಪಾಯಿಗಳಾದರೆ ಅಸ್ಸಾಮಿನಲ್ಲಿ ಇದು ಬರೀ 24 ರೂಪಾಯಿ!!

ಇದರರ್ಥ ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರು ಸ್ಥಳೀಯ ಲೇವಾದೇವಿಗಾರರ ಮೇಲೆ / ಜಮೀನುದಾರರ ಮೇಲೆ ಸಾಲಕ್ಕಾಗಿ ಅವಲಂಬಿಸುತ್ತಾರೆ. ಈ ಸಾಲಗಳಿಗೆ ಶೇ. 36 ಅಥವಾ ಇನ್ನೂ ಹೆಚ್ಚು ಬಡ್ಡಿ ತೆರುತ್ತಾರೆ. ಬಂದ ಆದಾಯದಲ್ಲಿ ದೊಡ್ಡ ಪ್ರಮಾಣ ಬಡ್ಡಿಗೇ ಹೋದ ಮೇಲೆ ಉಳಿಯುವುದು ಏನೂ ಇಲ್ಲ. ಅಥವಾ ಬಹಳ ಕಡಿಮೆ. ಉಪವಾಸ ಇಲ್ಲವೆ ಅರೆ ಹೊಟ್ಟೆ.

ಇಂತಹ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತಿದೆ ಉದಾರೀಕರಣ!

ಕರ್ನಾಟಕದಲ್ಲಿ ಬರಲಿದೆ: ವಿದ್ಯುತ್ ದರ ಹೆಚ್ಚಳದ ಇನ್ನೊಂದು ಕಂತು

ಆಗಲೇ ಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಘೋಷಿಸಿಬಿಟ್ಟಿದ್ದಾರೆ ಕರ್ನಾಟಕದಲ್ಲಿ ವಿದ್ಯುತ್ ದರಗಳು ಹೆಚ್ಚಾಗಲಿದೆ ಎಂದು. ಈ ವರ್ಷದ ಜೂನ್ 1 ನೇ ತಾರೀಖಿನಿಂದ ವಿದ್ಯುತ್ ದರ ಶೇ. 13 ರಷ್ಟು ಹೆಚ್ಚಾಗಲಿದೆಯಂತೆ.

ಇದಕ್ಕೆ ಈಗಾಗಲೇ ವಿರೋಧ ಬರತೊಡಗಿದೆ. ಬಂಡವಾಳಿಗರ ಸಂಘಟನೆಯಾದ ಎಫ್‌ಕೆಸಿಸಿಐ ಔದ್ಯಮಿಕ ವಾತಾವರಣವನ್ನೇ ಇದು ರಾಜ್ಯದಾದ್ಯಂತ ಹದಗೆಡಿಸುತ್ತದೆ ಎಂದು ಹೇಳಿದೆ.

ಸಣ್ಣ ಕೈಗಾರಿಕೆಗಳ ಸಂಘಟನೆ ಕಾಶಿಯಾ ಸಹ ಇಂತಹ ಬೆಲೆ ಹೆಚ್ಚಳದ ವಿರುದ್ಧ ಪ್ರತಿಭಟಿಸಿದೆ.

ಆದರೆ ಉದಾರೀಕರಣದ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಜೆ.ಹೆಚ್. ಪಟೇಲರ ಸರ್ಕಾರಕ್ಕೆ ಬೇರೆ ಸಾಧ್ಯತೆಗಳನ್ನು ಪರೀಕ್ಷಿಸಿ ಬೆಲೆ ಹೆಚ್ಚಳವನ್ನು ತಡೆಗಟ್ಟುವ ಮನಸ್ಸು ಖಂಡಿತ ಇಲ್ಲ ಆದ್ದರಿಂದ ಬೆಲೆ ಹೆಚ್ಚಳ ಭದ್ರವಾಗಿದೆ ಅಲ್ಲವೇ?

ಎನ್ರಾನ್ ಎರಡನೇ ಹಂತಕ್ಕೆ ಸ್ವದೇಶೀ ಸರ್ಕಾರದ ಒಪ್ಪಿಗೆ

ಎನ್ರಾನ್‌ನ ಎರಡನೇ ಹಂತಕ್ಕೆ ಈಗ ಎಲ್ಲ ತರಹದ ಅನುಮೋದನೆ ನೀಡಲಾಗುತ್ತಿದೆ. ಕೇಂದ್ರದ ವಿದ್ಯುತ್ ಮಂತ್ರಾಲಯ ಈ ಯೋಜನೆಗೆ ಅನುಮೋದನೆ ನೀಡಿದೆ. ಮಹಾರಾಷ್ಟ್ರದ ಸರ್ಕಾರ ಈಗ ಬ್ಯಾಂಕ್ ಗ್ಯಾರಂಟಿಗಳನ್ನು ನೀಡಲು ಮುಂದೆ ಬಂದಿದೆ.

ದೇಶದ ವಿದ್ಯುತ್ ವಲಯವನ್ನೇ ಹಾಳು ಮಾಡುವಂತಹ ಆ ಮೂಲಕ ದೇಶದ ಔದ್ಯಮೀಕರಣಕ್ಕೆ ಹಾಗೂ ಆ ಮೂಲಕ ಇಡೀ ಆರ್ಥಿಕಕ್ಕೇ ಹೊಡೆತ ನೀಡಲಿರುವ ಈ ಯೋಜನೆಗೆ ಕೇಂದ್ರದ ಬಿಜೆಪಿಯ ಸರ್ಕಾರ ಪೂರ್ಣ ನೆರವನ್ನು ನೀಡಹೊರಟು ತನ್ನ 'ಸ್ವದೇಶೀ' ನೀತಿ ಎಂದರೆ ಏನು ಎಂಬುದನ್ನು ಸ್ಪಷ್ಟಪಡಿಸಿದೆ ಅಲ್ಲವೆ?

ಕಾಮಧೇನುಗಳ ದಫನ್‌ಗೆ ತಜ್ಞರ ಗುಂಪು

ಸಾರ್ವಜನಿಕ ವಲಯದ ಉದ್ದಿಮೆಗಳ ಪುನರುಜ್ಜೀವನಕ್ಕಾಗಿ ತಜ್ಞರ ಗುಂಪೊಂದನ್ನು ನೇಮಿಸುವುದಾಗಿ ಸರ್ಕಾರ ಹೇಳಿದೆ. ಸ್ವಯಂ ನಿವೃತ್ತಿ ಯೋಜನೆ ಯನ್ನು ಒಪ್ಪಿಕೊಳ್ಳಲು ಕೊನೆ ದಿನಾಂಕವನ್ನು ಮೂರು ತಿಂಗಳುಗಳ ವರೆಗೆ ವಿಸ್ತರಿಸುವುದಾಗಿಯೂ ಅದುಹೇಳಿದೆ.

ಸಿಪಿಐ(ಎಂ) ಲೋಕಸಭಾ ಸದಸ್ಯ ಬಸುದೇಬ್ ಆಚಾರ್ಯ ಅವರ ಪ್ರಶ್ನೆಗೆ ಈ ಉತ್ತರ ನೀಡಿರುವ ಸರ್ಕಾರ ಯಾವ ಘಟಕಗಳನ್ನು ಪುನರುಜ್ಜೀವನಗೊಳಿಸಲು ಸಾಧ್ಯವೊ ಅದನ್ನು ಖಂಡಿತ ಪುನರುಜ್ಜೀವನಗೊಳಿಸಲಾಗುವುದು ಎಂದು ಹೇಳಿದೆ. ಹಾಗೆ ಪುನರುಜ್ಜೀವನ ಗೊಳಿಸುವುದಾದರೆ ಸ್ವಯಂ ನಿವೃತ್ತಿ ಯೋಜನೆಯ ಪ್ರಶ್ನೆ ಏಳುವುದಿಲ್ಲ. ಆದರೆ ಸರ್ಕಾರದ ಮುಖ್ಯ ಒತ್ತು ಈ ಯೋಜನೆಯ ಮೇಲೆ ಇದೆ ಎಂದರೆ ಪುನರುಜ್ಜೀವನಗೊಳಿಸುವ ಮಾತು ಬರೀ ತೋರಿಕೆಯದು ಎಂಬುದು ಸ್ಪಷ್ಟ.

ಬಂಡವಾಳಿಗರ, ಸಾಮ್ರಾಜ್ಯಶಾಹಿ ಗಳ ಒತ್ತಡಕ್ಕೆ ಮಣಿದು ನಮ್ಮ ದೇಶದ ಆರ್ಥಿಕದ ಕಾಮಧೇನುಗಳಾದ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಣ್ಣು ಮಾಡುವ ಉದ್ದೇಶವನ್ನು ಅದು ಹೊಂದಿರುವುದು ಸ್ಪಷ್ಟವಲ್ಲವೆ?

ಉದ್ಯೋಗಾವಕಾಶ ನಿರ್ಮಾಣ ಸಾಮಾಜಿಕ ವಲಯದ ವಿಸ್ತರಣೆ

ಪಶ್ಚಿಮ ಬಂಗಾಳದ ಬಜೆಟ್ ಮುಂದಿಟ್ಟ ಗುರಿ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಹಣಕಾಸು ಮಂತ್ರಿ ಡಾ. ಅಸೀಮ್ ದಾಸ್‌ಗುಪ್ತಾ ಮಾರ್ಚ್ 26 ರಂದು ಮಂಡಿಸಿದ ರಾಜ್ಯದ 1999-2000 ರ ಬಜೆಟ್ ಉದ್ಯೋಗಾವಕಾಶ ನಿರ್ಮಾಣ ಹಾಗೂ ಸಾಮಾಜಿಕ ವಲಯದ ವಿಸ್ತರಣೆಗೆ ಪ್ರಮುಖ ಒತ್ತು ನೀಡಿದೆ.

ರಾಷ್ಟ್ರೀಯ ಮಟ್ಟದಲ್ಲಿ ಅಂಗೀಕರಿಸಿದ ಐ.ಎಂ.ಎಫ್. ನ ಉದಾರೀಕರಣ, ಸುಧಾರಣೆಯ ಧೋರಣೆ ಜನಸಾಮಾನ್ಯರ, ದೇಶದ ಮೂಲಭೂತ ಸಮಸ್ಯೆಗಳಾದ ನಿರುದ್ಯೋಗ, ಹಣದುಬ್ಬರ, ಸಾಮಾಜಿಕ ವಲಯದಲ್ಲಿ ಕೊರತೆಗಳು - ಇವನ್ನೆಲ್ಲಾ ಪರಿಹರಿಸುವಲ್ಲಿ ವಿಫಲಗೊಂಡಿರುವ ಹಿನ್ನೆಲೆಯಲ್ಲಿ ಎಡರಂಗ ಅನುಸರಿಸಿಕೊಂಡು ಬಂದ ಪರ್ಯಾಯ ಧೋರಣೆ ಹಾಗೂ ಸುಧಾರಣೆಯ ನಿರ್ದಿಷ್ಟ ಕ್ರಮಗಳು ಹಿಂದಿನ ಬಜೆಟ್‌ಗಳಂತೆ ಈ ರಾಜ್ಯ ಬಜೆಟ್‌ನಲ್ಲೂ ಎದ್ದು ಕಂಡಿದೆ. 'ಸ್ಪರ್ಧೆಯತ್ತ, ವಿಶೇಷವಾಗಿ ಆಂತರಿಕ ಆರ್ಥಿಕದ ಸಂಬಂಧಪಟ್ಟ ವಲಯಗಳಲ್ಲಿ ಪರಿಣಾಮಕಾರಿ ಚಾಲನೆ ನೀಡುವುದು, ಪಂಚಾಯತು ಮಟ್ಟದವರೆಗೆ ಅಧಿಕಾರಗಳ ವಿಕೇಂದ್ರೀಕರಣ' ಈ ಬಜೆಟ್ ನ ಸ್ತಂಭಗಳು ಎಂದು ಡಾ. ದಾಸ್‌ಗುಪ್ತಾ ಹೇಳಿದ್ದಾರೆ.

ಉದ್ಯೋಗ ವಿಸ್ತರಣೆ ಹೇಗೆ?

ಉದ್ಯೋಗಾವಕಾಶ ನಿರ್ಮಾಣದ ಹೆಚ್ಚಿನ ಬೆಳವಣಿಗೆಗೆ ಡಾ. ದಾಸ್‌ಗುಪ್ತಾರ ಬಜೆಟ್ ಪ್ರಸ್ತಾವ ಹೆಚ್ಚಿನ ಒತ್ತು ನೀಡಿದೆ. ಇದಕ್ಕಾಗಿ ಕೃಷಿ ಉತ್ಪಾದನೆಯ ತ್ವರಿತ ವಿಸ್ತರಣೆಗೆ ಒತ್ತು ನೀಡಲಾಗಿದೆ. ಇದಕ್ಕಾಗಿ ಭೂಸುಧಾರಣೆಯೊಂದಿಗೆ ನೀರಾವರಿ ಸೌಲಭ್ಯಗಳ ವಿಸ್ತರಣೆ, ಉತ್ತಮಪಡಿಸಿದ ಬೀಜಗಳು, ಗೊಬ್ಬರಗಳನ್ನು ಒದಗಿಸಲಾಗುವುದು. ಈ ವರ್ಷ 1.20 ಲಕ್ಷ ಹೆಕ್ಟೇರ್ ಜಮೀನನ್ನು ನೀರಾವರಿಯಡಿ ತರಲಾಯಿತು.

ಇವೆಲ್ಲದರ ಒಟ್ಟು ಪರಿಣಾಮವಾಗಿ ನೀರಾವರಿಗೊಳಪಟ್ಟ ಕೃಷಿ ಜಮೀನಿನ ಪ್ರಮಾಣ 1977 - 78 ರಲ್ಲಿ ಎಡರಂಗ ಅಧಿಕಾರ ವಹಿಸಿಕೊಳ್ಳವಾಗ 31% ಇದ್ದದ್ದು ಈಗ 1998-99 ರಲ್ಲಿ 58% ಕ್ಕೇರಿದೆ. ಇನ್ನು ಮೂರು ವರ್ಷಗಳಲ್ಲಿ ಒಂಭತ್ತನೇ ಯೋಜನೆಯ ಅಂತ್ಯದ ವೇಳೆಗೆ ಇದನ್ನು 66% ಕ್ಕೇರಿಸಲಾಗುವುದು ಎಂದರು ಡಾ. ದಾಸ್‌ಗುಪ್ತಾ. ಮುಂದಿನ ಒಂದು ವರ್ಷಗಳಲ್ಲಿ ಇನ್ನೂ 2 ಲಕ್ಷ ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಹೀಗೆ ನೀರಾವರಿ ಸೌಲಭ್ಯ ವಿಸ್ತರಿಸಲು ಮತ್ತು ಕೃಷಿಯ ಬೆಳವಣಿಗೆಗೆ, ಜತೆಗೆ ಸಂಬಂಧಪಟ್ಟ ಕೈಗಾರಿಕಾ ಚಟುವಟಿಕೆಗಳು ವಿಸ್ತರಿಸಲು ಗ್ರಾಮೀಣ ವಿದ್ಯುದೀಕರಣ ಬಹಳ ಮಹತ್ವಪೂರ್ಣವಾದದ್ದು. ಆದ್ದರಿಂದ ವಿದ್ಯುತ್ ಉತ್ಪಾದನೆಯ ವಾರ್ಷಿಕ ಯೋಜನಾ ವೆಚ್ಚವನ್ನು 1577 ಕೋಟಿ ರೂ.ಗಳಿಂದ 2011 ಕೋಟಿ ರೂ.ಗಳಿಗೆ ಏರಿಸಲಾಗುತ್ತಿದೆ. ಗ್ರಾಮೀಣ ವಿದ್ಯುದೀಕರಣಕ್ಕೆಂದೇ 120 ಕೋಟಿ ರೂ.ಗಳನ್ನು ನೀಡಲಾಗಿದೆ. ಇವೆಲ್ಲಾ ಕ್ರಮಗಳಿಂದಾಗಿ ಪಶ್ಚಿಮ ಬಂಗಾಳ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ದೇಶದಲ್ಲೇ ಉನ್ನತ ಸ್ಥಾನದಲ್ಲಿದೆ.

ಕೈಗಾರಿಕಾ ರಂಗದಲ್ಲಿ

ರಾಜ್ಯದ ಕೈಗಾರಿಕಾ ರಂಗದಲ್ಲಿ ಸಕಾರಾತ್ಮಕ ಬೆಳವಣಿಗೆ ಮುಂದುವರೆದಿದೆ. ವಿದ್ಯುತ್ ಅಲ್ಲದೆ ಇದರ ಮೂಲರಚನೆಯ ಬೆಳವಣಿಗೆಗೆ ದೊಡ್ಡ ಮೊತ್ತ ಎತ್ತಿಡಲಾಗಿದೆ. ಕೃಷಿ ಮತ್ತು ಕೈಗಾರಿಕೆಯ ತ್ವರಿತ ವಿಸ್ತರಣೆಗೆ ವಾರ್ಷಿಕ ಯೋಜನಾ ಗಾತ್ರವನ್ನು 4950 ಕೋಟಿ ರೂ.ಗಳಿಂದ 6289 ಕೋಟಿ ರೂ.ಗಳಿಗೆ ಏರಿಸಲಾಗಿದೆ. ಇದರಲ್ಲಿ 50% ಹೆಚ್ಚು ಮೊತ್ತದ ಬಗ್ಗೆ ನಿರ್ಣಯ ಮಾಡುವಲ್ಲಿ ಪಂಚಾಯತುಗಳು ನಗರಸಭೆಗಳು ನೇರವಾಗಿ ಭಾಗವಹಿಸುತ್ತವೆ. ಮುಂದಿನ ವರ್ಷಗಳಲ್ಲಿ ರಾಜ್ಯದ ಒಟ್ಟು ಉತ್ಪಾದನೆಯ ಬೆಳವಣಿಗೆಯ ಗುರಿ 7.5% ಇದು ರಾಷ್ಟ್ರೀಯ ಮಟ್ಟದಲ್ಲಿನ ಬೆಳವಣಿಗೆಗಿಂತ ಬಹಳ ಹೆಚ್ಚು.

ಶಿಕ್ಷಣದ ವಿಸ್ತರಣೆ

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಒಂಭತ್ತನೇ ಯೋಜನೆಯ ಅಂತ್ಯದ ವೇಳೆಗೆ ಇನ್ನೂ 8000 ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗುವುದು. ಇವುಗಳೊಂದಿಗೆ ಪಂಚಾಯತು ಸಮಿತಿಗಳು ಹಾಗೂ ಗ್ರಾಮ ಶಿಕ್ಷಣ ಸಮಿತಿಗಳ ನೆರವಿನಿಂದ 'ಮಕ್ಕಳ ಶಿಕ್ಷಣ ಕೇಂದ್ರ' ಗಳನ್ನು ತೆರೆಯಲಾಗುವುದು. ಈ ವರ್ಷ ಇಂತಹ 4000 ಕೇಂದ್ರಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ ತೆರೆಯಲಾಗುವುದು ಎಂದು ಹಣಕಾಸು ಮಂತ್ರಿಗಳು ಹೇಳಿದರು. ಪ್ರತಿಯೊಂದು ಬ್ಲಾಕಿನಲ್ಲಿ ಒಂದು ಉನ್ನತ ಪ್ರೌಢಶಾಲೆ ಯಲ್ಲಿ ವೃತ್ತಿಪರ ತರಬೇತಿ ಕೇಂದ್ರವನ್ನು ತೆರೆಯಲಾಗುವುದು. ಶಿಕ್ಷಣಕ್ಕಾಗಿ ನೀಡುವ ಮೊತ್ತ ಕಳೆದ ವರ್ಷದ 208 ಕೋಟಿ ರೂ.ಗಳಿಂದ 296 ಕೋಟಿ ರೂ.ಗಳಿಗೆ ಏರಿಸಲಾಗಿದೆ.

ಮುಚ್ಚಿದ ಘಟಕಗಳ ಕಾರ್ಮಿಕರಿಗೆ

ಮುಚ್ಚಿದ, ಲಾಕೌಟ್ ಆದ ಘಟಕಗಳ ಕಾರ್ಮಿಕರಿಗೆ ಮಾಸಿಕ 500 ರೂ. ವೇತನ ನೀಡುವ ಯೋಜನೆಯನ್ನು ಮುಂದುವರೆಸಲಾಗುವುದು. ಡನ್‌ಲಪ್ ಕಾರ್ಖಾನೆ ಕಾರ್ಮಿಕರಿಗೆ ಇದನ್ನು ವಿಸ್ತರಿಸಲಾಗುವುದು. ಇದುವರೆಗೆ 183 ಮುಚ್ಚಿದ ಘಟಕಗಳ 25800 ಕಾರ್ಮಿಕರು 20 ಕೋಟಿ ರೂ. ಗಳನ್ನು ಈ ಮೂಲಕ ವೆಚ್ಚ ಮಾಡಲಾಗಿದೆ.

ಅಲ್ಲದೆ ಈ ರಾಜ್ಯ ಬಜೆಟ್ ಮುಚ್ಚಿದ ಖಾಸಗೀ ವಲಯದ ಕಾರ್ಖಾನೆಗಳನ್ನು ತೆರೆಯಲೆಂದು 100 ಕೋಟಿ ರೂ.ಗಳನ್ನು ನೀಡಿವೆ. ಅಲ್ಲದೆ ಸ್ವಯಂ ಸಹಾಯ ಗುಂಪುಗಳ ರಚನೆಗೆ 150 ಕೋಟಿ ರೂ.ಗಳನ್ನು ತೆಗೆದಿಡಲಾಗಿದೆ. ಇದು 'ಸಹಕಾರಿ ವಲಯದೊಳಗಿನ ಸಹಕಾರೀ ವಲಯ' ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಸಣ್ಣ ಪ್ರಮಾಣದ ಉದ್ಯಮಿಗಳಿಗೆ, ವ್ಯಾಪಾರಸ್ಥರಿಗೆ, ರೈತರಿಗೆ ಸಾಲ ವಿತರಣೆಯನ್ನು ವಿಕೇಂದ್ರೀಕರಿಸಿ ರಾಜ್ಯದ ಆರ್ಥಿಕಕ್ಕೆ ಒಂದು ಬಲವಾದ ನೆಲೆ ಒದಗಿಸುವುದು ಇದರ ಅರ್ಥ.

ಜನಗಳಿಗಾಗಿ

ಬಜೆಟ್ ರಸ್ತೆ ಬೆಳವಣಿಗೆಗಾಗಿ 594 ಕೋಟಿ ರೂ. ಕೊಟ್ಟಿದ್ದು ಈ ಇಡೀ ಯೋಜನೆ ಅತ್ಯಂತ ವಿಕೇಂದ್ರೀಕೃತ ರೀತಿಯಲ್ಲಿ ಜಾರಿಗೆ ಬರಲಿವೆ. ಚುನಾಯಿತ ಪಂಚಾಯತು ಸಂಸ್ಥೆಗಳು, ಸಾರ್ವಜನಿಕ ಕಾಮಗಾರಿ ಇಲಾಖೆ ಹಾಗೂ ಫಲಾನುಭವಿಗಳ ಸಮಿತಿಗಳು ಸೇರಿ ರಸ್ತೆಗಳನ್ನು ಹಾಕುವ ಹಾಗೂ ಅವುಗಳ ಉಸ್ತುವಾರಿ ನೋಡಿಕೊಳ್ಳುವ ಯೋಜನೆಯದು.

ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಹೆಚ್ಚಿನ ಸಬ್ಸಿಡಿ ನೀಡಲಾಗಿದೆ. 180 ಕೋಟಿ ರೂ.ಗಳನ್ನು ಇದಕ್ಕೆ ಕೊಡಲಾಗಿದೆ. ಇನ್ನು ಪಶ್ಚಿಮ ಬಂಗಾಳದಲ್ಲಿ ಪಡಿತರ ವ್ಯವಸ್ಥೆಯ ಮೂಲಕ ಸಣ್ಣ ಹಾಗೂ ಸಹಕಾರಿ ವಲಯದಲ್ಲಿ ತಯಾರಿಸಿದ ವಿದ್ಯುತ್ ಬಲ್ಬ್‌ಗಳು, ಸೋಪುಗಳು, ಬಟ್ಟೆಗಳು ದೊರೆಯುತ್ತವೆ. ಸಾರ್ವಜನಿಕ ಆರೋಗ್ಯಕ್ಕೆ 124 ಕೋಟಿ ರೂ. ನೀಡುವುದಲ್ಲದೆ ಆರೋಗ್ಯ ಸೇವೆಗಳಲ್ಲಿ ಗುಣಾತ್ಮಕ ಬದಲಾವಣೆ ತರಲು ಇನ್ನೂ 235 ಕೋಟಿ ರೂ.ಗಳನ್ನು ನೀಡಲಾಗಿದೆ.

ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಈ ಬಜೆಟ್‌ನಲ್ಲಿ 94 ಕೋಟಿ ರೂ.ಗಳ ತೆರಿಗೆ ಪ್ರಸ್ತಾಪಗಳಿವೆ. ಬಜೆಟ್‌ನ ಕೊರತೆ 16 ಕೋಟಿ ರೂ.ಗಳು ಮಾತ್ರ.

ಕೋಳೂರಿನಲ್ಲಿ ಸಿಪಿಐ(ಎಂ) ಸತ್ಯಶೋಧನ ತಂಡ

ಬಳ್ಳಾರಿ ತಾಲೂಕ ಕೋಳೂರು ಗ್ರಾಮದಲ್ಲಿ ಮಾರ್ಚ್ 19 ಹಾಗೂ 20 ರಂದು ಮೇಲ್ಜಾತಿ ಜನಾಂಗದವರು ಹಾಗೂ ಹರಿಜನರ ನಡುವೆ ನಡೆದ ಘರ್ಷಣೆಯು ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿಯನ್ನು ಉಂಟು ಮಾಡಿದೆ.

ಈ ಬಗ್ಗೆ ಸತ್ಯಶೋಧನೆಗಾಗಿ ಹಾಗೂ ಗ್ರಾಮದಲ್ಲಿ ಶಾಂತಿಯುತ ಪರಿಸ್ಥಿತಿ ನಿರ್ಮಾಣ ಗೊಳಿಸಲು ಸಿಪಿಐ(ಎಂ) ನಿಯೋಗವು ಗ್ರಾಮಕ್ಕೆ ಬೇಟಿನೀಡಿತ್ತು ಈ ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ. ಗುರುಶಾಂತ್, ರಾಜ್ಯ ಸಮಿತಿ ಸದಸ್ಯರಾದ ಹೆಚ್. ಬಸವರಾಜ್ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಎಸ್. ಪ್ರಸನ್ನ ಕುಮಾರ್ ಹಾಗೂ ಜಿಲ್ಲಾ ಸಮಿತಿ ಸದಸ್ಯರಾದ ಪಿ.ಆರ್. ವೆಂಕಟೇಶ್, ವಿ.ಎಸ್. ಶಿವಶಂಕರ್, ಗಾದಿಲಿಂಗಪ್ಪ ಇವರು ಒಳಗೊಂಡಿದ್ದರು.

ನಿಯೋಗವು ಗ್ರಾಮದ ಎಲ್ಲಾ ಜಾತಿ ಜನಾಂಗಗಳಿಗೆ ಸೇರಿದ ಜನರನ್ನು ಬೇಟಿ ಮಾಡಿ ಚರ್ಚಿಸಿತು. ಗ್ರಾಮದಲ್ಲಿ ಈಗಲೂ ಉದ್ವಿಗ್ನ ಪರಿಸ್ಥಿತಿ ಮುಂದುವರೆದಿದೆ. ಒಂದು ಜನಾಂಗದ ಮೇಲೆ ಮತ್ತೊಂದು ಜನಾಂಗದವರು ಧಾಳಿ ಮಾಡಬಹುದೆಂಬ ಗಾಬರಿಯ ಪರಿಸ್ಥಿತಿ ಇದೆ. ಈ ಘರ್ಷಣೆಗೆ ತಕ್ಷಣದ ಪ್ರಚೋದನೆಗಳು ಒಂದು ಕಾರಣವಾಗಿದ್ದರೆ ಮತ್ತೊಂದು ಕಡೆ ದೀರ್ಘಕಾಲದ ಜಾತಿ ಬೇದಭಾವನೆಗಳು ಮತ್ತು ಅಸ್ಪೃಶ್ಯತಾ ಆಚರಣೆಯು ಕಾರಣವಾಗಿವೆ ಎಂಬುದು ಮೇಲ್ನೋಟಕ್ಕೆ ಕಂಡು ಬರುವ ಸಂಗತಿಯಾಗಿದೆ.

ತೀವ್ರ ಭಯದ ವಾತಾವರಣವಿರುವ ಕಾರಣ ಹಲವು ಹರಿಜನ ಕುಟುಂಬಗಳು ಊರು ಬಿಟ್ಟು ಆತ್ಮರಕ್ಷಣೆಗಾಗಿ ಹೋಗಿರುವುದು ಕಂಡು ಬಂದಿದೆ. ಮೇಲ್ಜಾತಿಯ ಗುಂಪು ಹರಿಜನ ಕೇರಿಗೆ ನುಗ್ಗಿ ಧಾಳಿ ನಡೆಸಿದ ಕಾರಣ ದಿಂಧಾಗಿ ಭಯ ಭೀತಿ ಪರಿಸ್ಥಿತಿ ಉಂಟಾ ಗಿರುತ್ತದೆ. ಈಗಲೂ ಹೊಲಗದ್ದೆ ಗಳಲ್ಲಿ ಕುರಿ ಹಾಗೂ ಧನ ಕಾಯಲು ಮತ್ತು ಸೌದೆ ತರಲು, ತಪ್ಪಿಸಿಕೊಂಡ ಜಾನುವಾರು ಗಳನ್ನು ಹುಡುಕಲು ಹೋದ ಕೆಲ ಹರಿಜನ ಹುಡುಗರ ಮೇಲೆ ವಿನಾಕಾರಣ ಹಲ್ಲೆ ಮಾಡುವುದು ಇನ್ನೂ ಕೂಡ ಮುಂದು ವರೆದಿರುವುದು ತಿಳಿದು ಬಂದಿದೆ.

ಈ ಘರ್ಷಣೆಯಲ್ಲಿ ಹರಿಜನರಿಗೆ ಸೇರಿದ ಸುಮಾರು 7 ಗುಡಿಸಲುಗಳು ಹಾಗೂ ಎರಡು ಹುಲ್ಲಿನ ಬಣವೆಗಳು ಸುಟ್ಟು ಬೂದಿಯಾಗಿವೆ. ಹಾಗೂ ಹಲವು ಜನರಿಗೆ ತೀವ್ರ ಗಾಯಗಳಾಗಿವೆ. ಕೃಷಿ ಹಾಗೂ ಜನ ಜೀವನದಿಂದ ಬಹಿಷ್ಕರಿಸಲ್ಪಡುವ ಭಯ ಹರಿಜನರ ಕುಟುಂಬ ಗಳನ್ನು ಆವರಿಸಿದೆ. ಒಟ್ಟು ಘಟನೆಯ ಹಿನ್ನೆಲೆಯಲ್ಲಿ ಮೇಲ್ಜಾತಿಯ ಜನರ ನಡುವೆಯೂ ಆತಂಕದ ವಾತಾವರಣ ಕಂಡು ಬಂದಿದೆ. ಅಲ್ಲದೇ ಹರಿಜನರ ನಡುವೆ ಕೂಲಿ ಕೆಲಸ ದೊರೆಯದ ಆರ್ಥಿಕ ಅ ಭದ್ರತೆ ಭೀತಿ ಬೆನ್ನಟ್ಟಿದೆ.

ಈ ಹಿನ್ನಲೆಯಲ್ಲಿ ಸಿಪಿಐ(ಎಂ) ಪಕ್ಷದ ನಿಯೋಗವು ಗ್ರಾಮದಲ್ಲಿ ಶಾಂತಿ ಸೌಹಾರ್ಧತೆ, ಸಾಮಾನ್ಯ ಜನ ಜೀವನ ಪರಿಸ್ಥಿತಿ ನಲೆಗೊಳ್ಳಲು ಕೆಳಗಿನಂತೆ ಸರಕಾರ ಕ್ರಮ ಕೈಗೊಳ್ಳಲು ಒತ್ತಾಯಿಸಿದೆ.

- ಗ್ರಾಮದಲ್ಲಿ ತಕ್ಷಣ ಶಾಂತಿ ನೆಲೆಸಲು ಹಾಗೂ ಆತಂಕದ ಪರಿಸ್ಥಿತಿ ನಿವಾರಿಸಲು ಕೂಡಲೇ ಉನ್ನತ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ಒಳಗೊಂಡಂತೆ ಗ್ರಾಮದ ಎಲ್ಲಾ ಜಾತಿಗಳ ಮುಖ್ಯಸ್ತರು ಸೇರಿದಂತೆ ಶಾಂತಿ ಸಭೆಯನ್ನು ನಡೆಸುವುದು.
- ಇಡೀ ಪ್ರಕರಣದ ಹಿಂದೆ ಹಲವಾರು ಅಂಶಗಳು ಒಳಗೊಂಡಿರುವುದರಿಂದ ಒಟ್ಟು ಪ್ರಕರಣವನ್ನು ನ್ಯಾಯಾಂಗ ವಿಚಾರಣೆಗೆ ಒಳಪಡಿಸಿ ತಪ್ಪಿತಸ್ತರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.
- ಭಯಭೀತರಾದ ಹಾಗೂ ಊರು ಬಿಟ್ಟು ಹೋದ ಹರಿಜನ ಕುಟುಂಬಗಳು ತಮ್ಮ ಗ್ರಾಮಕ್ಕೆ ಮರಳಿ ಸೌಹಾರ್ದದಿಂದ ವಾಸಿಸಲು ಅನುವಾಗುವಂತೆ ರಕ್ಷಣೆ ಒದಗಿಸಬೇಕು.
- ಗುಡಿಸಲು ಸುಟ್ಟ ಹರಿಜನ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಬೇಕು. ಹಾಗೂ ನಷ್ಟವಾದ ಸಾಮಾನು ಸರಂಜಾಮುಗಳಿಗೆ ಪರಿಹಾರ ಒದಗಿಸಬೇಕು. ಸುಟ್ಟ ಬಣವಿಗಳಿಗೆ ಪರಿಹಾರ ನೀಡಬೇಕು.
- ಬಹಿಷ್ಕಾರದ ಬೀತಿಗೆ ಒಳಗಾದ ಕೂಲಿಕಾರರಿಗೆ ಕೂಲಿ ಕೆಲಸವನ್ನು ಒದಗಿಸಲು ಅಗತ್ಯ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿಗಳು ಕೂಡಲೇ ಆರಂಭಿಸಬೇಕು.
- ಅಸ್ಪೃಶ್ಯತೆ ಆಚರಣೆ ಹಾಗೂ ಜಾತಿ ಬೇದ ಆಚರಣೆಗಳನ್ನು ತೊಲಗಿಸಲು ಕಾನೂನುಬದ್ಧ ಹಾಗೂ ಇತರೇ ಸೂಕ್ತ ದೃಡ ಕ್ರಮಗಳು ಕೈಗೊಳ್ಳ ಬೇಕು.
- ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಸರಕಾರ ವಹಿಸಬೇಕು.
- ಎಲ್ಲಾ ಹಬ್ಬಗಳ ಸಂದರ್ಭದ ಹಿಂದು ಮುಂದಿನ ದಿನಗಳು ಸೇರಿ ಎಲ್ಲಾ ಹಳ್ಳಿಗಳಲ್ಲಿ ಮಧ್ಯಪಾನ ನಿಷೇದ ಮಾಡಬೇಕು.

ಬಾಗೇಪಲ್ಲಿಯಲ್ಲಿ ಹಲ್ಲೆ ಸಿಪಿಐ(ಎಂ) ಖಂಡನೆ

ಮಾರ್ಚ್ 4 ರಂದು ಬಾಗೇಪಲ್ಲಿ ತಾಲ್ಲೂಕು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ತಾಲ್ಲೂಕು ಸಮಿತಿ ಸಭೆ ಸೇರಿ ಮಾರ್ಚ್ 3 ರಂದು ದೇವಿಕುಂಟೆಯ ಹತ್ತಿರ ಪಕ್ಷದ ಕಾರ್ಯಕರ್ತನಾದ ಕಾಂ|| ಶ್ರೀನಿವಾಸ್‌ರವರ ಮೇಲೆ ಕಾಂಗ್ರೆಸ್‌ನ ಗೂಂಡಾಗಳೆನಿಸಿಕೊಂಡ ನರಸರಾಜ, ಆನಂದ್ ಬಾಬು ಎಂಬುವರು ಬಂದೂಕು ಮತ್ತು ಬಾಂಬುಗಳಿಂದ ನಡೆಸಿದ ಕೊಲೆ ಯತ್ನವನ್ನು ಖಂಡಿಸಿತು. ಹತಾಶ ಕಾಂಗ್ರೆಸಿಗರು ಕೊಲೆ ಮಾಡುವ ಯತ್ನ ಗಳಿಂದ ಸಿಪಿಐ(ಎಂ)ನ್ನು ತುಳಿಯಬೇಕೆಂಬ ಹುನ್ನಾರ ನಡೆಸುತ್ತಿರುವುದು ಕಾಂಗ್ರೆಸ್ಸಿನ ದಿವಾಳಿಕೋರತನ ಎಂದು ಸಭೆ ಅಭಿ ಪ್ರಾಯಪಟ್ಟಿತು. ಆನಂದ್ ಎಂಬುವರು ಎನ್.ಎಸ್.ಯು.ಐ.ನ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದಾನೆ. ತಕ್ಷಣ ತಲೆಮರೆಸಿ ಕೊಂಡಿರುವ ಆರೋಪಿ ಗಳನ್ನು ಬಂದಿಸಿ ಕಾನೂನಿನ ಕ್ರಮ ಕೈಗೊಳ್ಳ ಬೇಕೆಂದು ತಾಲ್ಲೂಕು ಸಮಿತಿ ಆಗ್ರಹಿಸುವ ತೀರ್ಮಾನ ವನ್ನು ತೆಗೆದು ಕೊಳ್ಳಲಾಯಿತು. 45 ವರ್ಷಗಳ ಕಾಂಗ್ರೆಸಿನ ಆಡಳಿತದಲ್ಲಿ ಅಭಿವೃದ್ಧಿಯನ್ನು ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿಯವರ ನಾಲ್ಕೂವರೆ ವರ್ಷದ ಅವಧಿಯಲ್ಲಿ ನಡೆದ ಅಭಿವೃದ್ಧಿಗೆ ಹೋಲಿಕೆ ಮಾಡಲು ಅಸಾಧ್ಯವಾದ ಪರಿಸ್ಥಿತಿಯನ್ನು ಮನಗಂಡು ಈ ರೀತಿಯ ದುರಾಲೋಚನೆಯನ್ನು ಮಾಡುತ್ತಿರುವುದು ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ಸಿಗೆ ತಕ್ಕುದಲ್ಲವೆಂದು ಸಭೆ ಅಭಿಪ್ರಾಯಪಟ್ಟಿದೆ.

ಬಿಪಿಎಲ್ ಮಹಿಳೆಯರ ಮೇಲಿನ ಹಲ್ಲೆ ಜನವಾದಿ ಮಹಿಳಾ ಸಂಘಟನೆ ಖಂಡನೆ

ಮಾರ್ಚ್ 25 ರಂದು ಸಂಜೆ ಕಾರ್ಖಾನೆಯ ಕೆಲಸ ಮುಗಿಸಿ ಹಿಂತಿರುಗುತ್ತಿದ್ದ ಬಿಪಿಎಲ್ ಕಾರ್ಖಾನೆಯ ಮಹಿಳಾ ಕಾರ್ಮಿಕರಿದ್ದ ಬಸ್ಸನ್ನು ಸುಟ್ಟು ಹಾಕಿದ ಕೃತ್ಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ಹಾಗೂ ಕರ್ನಾಟಕ ರಾಜ್ಯ ಸಮಿತಿಯು ಖಂಡಿಸಿದೆ.

ಕಳೆದ 4,5 ತಿಂಗಳುಗಳಿಂದ ಶಾಂತಿಯುತವಾಗಿ ನಡೆಯುತ್ತಿರುವ ಹೋರಾಟವನ್ನು ಮುರಿಯಲು ಹಾಗೂ ಕಾರ್ಮಿಕರ ಹಾಗೂ ಮುಖಂಡರ ಮೇಲೆ ತಪ್ಪು ಅಭಿಪ್ರಾಯ ಮೂಡಿಸುವ ನಿಟ್ಟಿನಲ್ಲಿ ಕೆಲವು ಮಾಲೀಕರ ಪರವಾದ ಕಿಡಿಗೇಡಿಗಳು ಮಾಡಿರುವ ಈ ಕೃತ್ಯವು ತಲೆತಗ್ಗಿಸುವಂತದ್ದು ಎಂದಿರುವ ಸಂಘಟನೆ ಗಾಯಗೊಂಡ ಮಹಿಳೆಯರು ಆದಷ್ಟು ಬೇಗ ಗುಣಮುಖರಾಗಲಿ ಕಾರ್ಖಾನೆಯ ಸಮಸ್ಯೆಯನ್ನು ಸರ್ಕಾರ ಕೂಡಲೇ ಬಗೆಹರಿಸಲಿ ಎಂದು ಆಶಿಸಿದೆ.

"ವಿದ್ಯುತ್ತಿನ ವೈಜ್ಞಾನಿಕ ಹಂಚಿಕೆಯ ನೀತಿ ರೂಪಿಸಿ"
ಕೋಲಾರ ರೈತರ ಆಗ್ರಹ

ಅನಿಯಮಿತ ವಿದ್ಯುತ್ ನಿಲುಗಡೆ ಮತ್ತು ಕಡಿಮೆ ವೋಲ್ಟೇಜ್ ಸಮಸ್ಯೆಯನ್ನು ತಾತ್ಕಾಲಿಕ ಪರಿಹರಿಸಲು ಸದ್ಯ ಲಭ್ಯ ವಿರುವ ವಿದ್ಯುತನ್ನು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ವೈಜ್ಞಾನಿಕವಾಗಿ ಹಂಚಿಕೆ ಮಾಡುವ ಧೋರಣೆ ಯೊಂದನ್ನು ರಾಜ್ಯ ಸರ್ಕಾರ ತಕ್ಷಣ ಪ್ರಕಟಿಸ ಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಅನಿಯಮಿತ ಮತ್ತು ಕಡಿಮೆ ವೋಲ್ಟೇಜಿನ ವಿದ್ಯುತ್‌ನಿಂದ ರೈತರು ವಿವಿಧ ಬೆಳೆಗಳನ್ನು ಬೆಳೆಯಲು ಕೋಟ್ಯಾಂತರ ರೂ.ಗಳ ಬಂಡವಾಳಗಳನ್ನು ಹಾಕಿ ದಿಕ್ಕೆಟ್ಟಿರುವುದಲ್ಲದೆ, ಸುಟ್ಟು ಹೋಗುತ್ತಿರುವ ಪಂಪ್ ಸೆಟ್ ಮಿಷನ್ ಗಳನ್ನು ರಿಪೇರಿ ಮಾಡಿಸಲು ಸಾವಿರಾರು ರೂ.ಗಳನ್ನು ಸಾಲ ಮಾಡಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಸಂಕಟಮಯವಾದ ಪರಿಸ್ಥಿತಿಯನ್ನು ಸುದಾರಿಸಲು ಹಾಗೂ ಕ್ಷೀಣಿಸುತ್ತಿರುವ ಕೃಷಿ ಉತ್ಪಾದನೆ ಯನ್ನು ಉತ್ತಮಪಡಿಸಲು ಅಗತ್ಯವಿರುವ ಕಡೆ ಹೆಚ್ಚುವರಿ ಟ್ರಾನ್ಸ್‌ಪಾರಂಗಳನ್ನು ಅಳವಡಿಸುವುದು, ಕೆ.ಇ.ಬಿ. ಅಧಿಕಾರಿಗಳು ನೌಕರರು ಹೆಚ್ಚು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ವಿದ್ಯುತ್‌ನ ದುಂದು ವೆಚ್ಚ ತಡೆಯುವುದು ಇತ್ಯಾದಿ ಕ್ರಮ ಗಳೊಂದಿಗೆ ಲಭ್ಯ ವಿದ್ಯುತ್‌ನ ವೈಜ್ಞಾನಿಕ ಹಂಚಿಕೆಯ ನೀತಿಯು ತುರ್ತಾಗಿ ಜಾರಿಯಾಗಬೇಕಿದೆ.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಅತಿ ಮಹತ್ವದ ಅಂಶವಾಗಿರುವ "ವಿದ್ಯುತ್ ಉತ್ಪಾದನ" ಗೆ ಸಂಬಂಧಿಸಿ ರಾಜ್ಯ ಜನತಾ ದಳ ಸರ್ಕಾರದ ವಿಫಲತೆಯನ್ನು ರೈತ ಸಂಘ ಉಗ್ರವಾಗಿ ಖಂಡಿಸಿದೆ. ಆದರೆ ಅದೇ ಸಮಯದಲ್ಲಿ ನಾಲ್ಕು ದಶಕಗಳ ಕಾಲ ಈ ರಾಜ್ಯದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್ ಈ ಸಮಸ್ಯೆಗೆ ಮುಖ್ಯ ಕಾರಣ ಎಂಬುದನ್ನು ಮರೆಯಲು ಸಾಧ್ಯವಿಲ್ಲ ಎಂದೂ ಅದು ಹೇಳಿವೆ.

ಬಹುತೇಕ 70ರ ದಶಕದಿಂದ ವಿದ್ಯುತ್ ಉತ್ಪಾದನೆಗೆ ರಾಜ್ಯದಲ್ಲಿರುವ ಹೇರಳ ಅವಕಾಶಗಳನ್ನು ಉಪಯೋಗಿಸಿ ಕೊಳ್ಳುವುದರಲ್ಲಿ ಕಾಂಗ್ರೆಸ್ ಮತ್ತು ಅನಂತರದ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ.

ಇಂತಹ ಸಂದರ್ಭದಲ್ಲಿ ಸರ್ಕಾರಗಳು ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಬಂಡವಾಳ ಹೂಡಿಕೆಯ ಅಗತ್ಯ ಉಂಟಾಗಿದೆ, ಆದರೆ ಸರ್ಕಾರಗಳು ಈ ದಿಸೆಯಲ್ಲಿ ಬಂಡವಾಳ ಹೂಡಿಕೆಯನ್ನು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡುತ್ತಾ ಬರುತ್ತಿವೆ ಮತ್ತು ವಿದ್ಯುತ್ ಉತ್ಪಾದನೆಯನ್ನು ಪೂರ್ಣವಾಗಿ ಲಾಭಕೋರ ಖಾಸಗಿ ಕಂಪನಿಗಳಿಗೆ ವಹಿಸುತ್ತಿವೆ.

1991 ರಲ್ಲಿ ಕಾಂಗ್ರೆಸ್ ಆರಂಭಿಸಿದ ಈ ಖಾಸಗೀಕರಣ ನೀತಿಯನ್ನು ಜನತಾದಳ ಬೆಂಬಲಿಸಿ ಜಾರಿಮಾಡುತ್ತಿದೆ. ಇತ್ತೀಚಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿಯಂತೂ ಬೇರೆ ಎಲ್ಲಾರಿಗಿಂತ ವೇಗವಾಗಿ ವಿದ್ಯುತ್ ಖಾಸಗೀಕರಣಕ್ಕೆ ಮುನ್ನಡೆಯುತ್ತಿದೆ. ಈ ಧೋರಣೆಗಳಿಂದ ಮುಂದಿನ ದಿನಗಳಲ್ಲಿ ವಿದ್ಯುತ್ ಬಳಕೆದಾರರು ಇನ್ನಷ್ಟು ಸಂಕಷ್ಟಗಳನ್ನು ಎದುರಿಸ ಬೇಕಾಗಿದೆ.

ಈ ಹಿನ್ನೆಲೆಯಲ್ಲಿ ವಿದ್ಯುತ್ ಉತ್ಪಾದನೆಗೆ ಸರ್ಕಾರಗಳು ಹೆಚ್ಚಿನ ಬಂಡವಾಳವನ್ನು ಹೂಡಬೇಕು ವೈಜ್ಞಾನಿಕವಾಗಿ ವಿದ್ಯುತ್ ಹಂಚಿಕೆಯಾಗಬೇಕು, ಅನಿಯಮಿತ ಮತ್ತು ಕಡಿಮೆ ವೋಲ್ಟೇಜ್ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಿರುವ ಇನ್ನಿತರೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿ ○

ಡಿ.ವೈ.ಎಫ್.ಐ. ಸಮ್ಮೇಳನಗಳು

ಬಾಗೇಪಲ್ಲಿ ತಾಲ್ಲೂಕು ಸಮ್ಮೇಳನ:

ಮಾರ್ಚ್ 5 ರಂದು ಬಾಗೇಪಲ್ಲಿ ಚಿತ್ರಾವತಿ ನದಿ ದಡದಲ್ಲಿರುವ ಸುಂದರಯ್ಯ ಭವನದಲ್ಲಿ ಬಾಗೇಪಲ್ಲಿ ತಾಲ್ಲೂಕು ಡಿ.ವೈ.ಎಫ್.ಐ. ಸಮ್ಮೇಳನವನ್ನು ಕ್ಷೇತ್ರದ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿಯವರು ಉದ್ಘಾಟಿಸಿದರು.

1978 ರಲ್ಲಿ ಅಕ್ಟೋಬರ್‌ನಲ್ಲಿ ದೆಹಲಿಯಲ್ಲಿ 32 ಜನರ ಒಂದು ಸಮಾವೇಶವು ಈ ದೇಶದಲ್ಲಿರುವಂತಹ ಅಸಮಾನತೆ, ನಿರುದ್ಯೋಗ, ಅನಕ್ಷರತೆ, ಕಂದಾಚಾರಗಳಂತಹ ಹಲವಾರು ಸಮಸ್ಯೆಗಳ ವಿರುದ್ಧ ಹೋರಾಟ ರೂಪಿಸುವ ಸಲುವಾಗಿ ನಡೆಸಿದ ಚರ್ಚೆಯ ಫಲವೇ ಈ ಡಿ.ವೈ.ಎಫ್.ಐ. ಹುಟ್ಟಿದ್ದು. 32 ಜನರಲ್ಲಿ ನಾನೂ ಕೂಡ ಒಬ್ಬ ಎಂದು ರೆಡ್ಡಿಯವರು ತಿಳಿಸಿದರು.

ದೇಶದಲ್ಲಿ ಯುವಜನರನ್ನು ಜಾತಿ, ಮತ ಭಾಷೆಯ ಆಧಾರದಲ್ಲಿ ವಿಂಗಡಿಸಿ ಅವರ ಒಗ್ಗಟ್ಟನ್ನು ಮುರಿದು ಅವರನ್ನು ತಪ್ಪುದಾರಿಗೆಳೆಯುತ್ತಿರುವುದು ದುರಂತವಾಗಿದೆ. ಅದಕ್ಕೆ ಒಳ್ಳೆಯ ಉದಾಹರಣೆಯೆಂದರೆ ಆರ್.ಎಸ್.ಎಸ್. ವಿಶ್ವಹಿಂದು ಪರಿಷತ್ ಮತ್ತು ಭಜರಂಗದಳದಂತಹ ಸಂಘಟನೆಗಳು.

ಈ ದೇಶದಲ್ಲಿ ಕೋಮುವಾದ ಬೆಳೆಯಲು ಬಿ.ಜೆ.ಪಿ. ಎಷ್ಟು ಕಾರಣವೋ ಕಾಂಗ್ರೆಸ್ ಕೂಡಾ ಅಷ್ಟೇ ಕಾರಣ ಎಂದು ತಿಳಿಸಿ, ದೇಶವನ್ನು 50 ವರ್ಷಗಳ ಸ್ವಾತಂತ್ರ್ಯ ಇತಿಹಾಸದಲ್ಲಿ ಆರ್ಥಿಕವಾಗಿ ದಿವಾಳಿ ಎಬ್ಬಿಸಿ, ಬಡತನ, ನಿರುದ್ಯೋಗ ಹೆಚ್ಚಿಸಿ, ದಿವಾಳಿಯ ಅಂಚಿಗೆ ತೆಗೆದುಕೊಂಡು ಹೋದಾಗ ಯುವಜನತೆ ಬೇಸತ್ತು ಮುಂದಿನ ಪರಿಹಾರ ಹುಡುಕಲು ತಪ್ಪುದಾರಿ ಹುಡುಕುತ್ತಿರುವುದು ವಿಷಾದನೀಯವೆಂದರು. ಯುವಜನರ ಬಲಹೀನತೆಯನ್ನು ಆಸರೆಯಾಗಿ ತೆಗೆದು ಕೊಂಡು ಮತಾಂಧವಾದಿಗಳು ಯುವಜನರನ್ನು ವಿಭಜಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಅವಿದ್ಯಾವಂತ ಯುವಜನತೆಯನ್ನು ಚೈತನ್ಯಶೀಲರನ್ನಾಗಿ ಮಾಡಿ ಇಡೀ ವ್ಯವಸ್ಥೆಯನ್ನು ಅಮೂಲಾಗ್ರ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಹೋರಾಟವನ್ನು ಡಿ.ವೈ.ಎಫ್.ಐ. ರೂಪಿಸಬೇಕೆಂದು ಅವರು ಕರೆ ನೀಡಿದರು.

ರಾಜ್ಯ ಡಿ.ವೈ.ಎಫ್.ಐ. ಉಪಾಧ್ಯಕ್ಷರಾದ ಗೋಪಾಲಕೃಷ್ಣರವರು ಮಾತನಾಡಿ 40 ಲಕ್ಷ ನಿರುದ್ಯೋಗಿಗಳು ಇಂದು ಕರ್ನಾಟಕದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರು ನೋಂದಾಯಿಸಿರುವವರು ಇರುತ್ತಾರೆ. ಹೆಸರು ನೋಂದಾವಣೆ ಮಾಡಿಕೊಳ್ಳದವರು ಲಕ್ಷಾಂತರ ಜನರು ಇದ್ದಾರೆ. ಹೀಗೆ ಇದ್ದರೂ ಸರ್ಕಾರ 35 ಲಕ್ಷ ಉದ್ಯೋಗಗಳನ್ನು ರದ್ದುಮಾಡಿರುವುದು ಶೋಚನೀಯವೆಂದು ವಿಷಾಧಿಸಿದರು. ಒಂದು ವರ್ಷಕ್ಕೆ ಕೋಟಿ ಉದ್ಯೋಗಗಳನ್ನು ಕೊಡುತ್ತೇವೆಂದ ಕೇಂದ್ರ ಸರ್ಕಾರ ಅದರಲ್ಲಿ ವಿಫಲವಾಗಿರುವುದೇ ಅಲ್ಲದೆ, ಇನ್ನಷ್ಟು ನಿರುದ್ಯೋಗ ಸೃಷ್ಟಿಯಾಗಲು ಕಾರಣವಾಗಿದೆ ಎಂದು ವಿಷಾಧಿಸಿದರು. ರೇಷ್ಮೇ ಆಮದಿನಿಂದ ಲಕ್ಷಾಂತರ ಯುವಜನರು ನಿರುದ್ಯೋಗಿ ಗಳಾಗುತ್ತಾರೆ ಎಂದು ವಿಷಾಧಿಸಿದರು. ಗ್ರಾಮೀಣ ಮಟ್ಟದಲ್ಲಿ ವಿದ್ಯುತ್ತು, ಕುಡಿಯುವ ನೀರು, ಆರೋಗ್ಯ ಸೌಲಭ್ಯಗಳಿಗೆ ಸ್ಪಂದಿಸಿ ಡಿ.ವೈ.ಎಫ್.ಐ. ಮತ್ತಷ್ಟು ಬಲಗೊಳ್ಳಲು ಬಲಿಷ್ಟ ಯುವಜನ ಸಂಘಟನೆ ಆಗಲು ಎಲ್ಲ ಪ್ರಯತ್ನಗಳನ್ನು ಮಾಡುವಿರೆಂದು ಶುಭಾಶಯಗಳನ್ನು ಕೋರಿದರು. ಸಮುದಾಯದ ಪಿ. ಒಬಳರಾಜು, ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ಹೆಚ್.ಪಿ. ಲಕ್ಷ್ಮೀ ನಾರಾಯಣ ರವರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ಸಮ್ಮೇಳನದಲ್ಲಿ 12 ಸ್ಥಳೀಯ ಘಟಕಗಳಿಂದ ಮತ್ತು 50 ಹಳ್ಳಿಗಳಿಂದ 145 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಹೊಸ ತಾಲ್ಲೂಕು ಸಮಿತಿಯನ್ನು ರಚಿಸಿ ಕೊಳ್ಳಲು ತೀರ್ಮಾನಿಸಿ 19 ಸದಸ್ಯರ ತಾಲ್ಲೂಕು ಸಮಿತಿಯನ್ನು ಸಮ್ಮೇಳನ ಆಯ್ಕೆಮಾಡಿತು.

ಅಧ್ಯಕ್ಷರಾಗಿ: ಮಹಮದ್ ಅಕ್ರಂ ಹಾಗೂ ಕಾರ್ಯದರ್ಶಿಯಾಗಿ: ಭಾಸ್ಕರರೆಡ್ಡಿ ಆಯ್ಕೆಯಾದರು.

ರಾಜ್ಯ ಉಪಾಧ್ಯಕ್ಷರಾದ ಕಾಂ: ಗೋಪಾಲಕೃಷ್ಣರವರ ಸಮಾರೋಪ ಭಾಷಣದೊಂದಿಗೆ ಸಭೆ ಮುಕ್ತಾಯ ವಾಯಿತು. ಭಾಸ್ಕರ ರೆಡ್ಡಿಯವರು ವಂದನಾರ್ಪಣೆ ಮಾಡಿದರು.

ವಿಜಾಪುರ

ಮಾರ್ಚ್ 25 ರಂದು ಡಿ.ವೈ.ಎಫ್.ಐ. ಜಿಲ್ಲಾ ಮಟ್ಟದ ಸಮಾವೇಶವನ್ನು ಹಿರಿಯ ಸ್ವಾತಂತ್ರ್ಯ ಯೋಧ ಎನ್.ಕೆ. ಉಪಾಧ್ಯಾಯರು ಉದ್ಘಾಟಿಸಿದರು. ನಿರುದ್ಯೋಗ, ಬಡತನ, ಮುಂತಾದವುಗಳ ನಿವಾರಣೆಗೆ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಬಿಟ್ಟು ಹಿಂದೂ ಮತೀಯ ಭಾವನೆಗಳನ್ನು ಕೆರಳಿಸಿ ಯುವಕರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ ಎಂದ ಅವರು ಯುವಕರು ಇಂಥಹ ಅಪಾಯಗಳಿಂದ ದೂರವಿದ್ದು ವಾಸ್ತವಿಕ ಜಲಂತ ಸಮಸ್ಯೆಗಳಾಗಿರುವ ನಿರುದ್ಯೋಗ, ಬಡತನ, ಆರೋಗ್ಯ, ಶಿಕ್ಷಣ, ಸಾರಿಗೆ, ಕುಡಿಯುವ ನೀರು, ರಸ್ತೆ ಸಾರಿಗೆ ವಿದ್ಯುತ್ ಮುಂತಾದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡಬೇಕು ಎಂದು ಯುವಕರಿಗೆ ಕರೆ ನೀಡಿದರು.

ಡಿ.ವೈ.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಕಾಂ|| ಎಸ್.ವೈ. ಗುರುಶಾಂತ್ ಅವರು ಮಾನತಾಡಿ ದೇಶದಲ್ಲಿ ನಡೆಯುತ್ತಿರುವ ಕೋಮು ಘರ್ಷ ದೊಂಬಿ ಗಲಭೆಗಳಲ್ಲಿ ಭಾಗವಹಿಸುವವ ರೆಂದರೆ ಯುವಜನರುಗಳೆ ಜಾಸ್ತಿ, ಇವುಗಳಿಗೆ ಯುವಜನರ ಬಡತನ, ನಿರುದ್ಯೋಗವೇ ಕಾರಣ ಎಂದರು.

ಬ್ಯಾಂಕ್‌ನೌಕರರ ಸಂಘಟನೆಯ ಮುಖಂಡರಾದ ವಿ.ಎಂ. ಕಾಳೆ ಹಾಗೂ ಗೌರಿಶಂಕರ ಗಾಂಧಿಯವರು ಮಾತನಾಡಿದರು.

ಪೌರ ಕಾರ್ಮಿಕರ ಸಂಘಟನೆಯ ನಾಯಕ ವಿ.ಎಂ. ಸೊನ್ನದ ನಿವೃತ್ತ ಶಿಕ್ಷಕರಾದ ಆರ್. ಎಚ್. ಕಲಾದಗಿ ಮಾಸ್ತರರು ಪ್ರಾಂತ ರೈತ ಸಂಘಧ ಜಿಲ್ಲಾ ಅಧ್ಯಕ್ಷರಾದ ಬೀಮಸಿ ಕಲಾದಗಿ ಬಿ.ಡಿ. ಪಾಟೀಲ, ಮುಂತಾದವರು ಮಾತನಾಡಿ ಯುವಜನರ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತರಾಗಿ ಹೋರಾಡಲು ಕರೆ ನೀಡಿದರು.


ಬಸವಲಿಂಗಪ್ಪ ಕವಾಲಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಲಿಂಗರಾಜ ಬಿದರಕುಂದಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಲಕ್ಷ್ಮಿ ಮೈಲಾರಿ ಹಾಗೂ ಸಂಗಡಿಗರ ಕ್ರಾಂತಿ ಗೀತೆಯೊಂದಿಗೆ ಪ್ರಾರಂಭವಾದ ಸಮಾವೇಶವು ಕಾಂ. ಸಿದ್ದಣ್ಣ ಐರೋಡಗಿ ಇವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಎಪ್ರಿಲ್ ನಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ 6 ಜನ ಪ್ರತಿನಿಧಿಗಳನ್ನು ಜಿಲ್ಲಾ ಸಮಾವೇಶವು ಆಯ್ಕೆ ಮಾಡಿತು.

ತಿರುವನಂತಪುರದಲ್ಲಿ ಅಖಿಲ ಭಾರತ ಸಮ್ಮೇಳನ: ಡಿ.ವೈ.ಎಫ್.ಐ. 6ನೇ ಅಖಿಲ ಭಾರತ ಸಮ್ಮೇಳನ ತಿರುವನಂತ ಪುರದಲ್ಲಿ 1999 ಡಿಸೆಂಬರ್ ನಲ್ಲಿ ನಡೆಯುತ್ತದೆ

ಪುಟ 6 ಕ್ಕೆ

ಯುಗೋಸ್ಲಾವಿಯದ ಮೇಲೆ ಒಂದು ವಾರಕ್ಕಿಂತಲೂ ಹೆಚ್ಚು ಮುಂದುವರೆದಿರುವ ನಾಟೋದ ಭೀಕರ ಬಾಂಬ್, ಕ್ಷಿಪಣಿ ದಾಳಿ ಒಂದು ದೇಶದ ಸಾರ್ವಭೌಮತೆಯನ್ನು ಉಲ್ಲಂಘಿಸಿದ ನಗ್ನ ದಾಳಿ. ಮಾತ್ರವಲ್ಲ ಅದು ವಿಶ್ವಸಂಸ್ಥೆಯ ಮೂಲಭೂತ ಒಪ್ಪಂದದ, ಅಂತರ್ರಾಷ್ಟ್ರೀಯ ಕಾನೂನಿನ ನಗ್ನ ಉಲ್ಲಂಘನೆ. ಸೋವಿಯೆತ್ ಒಕ್ಕೂಟ ದಾಳಿಮಾಡಿದರೆ ಎದುರಿಸಲೆಂದು ಮಾಡಿಕೊಂಡ ರಕ್ಷಣಾ ಒಪ್ಪಂದವಾದ ನಾಟೋದ ಸಂವಿಧಾನದ ಉಲ್ಲಂಘನೆ ಕೂಡಾ. ಎರಡು ಮಹಾಯುದ್ಧಗಳ ಕಣವಾಗಿದ್ದ ಯುರೋಪಿನ ಹೃದಯದಂತಿರುವ ಕೇಂದ್ರದಲ್ಲಿರುವ ಯುಗೋಸ್ಲಾವಿಯದಲ್ಲಿ ಗಂಭೀರ ಮಿಲಿಟರಿ ಘರ್ಷಣೆ ಆರಂಭಿಸುವ ಮೂಲಕ, ಅಮೆರಿಕ ಮತ್ತು ಯುರೋಪಿನ ಸಾಮ್ರಾಜ್ಯಶಾಹಿ ಶಕ್ತಿಗಳು ಎರಡನೇ ಮಹಾಯುದ್ಧದ ನಂತರ ಅತ್ಯಂತ ತೀವ್ರವಾದ ಅಪಾಯವನ್ನು ವಿಶ್ವಶಾಂತಿಗೆ ಒಡ್ಡಿವೆ. ನಾಟೋದ ದಾಳಿ ಯುಗೋಸ್ಲಾವಿಯದ ಕೊಸೊವೊ ಅಲ್ಪಸಂಖ್ಯಾತರ ಸಮಸ್ಯೆ ಪರಿಹರಿಸಲಿಕ್ಕಲ್ಲ, ಅದೊಂದು ನೆಪ ಮಾತ್ರ. ಯುರೋಪಿನ ಶತಮಾನಗಳಷ್ಟು ಹಳೆಯದಾದ ಜನಾಂಗೀಯ ವೈಷಮ್ಯಗಳನ್ನು ಬಳಸಿ ಯುರೋಪಿನ ಆಯಕಟ್ಟಿನ ಪ್ರದೇಶವಾದ ಯುಗೋಸ್ಲಾವಿಯದಲ್ಲಿ ನಾಟೋದ ಪಡೆಗಳನ್ನು ನೆಲೆಗೊಳಿಸಲು. ಯುರೋಪ್ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಪ್ರಶ್ನಿಸುವ ಧೈರ್ಯ ಮಾಡುವ ರಾಜಕೀಯ-ಸಾಮಾಜಿಕ ಶಕ್ತಿಗಳನ್ನು ಬೆದರಿಸಲು. ಮೂರನೇ ಮಹಾಯುದ್ಧ ಆರಂಭಿಸುವ ಅಪಾಯ ಹೊಂದಿರುವ ಈ ನಾಟೋ ದಾಳಿಯ ಹಿನ್ನೆಲೆ, ಭೀಕರ ಪರಿಣಾಮಗಳ ಬಗ್ಗೆ ಲೇಖನ.



ಯುಗೋಸ್ಲಾವಿಯಾದ ಮೇಲೆ ನಾಟೋದಾಳಿ

ಅಮೆರಿಕನ್ ಜಾಗತಿಕ ಯಜಮಾನಿಕೆ ಹೇರಲು

ಯುಗೋಸ್ಲಾವಿಯಾ ಯುರೋಪಿನ ಪಶ್ಚಿಮ-ಪೂರ್ವಭಾಗಗಳ ಹೊಸ್ತಿಲಂತೆ ಕೇಂದ್ರ ಪ್ರದೇಶದಲ್ಲಿರುವ ಪುಟ್ಟ ದೇಶ. ಎರಡನೇ ಮಹಾಯುದ್ಧ ಕಾಲದಲ್ಲಿ ಹಿಟ್ಲರನ ಫ್ಯಾಸಿಸ್ಟ್ ದಮನಕ್ಕೆ ಒಳಗಾದ ಇತರ ಕೆಲವು ದೇಶಗಳಂತೆ ಅದರ ವಿರುದ್ಧ ಸೆಣಸಿ ಸ್ವತಂತ್ರವಾದ ದೇಶ. ಯುರೋಪಿನಲ್ಲೇ ಅತ್ಯಂತ ಹೆಚ್ಚು ಜನಾಂಗಗಳನ್ನೊಳಗೊಂಡು ಜನಾಂಗೀಯ ಕಲಹದ ಸುಳಿವಿಲ್ಲದೆ ಇತ್ತೀಚಿನವರೆಗೆ ಶಾಂತಿಯುತ ಬೆಳವಣಿಗೆ ಕಂಡಿದ್ದ ದೇಶ. ಫ್ಯಾಸಿಸಂ ವಿರುದ್ಧ ಸಶಸ್ತ್ರ ರೈತರ ಹೋರಾಟದ ನಾಯಕತ್ವ ವಹಿಸಿದ್ದ ಜೋಸೆಫ್ ಟಿಟೋರ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಸಮಾಜವಾದಿ ವ್ಯವಸ್ಥೆ ಕಟ್ಟಿದರೂ ಸೋವಿಯೆತ್ ಒಕ್ಕೂಟದ ನಾಯಕತ್ವದಲ್ಲಿ ಪೂರ್ವಯುರೋಪಿನ ಸಮಾಜವಾದಿ ದೇಶಗಳು ಕಟ್ಟಿಕೊಂಡ ಮಿಲಿಟರಿ ಆರ್ಥಿಕ ಕೂಟಗಳಿಂದ ದೂರವಿದ್ದು ತನ್ನದೇ ದಾರಿ ತುಳಿದ ದೇಶ. ಅಮೆರಿಕನ್ ನಾಯಕತ್ವದ ನಾಟೋ ಮಿಲಿಟರಿ ಬಣ ಕಟ್ಟಿಕೊಂಡಾಗ ಸೋವಿಯೆತ್ ಒಕ್ಕೂಟದ ನಾಯಕತ್ವದಲ್ಲಿ ಯುರೋಪಿನ ಸಮಾಜವಾದಿ ದೇಶಗಳ ವಾರ್ಸಾ ಒಪ್ಪಂದದ ಮಿಲಿಟರಿ ಕೂಟ ರಚಿಸಿದಾಗ ಆರಂಭವಾದ ಶೀತ ಸಮರ ಕಾಲದಲ್ಲಿ ನೆಹರೂ, ನಾಸೆರ್ ಜತೆ ಸೇರಿ ಯುಗೋಸ್ಲಾವಿಯದ ಟಿಟೋ ಅಲಿಪ್ತ ಚಳುವಳಿಗೆ ನೀಡಿದ ಚಾಲನೆ ಚಾರಿತ್ರಿಕ. ಎರಡನೇ ಮಹಾಯುದ್ಧದ ನಂತರ 50 ವರ್ಷಕ್ಕೂ ಹೆಚ್ಚುಕಾಲ ವಿಶ್ವ ಶಾಂತಿ ಕಾಪಾಡಿಕೊಳ್ಳುವಲ್ಲಿ ಅಲಿಪ್ತ ಚಳುವಳಿಯ ಪಾತ್ರ ಅಪಾರ.

ಏಕೆ ಕಲಹ?

ಇಂತಹ ವಿಶಿಷ್ಟ ದೇಶವಾದ ಯುಗೋಸ್ಲಾವಿಯದಲ್ಲಿ ಏಕೆ ಈ ಜನಾಂಗೀಯ ಕಲಹ? ಅಂತರ್ರಾಷ್ಟ್ರೀಯ ಗಮನವ ಸೆಳೆಯುವಷ್ಟು ವಿದೇಶಿ ಶಕ್ತಿಗಳು ಮಿಲಿಟರಿ ಪ್ರವೇಶ ಮಾಡುವಷ್ಟು ಕಲಹ ಏಕೆ ಎಂಬುದು ಆಶ್ಚರ್ಯವಾಗುತ್ತದೆ. ಆದರೆ ಈ ಎಲ್ಲಾ ಸಮಸ್ಯೆಗಳು ಕಳೆದ ಕೆಲವು ವರ್ಷಗಳಿಂದಷ್ಟೆ. ನಿಖರವಾಗಿ ಹೇಳಬೇಕಾದರೆ ಸೋವಿಯೆತ್ ಒಕ್ಕೂಟದ ಪತನ ಮತ್ತು ಪೂರ್ವಯುರೋಪಿನ ಸಮಾಜವಾದಿ ವ್ಯವಸ್ಥೆಯ ವಿಘಟನೆಯ ನಂತರದ ಬೆಳವಣಿಗೆ. ಬೇರೆ ಸಮಾಜವಾದಿ ದೇಶಗಳಂತೆ ಯುಗೋಸ್ಲಾವಿಯದಲ್ಲೂ ಜನಾಂಗೀಯ ಕಲಹ, ಸಮಸ್ಯೆ ಇಲ್ಲವೆನ್ನುವಷ್ಟು ನಗಣ್ಯವಾಗಿತ್ತು. ಆದರೆ ಸಮಾಜವಾದಿ ವ್ಯವಸ್ಥೆಯನ್ನು ಬುಡಮೇಲು ಮಾಡುವ ಶತಪ್ರಯತ್ನದ ಭಾಗವಾಗಿ ಜನಾಂಗೀಯ ಸಮಸ್ಯೆಯನ್ನು ಹುಟ್ಟು ಹಾಕಲು ಸತತ ಪ್ರಯತ್ನ ನಡೆಸಲಾಯಿತು. ಜನಾಂಗೀಯ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟು, ಅವನ್ನು ಬೆಳೆಸಲು ಪ್ರಯತ್ನಿಸುತ್ತಿತ್ತು. ಆದರೆ ಸಮಾಜವಾದಿ ಪ್ರಭುತ್ವ ಪ್ರಬಲವಾಗಿರುವವರೆಗೆ ಇದು ಹೆಚ್ಚು ಫಲಕೊಟ್ಟಿರಲಿಲ್ಲ. ಸಮಾಜವಾದಿ ವ್ಯವಸ್ಥೆಯಲ್ಲಿ ತೀವ್ರ ಸುಧಾರಣೆ, ಪುನರ್ನವೀಕರಣದ ಪ್ರಯತ್ನ ವಿರುಪೇರಾಗಿ ಪೂರ್ವ ಯುರೋಪು ಹಾಗೂ ಸೋವಿಯತ್ ಒಕ್ಕೂಟದ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಬಿಟ್ಟು ಬಂಡವಾಳಶಾಹಿ ವ್ಯವಸ್ಥೆ ಅಪ್ಪಿಕೊಳ್ಳಲು ಮುಂದಾಗುತ್ತಿದ್ದಂತೆ ಸಾಮ್ರಾಜ್ಯಶಾಹಿಯ ಈ ಪ್ರಯತ್ನಗಳು ಫಲ ಕೊಡಲು ಆರಂಭಿಸಿದವು.

ಯುಗೋಸ್ಲಾವಿಯದಲ್ಲೂ ಅಷ್ಟೇ. ಯುರೋಪಿನ ಅತ್ಯಂತ ಹೆಚ್ಚು ಬಹು ಜನಾಂಗೀಯ ದೇಶವಾಗಿದ್ದ ಅವಿಭಜಿತ ಯುಗೋಸ್ಲಾವಿಯ ಒಕ್ಕೂಟದ ಅಂಗ ದೇಶಗಳಾದ ಸರ್ಬಿಯಾ, ಮಾಂಟೆನಿಗ್ರೊ, ಕ್ರೊಶಿಯಾ ಬೊಸ್ನಿಯಾ - ಹರ್ಜೆಗೊವಿನಾ -ಪ್ರತಿಯೊಂದು ದೇಶದಲ್ಲೂ ಬಹು ಸಂಖ್ಯಾತ ಜನಾಂಗಗಳು ಅಲ್ಪಸಂಖ್ಯಾತ ಜನಾಂಗಗಳು ಇದ್ದವು. 90ರ ದಶಕದಲ್ಲಿ ಸಮಾಜವಾದಿ ವ್ಯವಸ್ಥೆ ಯುರೋಪಿನಲ್ಲಿ ವಿಘಟನೆ ಹೊಂದುತ್ತಿದ್ದಂತೆ ಜನಾಂಗವಾದ ತೀವ್ರವಾಗಿ ತಲೆ ಎತ್ತತೊಡಗಿತು. ಜರ್ಮನಿ ಮತ್ತು ಇತರ ಯುರೋಪಿಯನ್ ದೇಶಗಳ ನೇರ ಆರ್ಥಿಕ, ಮಿಲಿಟರಿ ಬೆಂಬಲದಿಂದ ಈ ಪ್ರತ್ಯೇಕತಾವಾದಿಗಳು ತಮ್ಮ ಗುರಿ ಸಾಧಿಸಹತ್ತಿದರು. ಯುಗೋಸ್ಲಾವಿಯದಲ್ಲಿ ಜನಾಂಗೀಯ ಕಲಹ ಹತ್ತಿ ಉರಿಯತೊಡಗಿತು. ಒಂದೊಂದೇ ವಿಭಾಗ ಪ್ರತ್ಯೇಕವಾಗ ತೊಡಗಿತು. ಅದು ಆ ಜನಾಂಗಗಳ ಶಾಂತಿಯುತ, ಆರೋಗ್ಯಕರ ಬೆಳವಣಿಗೆಗೇನೂ ಸಹಾಯವಾಗಿಲ್ಲ. ಸ್ವತಂತ್ರವಾದ ದೇಶಗಳ ಒಳಗೆ ಬಹುಸಂಖ್ಯಾತ - ಅಲ್ಪಸಂಖ್ಯಾತ ಜನಾಂಗಗಳ ನಡುವೆ ಸಶಸ್ತ್ರ ಕದನ ಮುಂದುವರೆದಿದೆ. ಈಗಿನ ಸಮಸ್ಯೆ ಈಗ ಉಳಿದಿರುವ ಸರ್ಬಿಯಾ ಮೊಂಟೆನಿಗ್ರೊಗಳನ್ನು ಒಡೆಯಲು ಸಾಮ್ರಾಜ್ಯಶಾಹಿಗಳ ಸನ್ನಾಹ. ಅದಕ್ಕಾಗಿ ಸರ್ಬಿಯಾದ ಒಂದು ಪ್ರಾಂತ್ಯವಾದ ಕೊಸೊವೊವನ್ನು ಅವರು ಆರಿಸಿಕೊಂಡಿದ್ದಾರೆ.

ಕೊಸೊವೊದಲ್ಲಿ ಬಹುಸಂಖ್ಯಾತರಾಗಿರುವ ಅಲ್ಬೇನಿಯನ್ ಜನಾಂಗೀಯರು ಪ್ರತ್ಯೇಕ ದೇಶ ಕೇಳಿರುವುದು ಬಹುಸಂಖ್ಯಾತ ಸರ್ಬಿಯನ್ನರನ್ನು ಕೆರಳಿಸಿದೆ. ಕೊಸೊವೊ ಅಲ್ಬೇನಿಯನ್ನರ ಜನಾಂಗೀಯ ಪ್ರತ್ಯೇಕತಾವಾದ ಕೊಸೊವೊ ವಿಮೋಚನಾ ಸೈನ್ಯದ ಸ್ವರೂಪ ಪಡೆದಂತೆ ಎರಡೂ ಕಡೆಯ ಉಗ್ರವಾದಿ ಗಳು ಪ್ರಬಲಗೊಳ್ಳುತ್ತಾ ಜನಾಂಗೀಯ ಕಲಹ ಆರಂಭವಾಗಿದೆ. ಅದು ಏನೇ ಇರಲಿ, ಕೊಸೊವೊದ ಸಮಸ್ಯೆ ಯುಗೋಸ್ಲಾವಿಯದ ಆಂತರಿಕ ಸಮಸ್ಯೆ. ಹೊರಗಿನ ಮಧ್ಯಪ್ರವೇಶ ಬೇಕಾಗಿದ್ದರೂ ಘರ್ಷಣೆ ನಿಲ್ಲಿಸಿ ಮಾತುಕತೆ ಮುಖಾಂತರ ಶಾಂತಿಯುತ ಪರಿಹಾರ ಹುಡುಕಲು. ಘರ್ಷಣೆಯಲ್ಲಿ ಭಾಗವಹಿಸಿ ಅದನ್ನು ವಿಸ್ತರಿಸಲು ಅಲ್ಲ.

ನಾಟೋಗೆ .ಬೇಕಾಗಿದ್ದೇನು?

ನಾಟೋದ ಭಾಗವಾಗಿರುವ ಅಮೆರಿಕ ಮತ್ತು ಇತರ ಪಶ್ಚಿಮ ಯುರೋಪಿನ ದೇಶಗಳು ಒಂದು ಕಡೆ ಯುಗೋಸ್ಲಾವಿಯದ ಮೇಲೆ ಮಿಲಿಟರಿ ದಾಳಿಯ ಬೆದರಿಕೆ ಹಾಕುತ್ತಾ, ಇನ್ನೊಂದೆಡೆ ಶಾಂತಿಯುತ ಮಧ್ಯಸ್ತಿಕೆಯ ಸೋಗು ಹಾಕಿದ್ದವು. ಅವು ಇಟ್ಟ ಒಪ್ಪಂದದ ಶರತ್ತುಗಳು ಯುಗೋಸ್ಲಾವಿಯಕ್ಕೆ ಎಷ್ಟು ಅವಮಾನಕಾರಿಯಾಗಿದ್ದುವೆಂದರೆ ಅದು ಒಪ್ಪಿತವಾಗುವ ಅವಕಾಶವೇ ಇರಲಿಲ್ಲ. ನಾಟೋ ದೇಶಗಳ ಸೂಚನೆಯಿದ್ದಿದ್ದು ಕೊಸೊವೊ ಪ್ರಾಂತ್ಯಕ್ಕೆ ಪೂರ್ಣ ಸ್ವಾಯತ್ತತೆ ಅಲ್ಲಿ ಶಾಂತಿ ಕಾಪಾಡಲು ನಾಟೋ ಪಡೆಗಳು ಮೂರು ವರ್ಷ ಕಾಲ ಇರುವುದು, ಕೊಸೊವೊ ಪ್ರತ್ಯೇಕವಾದಿಗಳ ನಿಶ್ಶಸ್ತ್ರೀಕರಣ ನಾಟೋ ಪಡೆಗಳಿಂದ, ಮೂರು ವರ್ಷಗಳ ನಂತರ ಕೊಸೊವೊದ ಸ್ವಾತಂತ್ರದ ಬಗ್ಗೆ ಜನಮತ ಸಂಗ್ರಹ. ಯುಗೋಸ್ಲಾವಿಯ ಮಾತುಕತೆಗಳಲ್ಲಿ ಕೊಸೊವೊಗೆ ಸ್ವಾಯತ್ತತೆ ಬಗ್ಗೆ ಹೆಚ್ಚು ಕಡಿಮೆ ಒಪ್ಪಿಕೊಂಡಿತ್ತು. ಆದರೆ ನಾಟೋದ ಪಡೆಗಳು ಅಲ್ಲಿ ಇರುವುದನ್ನು ಅದು ಬಲವಾಗಿ ವಿರೋಧಿಸಿತ್ತು. ಇದು ಯುಗೋಸ್ಲಾವಿಯದ ಸಾರ್ವಭೌಮತೆಯ ಉಲ್ಲಂಘನೆ ಎಂದಿತ್ತು. ಅಲ್ಲದೆ ಕೊಸೊವೊ ಪ್ರತ್ಯೇಕತಾವಾದಿಗಳನ್ನು ನಿಶ್ಶಸ್ತ್ರೀಕರಿಸುವುದಕ್ಕೆ ನಾಟೋ ಪಡೆಗಳು ಅಲ್ಲಿ ಬರಬೇಕಾಗಿಲ್ಲ. ಅವರಿಗೆ ಶಸ್ತ್ರ ಬರುತ್ತಿರುವ ದಾರಿಯನ್ನು ಬಂದು ಮಾಡಿದರೆ ಸಾಕು. ಇದು ನಾಟೋ ಪಡೆಗಳಿಗೆ ಸಾಧ್ಯವೆ ಎಂದು ಯುಗೋಸ್ಲಾವಿಯ ವಾದ. 50 ರ ದಶಕದಲ್ಲಿ ಕಾಶ್ಮೀರದ ಬಗೆಗೂ ಸಾಮ್ರಾಜ್ಯಶಾಹಿ ದೇಶಗಳು ಇಂತಹುದೇ ಸಲಹೆ ಮಾಡಿದ್ದವು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ನಾಟೋಕ್ಕೆ ಬೇಕಾಗಿದ್ದು ಈ ಒಪ್ಪಂದವೂ ಅಲ್ಲ, ಅವರಿಗೆ ಬೇಕಾಗಿದ್ದು ನಾಟೋ ಪಡೆ ನೆಲೆಗೊಳಿಸಲು ಆಯಕಟ್ಟಿನ ಜಾಗ, ಇಲ್ಲವೆ ಅವರ ಅಸ್ತ್ರಗಳನ್ನು ಪ್ರದರ್ಶಿಸಲು, ಪರೀಕ್ಷಿಸಲು ಎಲ್ಲರನೂ ಬೆದರಿಸಲು ಯುದ್ಧ - ಇದಿಷ್ಟು ನಾಟೋ ದಾಳಿಯ ಹಿನ್ನೆಲೆ.

ಯುರೋಪಿನಲ್ಲೂ ವಿರೋಧ

ಒಂದು ವಾರದಷ್ಟು ಕಾಲ ಯುಗೋಸ್ಲಾವಿಯದ ಮೇಲೆ ಸತತ ಬಾಂಬ್ ಕ್ಷಿಪಣಿ ದಾಳಿಗಳು ನಂತರವೂ ಅದು ಮಣಿದಿಲ್ಲ, ಸಮಸ್ಯೆಯ ಪರಿಹಾರವಾಗುವ ಬದಲು ಉಲ್ಬಣ ವಾಗಿದೆ. ನಾಟೋದ ದಾಳಿಯಿಂದಾಗಿ ಸರ್ಬಿಯ ಕೊಸೊವೊ ಪ್ರತ್ಯೇಕತಾವಾದಿಗಳ ನಡುವೆ ಘರ್ಷಣೆ ತೀವ್ರವಾಗಿ ನಾಟೋದ ದಾಳಿಯ ಒಟ್ಟಾರೆ ಪರಿಣಾಮ ಸಾವಿರಾರು ಜನರಿಗೆ ಸಾವು-ನೋವು, ಕೋಟ್ಯಾಂತರ ರೂಪಾಯಿಗಳ ಆಸ್ತಿ-ಪಾಸ್ತಿ ಹಾನಿ, ಲಕ್ಷಾಂತರ ಜನರು ನಿರ್ಗತಿಕವಾಗಿ ನಿರಾಶ್ರಿತರಾಗಿರುವುದು. ಕೊಸೊವೊ ಜನರಿಗೆ ಸಹಾಯ ವಾಗಲು ನಡೆಸಿರುವ ನಾಟೋ ದಾಳಿಯಿಂದ 5 ಲಕ್ಷ ಜನ ಕೊಸೊವನ್ನರು ನಿರ್ಗತಿಕರಾಗಿದ್ದಾರೆ. ಪಕ್ಕದ ಅಲ್ಬೇನಿಯಾ, ಮಸೆಕ್ಕಡೇನೀಯಾ ಓಡಿಹೋಗುತ್ತಿದ್ದಾರೆ. ಸರ್ಬಿಯಾದಲ್ಲೂ ಲಕ್ಷಾಂತರ ಜನ ನಿರ್ಗತಿಕರಾಗಿದ್ದಾರೆ.

ಅಮೆರಿಕ, ಬ್ರಿಟನ್‌ಗಳ ಬಾಂಬ್ ವಿಮಾನಗಳು ಕ್ಷಿಪಣಿ ಸಹಿತ ಯುದ್ಧ ಹಡಗುಗಳು ಯುದ್ಧದಲ್ಲಿ ಮುಖ್ಯವಾಗಿ ಭಾಗವಹಿಸುತ್ತಿವೆ. ಇತರ ಯುರೋಪಿಯ ದೇಶಗಳ ಪಡೆಗಳೂ ಇವೆ. ನಾಟೋ ದಾಳಿಗಳ ದಿನಗಳು ಕಳೆಯುತ್ತಿದ್ದಂತೆ ಈ ಯುದ್ಧದಿಂದ ಯಾರಿಗೂ ಲಾಭವಿಲ್ಲ

→



ಕೊಸೊವೊ ಸಮಸ್ಯೆ ಏನು?

೧೯೯೧ ರ ವರೆಗೆ ಯುಗೋಸ್ಲಾವಿಯ ಆರು ದೇಶಗಳ ಒಕ್ಕೂಟ (ಫೆಡರೇಶನ್) ಕ್ರೊಶಿಯಾ, ಸರ್ಬಿಯಾ, ಸ್ಲೊವೇನಿಯಾ, ಮಸೆಡೊನಿಯಾ, ಮೊಂಟ್‌ನಿಗ್ರೊ, ಬೊಸ್ನಿಯಾ- ಹರ್ಜೆಗೊವಿನಾ. ಕೊಸೊವೊ ಸರ್ಬಿಯಾದ ಒಂದು ಪ್ರಾಂತ್ಯ. ಇದು ಅಲ್ಬೇನಿಯನ್ ಜನಾಂಗದವರು ಬಹುಸಂಖ್ಯೆಯಲ್ಲಿರುವ ಪ್ರಾಂತ್ಯ. ಆದರೆ ಸಾಮ್ರಾಜ್ಯ ಶಾಹಿ ಮಾಧ್ಯಮಗಳು ಹೇಳುವಂತೆ ಅವರ ಸಂಖ್ಯೆ ಶೇಕಡಾ ೯೦ ಅಲ್ಲ. ಅವರ ಸಂಖ್ಯೆ ಸುಮಾರು ಶೇಕಡ ೬.೨. ಅವರಲ್ಲದೆ ಸರ್ಬಿಯನ್ನರು (ಶೇಕಡಾ ೧೫) ಮೊಂಟೆನ್ಗ್ರಿನ್ನರು (ಶೇಕಡಾ೧೦) ರೋಮರು (ಶೇಕಡಾ ೫) ಈಜಿಪ್ಟಿಯನ್ನರು (೫) ಟರ್ಕರು (ಶೇಕಡಾ ೩) ಇದ್ದಾರೆ. ಸರ್ಬಿಯನ್ನರು ಮತ್ತು ಅಲ್ಬೇನಿಯನ್ನರ ನಡುವೆ ಶತಕಗಳ ಘರ್ಷಣೆಯ ಇತಿಹಾಸ ವಿದೆ. ಆದರೆ ಕೊಸೊವೊ ಪ್ರತ್ಯೇಕ ದೇಶ ವಾಗುವುದು ಇದಕ್ಕೆ ಪರಿಹಾರವಲ್ಲ. ಕೊಸೊವೊ ಪ್ರತ್ಯೇಕ ದೇಶವಾಗುವುದನ್ನು ಸರ್ಬಿಯನ್ನರು ಮಾತ್ರವಲ್ಲ ಇತರ ಅಲ್ಪಸಂಖ್ಯಾತರೂ ವಿರೋಧಿಸುತ್ತಾರೆ. ಕೊಸೊವೊ ಸ್ವತಂತ್ರವಾದರೂ ನೆರೆಯ ಅದೇ ಜನಾಂಗ ಬಹುಸಂಖ್ಯಾತರಿರುವ ಅಲ್ಬೇನಿಯಾ ಜತೆ ವಿಲೀನವಾಗ ಬೇಕೆ ಬೇಡವೆ ಎಂಬ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ. ಅಲ್ಲದೆ ಕೊಸೊವೊ ವಿಮೋಚನಾ ಸೇನೆ (ಕೆ.ಎಲ್.ಎ.) ನೇರವಾಗಿ ಜರ್ಮನ್ ಅಮೆರಿಕನ್ ಧನ, ಶಸ್ತ್ರ ಸಹಾಯದಿಂದ ನಡೆಯುತ್ತಿರುವ ಸಂಘಟನೆ. ಅದು (ಕೆ.ಎಲ್.ಎ) ಅತ್ಯಂತ ಉಗ್ರ ಜನಾಂಗ ಅಸಹನೆಯನ್ನು ಬೆಳೆಸುತ್ತಿದೆ. ಅಲ್ಬೇನಿಯಾದಲ್ಲಿ ಈಗ ಅಧಿಕಾರ ಕಳೆದುಕೊಂಡಿರುವ ಉಗ್ರ ಬಲಪಂಥೀಯ ಶಕ್ತಿಗಳೂ ಕೆ.ಎಲ್.ಎ.ಗೆ ಬೆಂಬಲ ನೀಡುತ್ತಿವೆ.

ಕೊಸೊವೊದ ಸಮಸ್ಯೆಗೆ ಪರಿಹಾರ ಸರ್ಬಿಯಾದ ಒಳಗೆ ಅತ್ಯಂತ ಹೆಚ್ಚಿನ ಮಟ್ಟದ ಸ್ವಾಯತ್ತತೆ. ಇದಕ್ಕೆ ಯುಗೋಸ್ಲಾವಿಯ ಒಪ್ಪಿಕೊಂಡಿದೆ. ಆದರೆ ಕೆ.ಎಲ್.ಎ.ಗೆ ಬೇಕಾಗಿರುವುದು ಸ್ವಾತಂತ್ರ್ಯ, ಅಲ್ಲದೆ ಆ ಸ್ವಾತಂತ್ರ್ಯ ರಕ್ಷಿಸಲು ನಾಟೋ ಪಡೆಗಳು ಇರಬೇಕಂತೆ! ನಾಟೋ ಪಡೆಗಳಿರುವ ಸ್ವಾತಂತ್ರ್ಯ ಎಂತಹ ಸ್ವಾತಂತ್ರ್ಯ?

ವಿದೇಶಿ ಪಡೆಗಳು ಶಾಶ್ವತವಾಗಿರುವ ಇದೆಂತಹ ಸ್ವಾತಂತ್ರ್ಯ?

ಧರ್ಮದ ಆಧಾರದ ಮೇಲೆ ಹೇಗೆ ಒಂದು ದೇಶ ನಿಲ್ಲಲು ಸಾಧ್ಯವಿಲ್ಲವೋ. ಅದೇ ರೀತಿ ಜನಾಂಗದ ಆಧಾರದ ಮೇಲೂ ದೇಶ ಸ್ಥಿರವಲ್ಲ ಎಂದು ಯುಗೊಸ್ಲಾವಿಯಾದಿಂದ ಸ್ವತಂತ್ರವಾದ ದೇಶಗಳ ಪಾಡು ತೋರಿಸಿಕೊಟ್ಟಿದೆ. ೧೯೯೫ ರಲ್ಲಿ ಯುಗೋಸ್ಲಾವಿಯಾದಿಂದ ಸ್ವತಂತ್ರವಾದ ಬೊಸ್ನಿಯಾ- ಹರ್ಜೆಗೊವಿನಾದಲ್ಲಿ ೩೨ ಸಾವಿರ ನಾಟೋ ಪಡೆಗಳಿವೆ. ಇದೆಂತಹ ಸ್ವಾತಂತ್ರ್ಯ? ಇದರಲ್ಲಿ ೭ ಸಾವಿರ ಅಮೆರಿಕನ್ ಪಡೆಗಳು. ಬೊಸ್ನಿಯಾವನ್ನು ಮೂರು ಭಾಗ ಮಾಡಲಾಗಿದೆ. ಪ್ರತಿ ಒಂದು ಭಾಗವನ್ನು ಒಂದು ಸಾಮ್ರಾಜ್ಯಶಾಹಿ ಸೈನ್ಯ ಆಳುತ್ತಿದೆ. ಹೆಸರಿಗೆ ಒಬ್ಬ ಅಧ್ಯಕ್ಷ ಇದ್ದಾರೆ. ಅಮೆರಿಕ, ಬ್ರಿಟನ್, ಫ್ರಾನ್ಸ್‌ಗಳು ಒಂದೊಂದು ತುಂಡನ್ನು ಆಳುತ್ತಿವೆ. ಸರ್ಭ್-ಬೋಸ್ನಿಯಾ ತುಂಡೊಂದು. ಕ್ರೋಟ್-ಮುಸ್ಲಿಂ ತುಂಡೊಂದು. ಈ ಸ್ವಾತಂತ್ರ್ಯ ಸಾಮ್ರಾಜ್ಯಶಾಹಿ ನಿಯಂತ್ರಣದಲ್ಲಿ ವಸಾಹತುಗಳ ನಿರ್ಮಾಣಕ್ಕೆ ಇನ್ನೊಂದು ಹೆಸರಷ್ಟೆ. ಇತ್ತೀಚೆಗೆ ನಾಟೋದ ಕಮಾಂಡರ್ಸ್ ಬೊಸ್ನಿಯಾದ ಸರ್ಬಿಯನ್ ವಿಭಾಗದ ಅಧ್ಯಕ್ಷನನ್ನು ಬದಲಾಯಿಸಬೇಕೆಂದು ಬೊಸ್ನಿಯಾನ್ -ಸರ್ಬಿಯನ್ ಪಾರ್ಲಿಮೆಂಟಿಗೆ ಆದೇಶ ನೀಡಿದ. ಯುಗೋಸ್ಲಾವಿಯಾದಿಂದ ಸ್ವತಂತ್ರವಾದ ಎಲ್ಲಾ ದೇಶಗಳಲ್ಲೂ ನಾಟೋ ಪಡೆಗಳು, ನೆಲೆಗಳು ಇವೆ. ಕ್ರೊಶಿಯಾದ ಅಧ್ಯಕ್ಷ ಫ್ರಾಂಜೊ ಟುದ್‌ಮನ್ ಕುಖ್ಯಾತ ಕಮ್ಯುನಿಸ್ಟ್ - ವಿರೋಧಿ. ನಾಜಿಗಳ ಜತೆ ಕೈಮಿಲಾಯಿಸಿ ೧೨ ಲಕ್ಷ ಸರ್ಬಿಯನ್ನರ ನರಮೇಧಕ್ಕೆ ಕಾರಣವಾಗಿದ್ದ ಫ್ಯಾಸಿಸ್ಟ್ ಉಸ್ತಾಶಿ ಆಳ್ವಿಕೆ ಆತನಿಗೆ ಆದರ್ಶವಂತೆ. ಉಸ್ತಾಶಿ ಆಳ್ವಿಕೆ ಕಾಲದ ನಾಣ್ಯ ಮತ್ತು ಧ್ವಜವನ್ನು ಆತ ಅಂಗೀಕರಿಸಿದ್ದಾನೆ. ಕ್ರೊಶಿಯಾದ ಈ ಹೊಸ ಅಧ್ಯಕ್ಷ ಜರ್ಮನಿಯ ಅಡಿಯಾಳಾಗಿದ್ದಾನೆ. ಆತ ಅಧಿಕಾರಕ್ಕೆ ಬಂದ ಕೂಡಲೇ ಮಧ್ಯ ಏಶ್ಯಾದಿಂದ ತೈಲ ಪೈಪ್‌ಲೈನ್ ಕ್ರೊಶಿಯಾ ಮೂಲಕ ಜರ್ಮನಿಗೆ ಹೋಗಲು ಅನುಮತಿ ನೀಡಿದ್ದಾನೆ. ಕ್ರೊಶಿಯಾವನ್ನು ಸ್ವತಂತ್ರಗೊಳಿಸಲು ಈ ಜರ್ಮನ್ ಹಿತಾಸಕ್ತಿಯೇ ಮೂಲ ಕಾರಣ ಎಂದು ಹೇಳಲಾಗಿದೆ.

ಯುಗೋಸ್ಲಾವಿಯಾ ಇರುವ ಬಾಲ್ಕನ್ ಪ್ರದೇಶ ಈ ರೀತಿಯಲ್ಲಿ ಆಯಕಟ್ಟಿನ ಜಾಗ ಅದನ್ನು ಸಣ್ಣ ಸಣ್ಣ ವಸಾಹತು ಒಡೆದು ಆಳುವುದು ಸಾಮ್ರಾಜ್ಯಶಾಹಿ ತಂತ್ರ. ಅದಕ್ಕೆ ಚಾರಿತ್ರಿಕ ಜನಾಂಗೀಯ ಸಮಸ್ಯೆ, ವೈಷಮ್ಯಗಳನ್ನು ಬಳಸಲಾಗುತ್ತಿದೆ.

ಪುಟ 4 ರಿಂದ

ಸಾಮ್ರಾಜ್ಯ ಶಾಹಿ ಯುದ್ಧ ಕೋರರಿಗೆ ಬಿಟ್ಟು ಎಂದು ಯುರೋಪಿಯನ್ ದೇಶಗಳಲ್ಲೇ ತೀವ್ರ ವಿರೋಧ ಕಂಡು ಬಂದಿದೆ. ಗ್ರೀಸ್, ಇಟಲಿ ಪಾರ್ಲಿಮೆಂಟುಗಳು ಯುದ್ಧ ನಿಲ್ಲಿಸಿ ಮಾತುಕತೆ ನಡೆಸಬೇಕೆಂದು ನಿರ್ಣಯ ಅಂಗೀಕರಿಸಿವೆ. ಎರಡೂ ಸರ್ಕಾರಗಳೂ ಇದಕ್ಕಾಗಿ ಒತ್ತಾಯಿಸುತ್ತಿವೆ. ಇವೆರಡೂ ದೇಶಗಳು ಯುಗೋಸ್ಲಾವಿಯದ ನೆರೆಯ ದೇಶಗಳಾದ್ದರಿಂದ ಯುದ್ಧ ಹರಡೀತು, ಅಲ್ಲದೆ ನಿರಾಶ್ರಿರು ಅದೇಶಗಳಿಗೆ ಓಡಿ ಬರುತ್ತಾರೆಂಬ ಅತಂಕ ತೀವ್ರವಾಗಿ ಹಬ್ಬಿದೆ.

ಅಲ್ಲದೆ ಸಾಮ್ರಾಜ್ಯಶಾಹಿಗಳ ಅಬ್ಬರದ ಪ್ರಚಾರ ಎಲ್ಲರನ್ನು ಮರಳು ಮಾಡಿಲ್ಲ. ದೊಡ್ಡ ಸಂಖ್ಯೆಯಲ್ಲಿ ಪ್ರಜಾಪ್ರಭುತ್ವ ಪ್ರೇಮಿಗಳು ಶಾಂತಿ ಪ್ರಿಯರು ಈ ಯುದ್ಧದ ಒಳಮರ್ಮ ಅರಿತುಕೊಂಡಿದ್ದಾರೆ. ಆದ್ದರಿಂದ ಎಲ್ಲಾಕಡೆ ಯುದ್ಧ ನಿಲ್ಲಿಸಲು ಭಾರಿ ಪ್ರದರ್ಶನಗಳು ನಡೆದಿವೆ. ಲಂಡನ್, ಪ್ಯಾರಿಸ್, ನ್ಯೂಯಾರ್ಕ್ ಚಿಕಾಗೊಗಳಲ್ಲಿ ಭಾರಿ ಪ್ರದರ್ಶನಗಳು ನಡೆದಿವೆ. ಹಲವು ಕಡೆ ಅಮೆರಿಕನ್ ರಾಯಭಾರಿ ಕಚೇರಿ ಮುಂದೆ ಪ್ರದರ್ಶನ, ಘರ್ಷಣೆಗಳು ನಡೆದಿವೆ. ಗ್ರೀಸ್, ಮಾಸ್ಕೊಗಳಲ್ಲಿ ಇಂತಹ ಪ್ರದರ್ಶನಗಳು ತೀವ್ರ ಹಿಂಸೆಗೆ ತಿರುಗಿದ್ದವು.

ರಶ್ಯ ಈ ನಾಟೋದಾಳಿಗೆ ಅತ್ಯಂತ ಖಾರವಾದ ಪ್ರತಿಕ್ರಿಯೆ ನೀಡಿದೆ. ದಾಳಿಯ ಹೊತ್ತಿಗೆ ಅಮೆರಿಕದ ಭೇಟಿಗೆ ಹೊರಟು ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ರಶ್ಯನ್ ಪ್ರಧಾನಿ ಪ್ರಿಮೊಕೊವ್ ಅಲ್ಲಿಂದಲೇ ಪ್ರತಿಭಟನಾರ್ಥ ಭೇಟಿ ರದ್ದು ಮಾಡಿ ವಾಪಸಾಗಿದ್ದಾರೆ. ನಾಟೋದಲ್ಲಿ ರಶ್ಯದ ರಾಯಭಾರಿಯನ್ನು ವಾಪಸು ಕರೆಸಿಕೊಳ್ಳಲಾಗಿದೆ. ನಾಟೋ ದಾಳಿಯನ್ನು ಖಂಡಿಸಿ ರಶ್ಯನ್ ಪಾರ್ಲಿಮೆಂಟ್ ಹೆಚ್ಚು ಕಡಿಮೆ ಸರ್ವಾನುಮತದ ನಿರ್ಣಯ (365-4) ತೆಗೆದುಕೊಂಡಿದೆ. ರಶ್ಯದಲ್ಲಿ ಯುಗೋಸ್ಲಾವಿಯದ ಪರವಾಗಿ ಯುಗೋಸ್ಲಾವಿಯದ ರಕ್ಷಣೆಗೆ ಸ್ವಯಂ-ಸೇವಕ ಸೈನಿಕರಾಗಿ ತೆರಳಲು ಸಾವಿರಾರು ಜನ ರಶ್ಯನ್ನರು ಮುಂದೆ ಬಂದಿದ್ದಾರೆ, ಸೈನ್ಯದ ಜನವೂ ಸೇರಿದಂತೆ. ರಶ್ಯದ ಪ್ರಧಾನಿ ಪ್ರಿಮೊಕೊವ್ ಶಾಂತಿ ಮಾತುಕತೆಗೆ ಯುಗೋಸ್ಲಾವಿಯಗೆ ತೆರಳಿದ್ದಾರೆ.

ಚೀನಾ ಸಹ ನಾಟೋ ದಾಳಿಯನ್ನು ಬಲವಾಗಿ ಖಂಡಿಸಿದೆ. ರಶ್ಯಾ, ಚೀನಾಗಳು ನಾಟೋ ದಾಳಿ ಖಂಡಿಸಿ ಭದ್ರತಾ ಸಮಿತಿ ಮುಂದೆ ಜಂಟಿಯಾಗಿ ಮೊದಲ ಬಾರಿಗೆ ನಿರ್ಣಯ ತಂದಿದ್ದಾರೆ. ಅದು ಮಂಜೂರಾಗದಿದ್ದರೂ ಈ ಬೆಳವಣಿಗೆ ಅತ್ಯಂತ ಗಮನರ್ಹವಾದುದು. ಫ್ರೆಂಚ್, ಇಟಲಿ, ಅಮೆರಿಕ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಇಟಲಿ, ಗ್ರೀಸ್, ಪೋರ್ಚುಗೀಸ್ ಕಮ್ಯುನಿಷ್ಟ್ ಪಕ್ಷಗಳು ದಾಳಿಯನ್ನು ಬಲವಾಗಿ ಖಂಡಿಸಿವೆ. ಜನಾಂಗೀಯ ಅಲ್ಪಸಂಖ್ಯಾತರ ಬಗ್ಗೆ ಅಷ್ಟು ಕಾಳಜಿ ಇದ್ದರೆ ನಾಟೋ ಪಡೆಗಳು ಕುರ್ದಿಶ್ ಜನಾಂಗದವರ ಸಮಸ್ಯೆ ಬಗ್ಗೆ ಏಕೆ ಸುಮ್ಮನಿದೆ (ನಿಜವಾಗಿಯು ಅದು ಅವರ ಹೋರಾಟವನ್ನು ದಮನ ಮಾಡಲು ತುರ್ಕಿಗೆ ನೇರವಾಗಿ ಸಹಾಯಮಾಡುತ್ತಿದೆ). ಅದೇ ರೀತಿ ಪ್ಯಾಲೆಸ್ತೈನ್ನರ ಸಮಸ್ಯೆಗೆ ಪರಿಹಾರವನ್ನು ಶಾಂತಿ ಒಪ್ಪಂದ ಜಾರಿಗೆ ತರಲು ಒಪ್ಪದ ಇಸ್ರೇಲಿನ ಮೇಲೆ ಬಾಂಬ್ ದಾಳಿ ನಡೆಸುತ್ತದೆಯೇ ಎಂದೂ ಈ ಪಕ್ಷಗಳು ಪ್ರಶ್ನಿಸಿವೆ.

ಒಟ್ಟಾರೆಯಾಗಿ ಈ ಬೆಳವಣಿಗೆ ಗಂಭೀರವಾದ ಬೆಳವಣಿಗೆ. ವಿಶ್ವಶಾಂತಿ, ಜನಾಂಗೀಯ ಸಂಬಂಧಗಳಿಗೆ ಅಂತರ್‍ರಾಷ್ಟ್ರೀಯ ಕಾನೂನಿಗೆ ಮನ್ನಣೆಗೆ ತೀವ್ರ ಸವಾಲು. ವಿಶ್ವ ಸಂಸ್ಥೆ ಇಂತಹ ಭೀಕರ ದಾಳಿಗೆ ಏನೂ ಪ್ರತಿಕ್ರಿಯಿಸ ದಿರುವುದು ತೀವ್ರವಾದ ಆತಂಕಕಾರಿ ಬೆಳವಣಿಗೆ. ಆದರೆ ಈ ಕಾರ್ಮೋಡಗಳ ನಡುವೆ ಈ ದಾಳಿಗೆ ಬಂದಿರುವ ಪ್ರತಿಭಟನೆ, ಸಾರ್ವತ್ರಿಕ ಖಂಡನೆ ಆಶಾದಾಯಕ. ಈ ದಾಳಿ ನಾಟೋಕ್ಕೆ ನುಂಗಲಾರದ ತುತ್ತಾಗಿದೆ. ಅವರ ಉದ್ದೇಶಗಳು ಫಲಿಸಿಲ್ಲ, ವಿಮಾನ ಧಾಳಿ ಜತೆ ಭೂಮಿ ಮೇಲೆ ಹೋರಾಟ ಆರಂಭಿಸಲು ಅವರು ಹಿಂದೇಟು ಹಾಕುತ್ತಿದ್ದಾರೆ. ತಮ್ಮ ಸೈನಿಕರ ತೀವ್ರ ಸಾವು ನೋವು ಮತ್ತು ಸಾರ್ವಜನಿಕ ಪ್ರತಿಭಟನೆ ಎದುರಿಸಬೇಕಾಗಿದೆ.

ಜನತಾ ಪ್ರಜಾಪ್ರಭುತ್ವ ಚಳುವಳಿಯಲ್ಲೊಂದು ದಿಟ್ಟ ಹೆಜ್ಜೆ

ಕೇರಳದ ಜನತಾ ಯೋಜನೆ

ಪ್ರಕಾಶ್.ಕೆ

ಭಾರತದಲ್ಲಿ ಜನರ ಅಭಿವೃದ್ಧಿಗೆಂದು ಬಂದ ಯೋಜನೆಗಳು, ಅದನ್ನು ಜಾರಿಗೊಳಿಸಿದ ವಿಧಾನಗಳು ವಿಪರ್ಯಾಸದ ಸಂಗತಿಗಳೇ ಆಗಿವೆ. ಪಂಚವಾರ್ಷಿಕ ಯೋಜನೆಗಳಿಂದ ಹಿಡಿದು ಯಾವುದೇ ಯೋಜನೆಗಳು ಭಾರತದ ಸಾಮಾನ್ಯನ ಬದುಕನ್ನು ಬದಲಾಯಿಸುವ ಕೆಲಸ ಮಾಡಲೇ ಇಲ್ಲ. ಏಕೆಂದರೆ ಇಂತಹ ಯೋಜನೆಗಳು ರೂಪುಗೊಂಡಿದ್ದು ಜನರಿಂದಲ್ಲ ಆಳುವ ವರ್ಗಗಳ ಮೆದುಳುಗಳಿಂದ ಮೂಡಿ ಬಂದದ್ದು. ಹೀಗಾಗಿ ಯೋಜನೆಗಳ ಬಗ್ಗೆಯೇ ಅಪಹಾಸ್ಯ ಮಾಡುವ ಮತ್ತು ಅವುಗಳ ಅಗತ್ಯವನ್ನು ಪ್ರಶ್ನಿಸುವ ಪರಿಸ್ಥಿತಿಯನ್ನು ಪ್ರಜ್ಞಾಪೂರ್ವಕವಾಗಿ ನಿರ್ಮಿಸಲಾಗುತ್ತಿದೆ. ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಕೆಲಸ ಸಾಗಿದೆ.



'ಜನತಾ ಯೋಜನೆ' ಕುರಿತ ಚರ್ಚೆ: ಚಂದ್ರಶೇಖರ ಬಾಳೆಯವರ ಬಲಕ್ಕೆ ಇರುವವರು ಇ.ಎಂ.ಶ್ರೀಧರನ್ ಅವರ ಬಲಕ್ಕೆ ಇರುವವರು ಬಾಬು ಪರಸ್ಸೇರಿ(ವಲವಣ್ಣ ಪಂಚಾಯಿತಿ ಅಧ್ಯಕ್ಷರು)

ಇಂತಹ ಸಂದರ್ಭದಲ್ಲಿ ಕೇರಳ ಸಿಪಿಐ(ಎಂ) ನೇತೃತ್ವದ ಸರ್ಕಾರ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಕಾಯಕವನ್ನು ಕೈಗೆತ್ತಿಕೊಂಡಿದೆ. ಸ್ವತಂತ್ರಭಾರತದ ಚರಿತ್ರೆಯಲ್ಲೇ ಅಭೂತ ಪೂರ್ವ "ಜನತಾ ಯೋಜನೆ" ಪ್ರಾರಂಭಗೊಂಡಿದೆ. ಯೋಜನೆ ಗಳು ಜನತೆಯ ಆಶಯವನ್ನು ಪ್ರತಿಬಿಂಬಿಸಬೇಕು ಎಂದು, ಕೆಳಗಿನಿಂದ ಯೋಜನೆಗಳನ್ನು ರೂಪಿಸುವ ಕೆಲಸ ಅಲ್ಲಿನ ಪಂಚಾಯತ್‌ಗಳ ಮೂಲಕ ಪ್ರಾರಂಭಗೊಂಡಿದೆ. ದೇಶದಲ್ಲೇ ವಿಶಿಷ್ಟವಾದ ಈ ಜನತಾ ಯೋಜನೆ ಏನು? ಎತ್ತ? ಎಂದು ತಿಳಿಯುವ ಸಲುವಾಗಿ ಇತ್ತೀಚೆಗೆ ಎ.ಐ.ಕೆ.ಎಸ್. 29 ನೇ ಅ.ಭಾ ಸಮ್ಮೇಳನಕ್ಕೆ ಕಲ್ಲಿಕೋಟೆಗೆ ಹೋಗಿದ್ದ ಕರ್ನಾಟಕದ ಪ್ರತಿನಿಧಿ ಗಳ ತಂಡ, ಈ ಯೋಜನೆಯನ್ನು ರೂಪಿಸಲು ಪ್ರಮುಖ ಪಾತ್ರ ವಹಿಸಿರುವ ಇ.ಎಂ. ಶ್ರೀಧರನ್ (ಇ.ಎಂ.ಎಸ್.ರವರ ಪುತ್ರ) ಹಾಗೂ ಕೆಲ ಪಂಚಾಯತ್ ಪ್ರತಿನಿಧಿಗಳೊಡನೆ ಚರ್ಚಿಸಿದರು. ಅದರ ಕೆಲ ವಿವರಗಳನ್ನು ಇಲ್ಲಿ ನೀಡಲಾಗಿವೆ.

ಆರಂಭ: ಗ್ರಾಮಗಳ ಭಿವೃದ್ಧಿಯನ್ನು ಹೇಗೆ ಮಾಡಬೇಕೆಂಬ ಯೋಜನೆಯನ್ನು ಆ ಗ್ರಾಮಗಳ/ ಪಂಚಾಯತ್‌ಗಳ ಜನರೇ ರೂಪಿಸಬೇಕೆಂಬ ಉದ್ದೇಶದಿಂದ ಕೇರಳದ ಎಲ್.ಡಿ.ಎಫ್. 1996 ರ ಆಗಸ್ಟ್‌ನಲ್ಲಿ ಜನತಾ ಯೋಜನೆ (ಮಲೆಯಾಳಂನಲ್ಲಿ- 'ಜನಕೀಯ ಆಸೂತ್ರಣಂ') ಯನ್ನು ಜಾರಿಗೆ ತಂದಿತು.

ಪಂಚಾಯತ್‌ಗಳ ಸಂರಚನೆ:

ರಾಜ್ಯದಲ್ಲಿ ಒಟ್ಟಾರೆ 990 ಗ್ರಾಮ ಪಂಚಾಯತ್‌ಗಳಿವೆ. ಪ್ರತೀ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಸರಾಸರಿ 12 ವಾರ್ಡ್‌ಗಳಿವೆ (ಕಡಿಮೆಯೆಂದರೆ-9, ಹೆಚ್ಚೆಂದರೆ-15,). ಸರಾಸರಿ 25 ಸಾವಿರ ಮತದಾರರು ಇರುವಂತೆ ಈ ಪಂಚಾಯತ್‌ಗಳನ್ನು ರೂಪಿಸಲಾಗಿದೆ (ಸಣ್ಣ ಗ್ರಾ. ಪಂಚಾಯತಿ-8000 ಜನ, ದೊಡ್ಡದೆಂದರೆ-82,000 ಜನ).

ಯೋಜನೆಯನ್ನು ರೂಪಿಸುವ ಕೆಲಸ:

ಪ್ರತಿ ವಾರ್ಡ್‌ನ ಮತದಾರರು 3 ತಿಂಗಳಿಗೊಮ್ಮೆ ಸಭೆ ಸೇರುವ ಹಾಗೆ "ಗ್ರಾಮ ಸಭಾ"ಗಳು ಕೆಲಸ ಮಾಡುತ್ತವೆ. ಇಂತಹ ಸಭೆಗಳಲ್ಲಿ 1500-3000 ಜನರವರೆಗೆ ಭಾಗವಹಿಸುತ್ತಾರೆ. ಅಂದರೆ ಆ ಗ್ರಾಮ ಸಭಾದ ವ್ಯಾಪ್ತಿಯಲ್ಲಿ ಬರುವ ಮತದಾರರೆಲ್ಲರೂ ಭಾಗವಹಿಸುವಂತೆ ವಾತಾವರಣ ನಿರ್ಮಿಸಲಾಗಿದೆ.

ಈ ಯೋಜನೆಯ ಪ್ರಾರಂಭದ ಹಂತದಲ್ಲಿ ಗ್ರಾಮಗಳ ಅಭಿವೃದ್ಧಿಯ ಕುರಿತು ಚರ್ಚಿಸಲು ಗ್ರಾಮ ಸಭಾಗಳ ವಿಶೇಷ ಸಭೆಗಳನ್ನು ಕರೆಯಲಾಯ್ತು ಕುಡಿಯುವ ನೀರು, ರಸ್ತೆ ನಿರ್ಮಾಣ, ಬೀದಿ ದೀಪ, ಮನೆ ನಿರ್ಮಾಣ, ಸ್ವಯಂ ಉದ್ಯೋಗ, ಉತ್ಪಾದಕತೆಯನ್ನು ಹೆಚ್ಚಿಸುವುದು, ಕೃಷಿ, ಕೈಗಾರಿಕೆ ಹೀಗೆ, ವಿವಿಧ ವಿಷಯಗಳಿಗೆ ಸಂಬಂಧಿಸಿ ಸಭೆಯಲ್ಲಿ ಚರ್ಚಿಸಿ ಬರಲಾದ ಅಭಿಪ್ರಾಯಗಳನ್ನು ಕ್ರೋಢೀಕರಿಸುವುದರೊಂದಿಗೆ ಯೋಜನೆಯನ್ನು ರೂಪಿಸುವ ಕೆಲಸ ಪ್ರಾರಂಭವಾಯ್ತು. ಹೀಗೆ ಎಲ್ಲಾ ವಾರ್ಡ್‌ಗಳಲ್ಲೂ ಇಂತಹ ಪ್ರಕ್ರಿಯೆ ನಡೆಸಲಾಯ್ತು. ಜನರು ತಮಗೆ ಅಗತ್ಯವಾದ ಕೆಲಸಗಳನ್ನು ಆದ್ಯತೆಯನುಸಾರ ತಾವೇ ಯೋಜಿಸುವುದರ ಮೂಲಕ ಜಾರಿಗೊಳಿಸುವ ವಿಶಾಲ ತಳಹದಿಯ ಚಳುವಳಿಯ ಆರಂಭ ಹೀಗಾಯ್ತು.

'ಅಭಿವೃದ್ಧಿ' ಕುರಿತು ವಿಚಾರ ಗೋಷ್ಠಿಗಳು:

ಚುನಾಯಿತ ಪ್ರತಿನಿಧಿಗಳು, ತಜ್ಞರು, ಮುಂತಾದ 250 ಜನರನ್ನೊಳಗೊಂಡ ಅಭಿವೃದ್ಧಿ ವಿಚಾರ ಸಂಕಿರಣಗಳನ್ನು ನಡೆಸುವುದು ನಂತರದ ಕೆಲಸ. ಗ್ರಾಮ ಸಭೆಗಳಲ್ಲಿ ಚರ್ಚಿಸಿ ಕ್ರೋಢೀಕರಿಸಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವಿವಿಧ ವಿಷಯಗಳಿಗೆ ಸಂಬಂಧಿಸಿ "ಟಾಸ್ಕ್ ಫೋರ್ಸ್"ಗಳನ್ನು ರಚಿಸುವುದು. ಇವು ಆಯಾ ವಿಷಯಗಳ ಬಗ್ಗೆ ಪ್ರಾಜೆಕ್ಟ್‌ಗಳನ್ನು ರೂಪಿಸುತ್ತವೆ. ಈ ರೀತಿ ರೂಪಿಸಿದ ಪ್ರಾಜೆಕ್ಟ್‌ಗಳನ್ನು ಗ್ರಾಮ ಸಭಾಗಳಿಗೆ ನೀಡಲಾಗುವುದು.

ಈ ಪ್ರಾಜೆಕ್ಟ್‌ಗಳನ್ನು ಪರೀಕ್ಷಿಸಲು ವಿವಿಧ ಹಂತಗಳಲ್ಲಿ "ತಜ್ಞರ ಸಮಿತಿ"ಗಳನ್ನು ರಚಿಸುವುದು. ಈ ರೀತಿ ಪರೀಕ್ಷಿಸಿದ ನಂತರ ಇವುಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ಒಪ್ಪಿಸಲಾಗುವುದು. ಇಡೀ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆ ಬಹು ಮುಖ್ಯವಾಗಿರುತ್ತದೆ. ಮತ್ತು ಹೀಗೆ ಯೋಜನೆಯು ರೂಪುಗೊಳ್ಳುತ್ತದೆ.

ಪ್ರಾಜೆಕ್ಟ್‌ಗಳಿಗೆ ತಾಂತ್ರಿಕ ಅನುಮತಿ ನೀಡುವ ವಿಚಾರದಲ್ಲಿ ಅಧಿಕಾರಶಾಹಿಯ ಹಿಡಿತ ಇಲ್ಲವೆಂಬುದು ಮುಖ್ಯವಾದ ವಿಚಾರ. ಈ ಕಾರಣದಿಂದಲೇ ಅಧಿಕಾರಶಾಹಿಯ ಮುಖ್ಯಭಾಗ ಮತ್ತು ಕಾಂಗ್ರೆಸ್ ಸೇರಿದಂತೆ ಕೆಲ ಪಕ್ಷಗಳು ಇಡೀ ಯೋಜನೆಯನ್ನು ವಿರೋಧಿಸುತ್ತಿರುವುದು ಎಂಬುದನ್ನು ಗಮನಿಸಬೇಕು.

ಯೋಜನೆಯ ಜಾರಿ:

ಯೋಜನೆಗಳಿಗೆ ತಾಂತ್ರಿಕ ಒಪ್ಪಿಗೆ ದೊರೆತ ನಂತರ ಅದನ್ನು ಜಾರಿಗೊಳಿಸುವ ಪ್ರಕ್ರಿಯೆ ಆರಂಭ. ಜನ ತಾವೇ ರೂಪಿಸಿದ ಯೋಜನೆಗಳನ್ನು ಹೇಗೆ ಜಾರಿಗೊಳಿಸಲಾಗುತ್ತದೆ ಎಂಬುದನ್ನು ತಿಳಿಯಲು ಕರ್ನಾಟಕದ ಪ್ರತಿನಿಧಿಗಳ ತಂಡವು ಕಲ್ಲಿಕೋಟೆ ಜಿಲ್ಲೆಯ "ವಳವಣ್ಣ" ಪಂಚಾಯತ್‌ನ ಅಧ್ಯಕ್ಷರಾದ ಕಾಂ|| ಬಾಬು ಪರಸ್ಸೇರಿಯವರ ಜೊತೆ ಚರ್ಚಿಸಿತು. ಯೋಜನೆಯ ಜಾರಿಯ ಬಗ್ಗೆ ತಮ್ಮ ಪಂಚಾಯತಿಯ ಅನುಭವಗಳನ್ನು ಅವರು ನೀಡಿದರು.

ಕುಡಿಯುವ ನೀರು - ಜನರೇ ಹಣ ಹಾಕಿದರು

ಇವರ ಪಂಚಾಯ್ತಿಯಲ್ಲಿ ಕುಡಿಯುವ ನೀರನ್ನು ಆದ್ಯತೆಯಾಗಿ ಪರಿಗಣಿಸಿದರು. ಫಲಾನುಭವಿಗಳ ಸಮಿತಿಗಳನ್ನು ರಚಿಸಿದರು. 60 ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಲಾಯ್ತು. ಇದರಲ್ಲಿ ತಲಾ 1 ಕೋಟಿ ರೂಪಾಯಿಗಳ ಯೋಜನೆಗಳು 24. ಇಷ್ಟೂ ಯೋಜನೆಗಳ ಶೇ. 100 ರಷ್ಟು ಹಣವನ್ನೂ ಜನರೇ ಕೊಡುಗೆಯಾಗಿ ತೊಡಗಿಸಿದರು. ಉಳಿದ 36 ಯೋಜನೆಗಳಲ್ಲಿ ಶೇ. 50 ರಷ್ಟು ಹಣ ಜನರಿಂದಲೇ ಬಂತು.

ಕಂಟ್ರಾಕ್ಟರ್‌ಗಳಿಗೆ ಕೊಡಲಿಲ್ಲ: ಈ ಯೋಜನೆಗಳ ಬಹುಪಾಲು ಇಂಜಿನಿಯರಿಂಗ್ ಕೆಲಸಗಳನ್ನು ಜನರೇ ಶ್ರಮದಾನದ ಮೂಲಕ ಮಾಡಿ ಮುಗಿಸಿದರು ಎಂಬುದು ಮತ್ತೊಂದು ವಿಶೇಷ. ಕೆಲವು ನಿರ್ದಿಷ್ಟ ಯೋಜನೆಗಳಲ್ಲಿ ಮಾತ್ರವೇ ಕಂಟ್ರಾಕ್ಟರ್‌ಗಳಿಂದ ಕೆಲಸ ಮಾಡಿಸಿದ್ದು.

ರಸ್ತೆಗಳು: ಅದೇ ರೀತಿ 93 ರಸ್ತೆಗಳನ್ನು ನಿರ್ಮಿಸುವ ಯೋಜನೆಯನ್ನು ರೂಪಿಸಲಾಯ್ತು. ಇವುಗಳಲ್ಲಿ 18 ರಸ್ತೆಗಳನ್ನು ಈಗಾಗಲೇ ಮುಗಿಸಲಾಗಿದೆ. ಇದರಲ್ಲಿ ಶೇ.50 ರಷ್ಟು ಹಣವನ್ನು ಪಂಚಾಯ್ತಿ ತೊಡಗಿಸಿದರೆ ಉಳಿದ ಶೇ.50 ಹಣವನ್ನು ಜನರು ಕೊಡುಗೆಯಾಗಿ ನೀಡಿದರು.

ರೈತರಿಗೆ: ಪಂಚಾಯತಿಯ ರೈತರಿಗೆ ಉಚಿತವಾಗಿ ಬೀಜಗಳು, ರಸಗೊಬ್ಬರಗಳನ್ನು ನೀಡಿದ ಪರಿಣಾಮವಾಗಿ 'ವಳವಣ್ಣ' ಪಂಚಾಯತಿಯ ವ್ಯಾಪ್ತಿಯಲ್ಲಿ ಕಳೆದ ವರ್ಷ 450 ಟನ್ ಇಳುವರಿ ಇದ್ದ ತರಕಾರಿಗಳು, ಈ ವರ್ಷ 780 ಟನ್‌ಗೆ ಹೆಚ್ಚಿತು. ತರಕಾರಿಯ ಕೊರತೆಯನ್ನು ನೀಗಿಸುವ ಸಲುವಾಗಿ ಕೈಗೊಂಡ ಕ್ರಮದ ಪರಿಣಾಮವಿದು.

ಹಣಕಾಸು ನಿರ್ವಹಣೆ: ರಾಜ್ಯ ಸರ್ಕಾರ ತನ್ನ ಬಜೆಟ್‌ನ ಸುಮಾರು ಶೇ. 40ರಷ್ಟನ್ನು ಪಂಚಾಯತಿಗಳಿಗೆಂದು ಆ ವರ್ಷ ತೀರ್ಮಾನಿಸಿತು. ಇದರ ಪ್ರಕಾರ ಒಂದು ಪಂಚಾಯತಿಗೆ ಸರಾಸರಿ 75 ಲಕ್ಷ ರೂಗಳನ್ನು ಸಹಾಯಧನವಾಗಿ ನೀಡಲಾಗುತ್ತದೆ. ಇದು ಸರ್ಕಾರದಿಂದ ಬರುವ ಆದಾಯವಾದರೆ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಆದಾಯಗಳಿರುತ್ತವೆ. ಉದಾಹರಣೆಗೆ ವಳವಣ್ಣ ಪಂಚಾಯತಿಯಲ್ಲಿ ಮನೋರಂಜನಾ ತೆರಿಗೆ -8 ಲಕ್ಷರೂ, ಮನೆಗಂದಾಯ-9 ಲಕ್ಷರೂ., ಮತ್ತಿತರೆ ರೂಪಗಳಲ್ಲಿ 25 ಲಕ್ಷ ರೂಗಳು ಆದಾಯ ಬರುತ್ತದೆ.

ತಮ್ಮ ಒಟ್ಟಾರೆ ಖರ್ಚಿನ ಬಾಬ್ತನ್ನು ಪಂಚಾಯತಿಗಳು ಪ್ರಧಾನವಾಗಿ ಹೀಗೆ ಭಾಗ ಮಾಡಬೇಕಾಗುತ್ತದೆ - ಉತ್ಪಾದನಾ ಉದ್ದೇಶಗಳಿಗೆ ಶೇ. 40 ರಿಂದ 50, ಸೇವಾ ಉದ್ದೇಶಗಳಿಗೆ ಶೇ. 30 ರಿಂದ 40, ಮೂಲ ಸೌಕರ್ಯಗಳ ಅಭಿವೃದ್ಧಿಗೆ ಶೇ. 10 ರಿಂದ 20 ಎಂದು ವಿಭಾಗಿಸಲಾಗಿದೆ.

ಈ ಪಂಚಾಯತ್‌ನಲ್ಲಿ 18 ಜನ ಸಿಬ್ಬಂದಿಯಿದ್ದು ಎಲ್ಲರಿಗೂ ಪಂಚಾಯಿತಿಯಿಂದಲೇ ವೇತನ ನೀಡಲಾಗುತ್ತಿದೆ. ಅಧ್ಯಕ್ಷರಿಗೆ ರೂ.3500/-, ಉಪಾಧ್ಯಕ್ಷರಿಗೆ ರೂ..2500/-, ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೂ ರೂ 1500/-, ಸದಸ್ಯರಿಗೆ ರೂ.1000/-. ಪಂಚಾಯತಿ ಕಾರ್ಯದರ್ಶಿ ಸರ್ಕಾರಿ ನೌಕರರಾಗಿದ್ದು ಅವರಿಗೆ ಸರ್ಕಾರವೇ 9000/- ರೂ ವೇತನ ನೀಡುತ್ತದೆ.

ಫಲಾನುಭವಿಗಳನ್ನು ಗುರುತಿಸುವುದು

ಪ್ರತೀ ಗ್ರಾಮ ಸಭಾಗಳೂ ಪ್ರತೀ ವಿಷಯಕ್ಕೆ ಸಂಬಂಧಿಸಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸುತ್ತವೆ. ಅಂಗವಿಕಲರು, ವಿಧವೆಯರು, ದುರ್ಬಲ ವರ್ಗಗಳು, ಮಹಿಳೆಯರು ಮುಂತಾದವರಿಗೆ ಆದ್ಯತೆಯನ್ನು ನೀಡಲಾಗುವುದು.

ನೆರೆಹೊರೆಯ ಗುಂಪುಗಳು:

ಮಹಿಳೆಯರಿಗೆ ವಿಶೇಷವಾದ, ಗ್ರಾಮ ಸಭೆಗಳಿಗಿಂತ ಕೆಳಹಂತದಲ್ಲಿ "ನೆರೆಹೊರೆಯ ಗುಂಪು" ಗಳನ್ನು ರಚಿಸಲಾಗಿದೆ. ಪ್ರತೀ ದಿನ ಮಧ್ಯಾಹ್ನ 3 ರಿಂದ 5 ಗಂಟೆಯ ಒಳಗೆ ಈ ಗುಂಪುಗಳು ಸಭೆ ಸೇರುತ್ತವೆ. ಯೋಜನೆಯನ್ನು ಜಾರಿಗೊಳಿಸಲು ಇವು ಒಂದು ರೀತಿ ಕಾವಲು ಸಮಿತಿಗಳಿದ್ದಂತೆ. ಈ ಗುಂಪುಗಳು ಉತ್ಪಾದನಾ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಬಗ್ಗೆ ಫಲಾನುಭವಿಗಳ ಬಗ್ಗೆ, ಶ್ರಮದಾನದ ಬಗ್ಗೆ ಮುಂತಾದ ವಿಷಯಗಳನ್ನು ಚರ್ಚಿಸುತ್ತವೆ. ಈ ಪ್ರಯತ್ನದಿಂದಾಗಿ ಇಡೀ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ತೀವ್ರಗೊಳಿಸಲಾಗಿದೆ. ಕೆಲಸ ಕಾರ್ಯಗಳಲ್ಲಿ ಪುರುಷರಷ್ಟೇ ಸಮಾನವಾಗಿ ತೊಡಗುವುದಲ್ಲದೆ, ಆಡಳಿತದಲ್ಲೂ ಸಹ ಅತ್ಯಂತ ಆತ್ಮವಿಶ್ವಾಸದಿಂದ ಭಾಗವಹಿಸುತ್ತಾರೆ. ಮಹಿಳಾ ಪ್ರತಿನಿಧಿಗಳ ಬದಲಿಗೆ ಅವರ ಗಂಡಂದಿರು ಆಡಳಿತ ಮಾಡುವ ಪರಿಸ್ಥಿತಿಯಲ್ಲಿ ದೊಡ್ಡ ರೀತಿಯ ಬದಲಾವಣೆಯನ್ನು ಇಲ್ಲಿ ಕಾಣಬಹುದಾಗಿದೆ.

ಕೃಷಿ ಕಾರ್ಮಿಕರು:- ಕೃಷಿ ಕೂಲಿಗಾರರನ್ನು ಪಂಚಾಯತ್ ವ್ಯಾಪ್ತಿಯಲ್ಲಿ ರಿಜಿಸ್ಟರ್ ಮಾಡುವ ವ್ಯವಸ್ಥೆಯಿದೆ. ವಿವಿಧ ಯೋಜನೆಗಳಿಗೆ ಬೇಕಾಗುವ ಕೆಲಸಗಾರರನ್ನು ಆಯ್ಕೆ ಮಾಡುವಾಗ ಈ ರೀತಿ ದಾಖಲಾದ ಕೃಷಿ ಕಾರ್ಮಿಕರಿಗೆ ಆದ್ಯತೆ ನೀಡಲಾಗುವುದು.

ಪ್ರಜಾಪ್ರಭುತ್ವದ ಒಂದು ಉನ್ನತ ಉದಾಹರಣೆಯಾಗಿ, ಪಂಚಾಯತ್‌ಗಳನ್ನು ನಿಜವಾಗಿ ಹೇಗೆ ಅಧಿಕಾರ ವಿಕೇಂದ್ರೀಕರಣದ ಮತ್ತು ಜನತೆಯ ಅಭಿವೃದ್ಧಿಯ ಸಾಧನಗಳನ್ನಾಗಿ ಮಾಡಬಹುದು ಎಂಬುದಕ್ಕೆ ಸಿಪಿಐ(ಎಂ) ನೇತೃತ್ವದ ಸರ್ಕಾರ ಕೇರಳದಲ್ಲೊಂದು ಮಾದರಿಯನ್ನು ಮುಂದಿಟ್ಟಿದೆ.

ಪಂಚಾಯತ್ ವ್ಯವಸ್ಥೆಯನ್ನು ಅಧಿಕಾರಶಾಹಿಗೊಪ್ಪಿಸಿ, ಜನರ ಹಣವನ್ನು ನುಂಗಿ ನೀರು ಕುಡಿಯುವ ಭ್ರಷ್ಟ ವ್ಯವಸ್ಥೆ ಇತರೆ ಪಕ್ಷಗಳ ರಾಜ್ಯ ಸರ್ಕಾರಗಳಿರುವ ಕಡೆ ತಾಂಡವಾಡುತ್ತಿರುವಾಗ ತಳದಲ್ಲಿ ಕೋಟ್ಯಾಂತರ ಜನರ ಭಾಗವಹಿಸುವಿಕೆಯ ಬೆಂಬಲದೊಂದಿಗೆ ಪಂಚಾಯತ್‌ಗಳಲ್ಲಿ ಜನರೇ ರೂಪಿಸಿದ ಯೋಜನೆಗಳನ್ನು ಜಾರಿಗೊಳಿಸುವ ಜನಪರ ಕಾರ್ಯಕ್ರಮ 'ಜನತಾ ಯೋಜನೆ' ನಮ್ಮ ಮುಂದಿದೆ. ಇಂತಹ ಪರ್ಯಾಯಕ್ಕಾಗಿ ಜನಚಳುವಳಿ ಕಟ್ಟುವುದೇ ನಾವು ನಮ್ಮ ರಾಜ್ಯದಲ್ಲಿ ಮಾಡಬಹುದಾದ ತಕ್ಷಣದ ಕೆಲಸವಾಗಿದೆ.

ಭೂಸುಧಾರಣೆ, ಕನಿಷ್ಟ ಕೂಲಿಯ ಅಭಾವ, ಸಾಮಾಜಿಕ ದಮನ ಜಹಾನಾಬಾದ್ ಹತ್ಯಾಕಾಂಡಗಳಿಗೆ ಕಾರಣ

- ಸುರ್ಜಿತ್

ಮಾರ್ಚ್ 23 ರಂದು ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಕೃಷಿ ಕಾರ್ಮಿಕರು, ರೈತರು ಹಾಗೂ ಇತರ ಶ್ರಮಜೀವಿಗಳ ಒಂದು ಭಾರೀ ರ್‍ಯಾಲಿಯುನ್ನು ಉದ್ದೇಶಿಸಿ ಮಾತನಾಡುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರೈತರು ಮತ್ತು ಇತರ ಪ್ರಜಾಪ್ರಭುತ್ವವಾದಿ ಜನವಿಭಾಗಗಳು ಭೂಸುಧಾರಣೆಗಾಗಿ, ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿಗಾಗಿ ಹಾಗೂ ಸಾಮಾಜಿಕ ದಮನದ ಅಂತ್ಯಕ್ಕಾಗಿ ಭೂಹೋರಾಟ ಗಳನ್ನು ತೀವ್ರಗೊಳಿಸಬೇಕು ಎಂದು ಕರೆ ನೀಡಿದರು. ಇತ್ತೀಚಿನ ದಿನಗಳಲ್ಲಿ ಬಿಹಾರದಲ್ಲಿ, ಅದರಲ್ಲೂ ಮಧ್ಯ ಬಿಹಾರದ ಜಹಾನಾಬಾದ್ ಜಿಲ್ಲೆಯುಲ್ಲಿ ಮತ್ತೆ-ಮತ್ತೆ ನಡೆಯುತ್ತಿರುವ ಹತ್ಯಾಕಾಂಡಗಳ ಹಿಂದಿರುವ ಪ್ರಮುಖ ಕಾರಣಗಳು ಇವೇ ಎಂದು ಅವರು ಹೇಳಿದರು.

ಭೂಸುಧಾರಣೆಗಳ ಜ್ಯಾರಿ, ಕೋಮುವಾದದ ವಿರುದ್ಧ, ಬಿಹಾರದ ವಿಭಜನೆಯ ವಿರುದ್ಧ ಹಾಗೂ ಇತರ ಕೆಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿಗೆ ಪಾಟ್ನಾದ ವಿಶಾಲ ಗಾಂಧೀ ಮೈದಾನದಲ್ಲಿ ಈ ರಾಜ್ಯಮಟ್ಟದ ರ್‍ಯಾಲಿಯುನ್ನು ಸಂಘಟಿಸಿತ್ತು. ಸಾವಿರಾರು ಕೃಷಿ ಕೂಲಿಕಾರರು, ಭೂಹೀನ, ಬಡರೈತರು, ಅವರಲ್ಲಿ ಅಪಾರ ಸಂಖ್ಯೆಯಲ್ಲಿದ್ದ ಮಹಿಳೆಯರು, ಬುಡಕಟ್ಟು ಜನಗಳು, ದಲಿತರು ಇತರರು ಈ ಸಂದರ್ಭದಲ್ಲಿ ನಡೆದ ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿದರು.

ತಮ್ಮ ಸಂಕುಚಿತ ರಾಜಕೀಯ ಲಾಭಕ್ಕಾಗಿ ಈ ಮೆರವಣಿಗೆ ಹಾಗೂ ಸುರ್ಜಿತ್‌ರ ಸಾಮೂಹಿಕ ಸಭೆ ನಡೆಯದಂತೆ ಮಾಡಲು ಬಿಜೆಪಿ - ಸಮತಾ ಕೂಟ ಇದೇ ದಿನದಂದು ಬಿಹಾರ ಬಂದ್‌ಗೆ ಕರೆ ನೀಡಿತ್ತು ಎಂದು ಬಿಹಾರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಪತ್ರಿಕಾ ಹೇಳಿಕೆಯೊಂದರಲ್ಲಿ ಆಪಾದಿಸಿದೆ.

ಆದರೆ ಬಿಜೆಪಿ-ಸಮತಾ ಕೂಟದ ಪ್ರಯತ್ನಗಳೆಲ್ಲಾ ವಿಫಲಗೊಳಿಸಿ ಮಾರ್ಚ್ 22 ರಿಂದಲೇ ಸಾವಿರಾರು ಮಂದಿ ರೈಲು ರಸ್ತೆಗಳಲ್ಲಿ ಪಾಟ್ನಾ ತಲುಪಲಾರಂಭಿಸಿದರು. ಬಿಹಾರ ಬಂದ್ ಹಿನ್ನೆಲೆಯಲ್ಲಿ ಹಾಕಿದ್ದ 144ನೇ ಸೆಕ್ಷನನ್ನು ಉಪೇಕ್ಷಿಸಿ ಮೆರವಣಿಗೆ ನಡೆಸಿದರು. ಈ ರ್‍ಯಾಲಿಯ ಮೊದಲು ಬ್ಲಾಕ್ ಮಟ್ಟದ ಸಭೆಗಳು, ಜೀಪ್ ಜಾಥಾಗಳು ರಾಜ್ಯಾದ್ಯಂತ ನಡೆದಿದ್ದವು.

ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಮಂಡಿಸಿದ ನಿರ್ಣಯವನ್ನು ರ್‍ಯಾಲಿ ಅಂಗೀಕರಿಸಿತು. ನಿರ್ಣಯ ಜಹನಾ ಬಾದ್ ಜಿಲ್ಲೆಯಲ್ಲಿನ ಸಾಮೂಹಿಕ ಹತ್ಯೆಗಳನ್ನು ಖಂಡಿಸಿತು.

ದುಃಖತಪ್ತ ಕುಟುಂಬಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿತು. ಮಧ್ಯ ಬಿಹಾರದಲ್ಲಿ ಸಕ್ರಿಯರಾಗಿರುವ ಭೂಮಾಲಕರ ಖಾಸಗಿ ಸೇನೆ ರಣವೀರ್ ಸೇನಾ ಹಾಗೂ ವಿವಿಧ ಬಣಗಳ ನಕ್ಸಲೀಯರು ಹೆಂಗಸರು, ಮಕ್ಕಳು ಸೇರಿದಂತೆ ಮುಗ್ಧ ಜನಗಳ ಕೊಲೆಗಳನ್ನು ನಡೆಸಿ ಇದನ್ನೊಂದು ಅಘೋಷಿತ ಜಾತಿ ಸಮರವನ್ನಾಗಿ ಪರಿವರ್ತಿಸುತ್ತಿದ್ದಾನೆ ಎಂದ ನಿರ್ಣಯ ರಣವೀರ ಸೇನಾ ಮತ್ತು ಉಗ್ರಗಾಮಿಗಳ ಜಾತೀವಾದಿ ನಿಲುವನ್ನು ಖಂಡಿಸಿತು.

ಭೂಸುಧಾರಣೆಗಳು, ಕೃಷಿಕಾರ್ಮಿಕರಿಗೆ ಕೂಲಿಯ ಪ್ರಶ್ನೆಗಳ, ಪರಿಹಾರ, ದಲಿತರ ಸಾಮಾಜಿಕ, ಆರ್ಥಿಕ ಉದ್ಧಾರ ಇವನ್ನೆಲ್ಲಾ ಹಿಂದಕ್ಕೆ ತಳ್ಳಿ ಜಾತಿ ವಿಭಜನೆಗಳನ್ನು ಮುಂದೊತ್ತಿ ಬಡರೈತರು ಮತ್ತು ಕೃಷಿ ಕೂಲಿಕಾರರನ್ನು ವಿಭಜಿಸಿ, ಅವರ ಐಕ್ಯ ಹೋರಾಟಗಳನ್ನು ದುರ್ಬಲಗೊಳಿಸುವ ಈ ನಿಲುವಿನ ಪ್ರಯೋಜನವನ್ನು ಎಲ್ಲಾ ಬಂಡವಾಳಶಾಹಿ - ಭೂಮಾಲಕ ಪಕ್ಷಗಳು ಪಡೆಯುತ್ತವೆ ಎಂದು ನಿರ್ಣಯ ಹೇಳಿದೆ.

ಲಾಲೂ-ರಾಬ್ರಿ ಸರಕಾರದ ಭ್ರಷ್ಟ ಹಾಗೂ ಪ್ರಜಾಪ್ರಭುತ್ವ-ವಿರೋಧಿ ದುರಾಡಳಿತದ ಪ್ರಯೋಜನ ಪಡೆದು ಕೋಮುವಾದಿ ಹಾಗೂ ಫ್ಯಾಸಿಸ್ಟ್ ಬಿಜೆಪಿ ಮತ್ತು ಸಂಘ ಪರಿವಾರ ಬಿಹಾರದಲ್ಲಿ ಭಾರೀ ಗಲಭೆ ಎಬ್ಬಿಸುತ್ತಿದೆ, 356ನೇ ಕಲಮಿನ ದುರುಪಯೋಗಕ್ಕಿಳಿದಿದೆ ಎಂದು ನಿರ್ಣಯ ಖಂಡಿಸಿದೆ.

52 ವರ್ಷಗಳ ಸ್ವಾತಂತ್ರ್ಯದ ನಂತರವೂ ಬಿಹಾರ ಆರ್ಥಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ಇನ್ನೂ ಹಿಂದುಳಿದಿದೆ. ಬಹುಪಾಲು ರೈತಾಪಿ ಜನ ಬಡಜನ, ಹಸಿವಿನಿಂದ ನರಳುತ್ತಿದ್ದಾರೆ ಎಂದು ಸುರ್ಜಿತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಎಲ್ಲಾ ಬಂಡವಳಾಶಾಹೀ ಪಕ್ಷಗಳು ಅಧಿಕಾರ ದಕ್ಕಿಸಿಕೊಳ್ಳಲು ವಿವಿಧ ಪ್ರಶ್ನೆಗಳನ್ನು ಎತ್ತುತ್ತಿವೆ, ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ಭೂಕ್ರಾಂತಿಯ ಮೂಲಕ ಮೂಲಭೂತ ಬದಲಾವಣೆಗಳನ್ನು ತಂದು ಜನಗಳ ಹಿತಸಾಧನೆಗಾಗಿ ದೃಢ ನಿರ್ಧಾರದಿಂದ ಹೋರಾಡುತ್ತಿವೆ. ಸ್ವಾಮಿ ಸಹಜಾನಂದ ಸರಸ್ವತಿಯವರ ಮಹಾನ್ ಕೊಡುಗೆಯ ಬಗ್ಗೆಯೂ ಈ ಬಂಡವಾಳಶಾಹಿ-ಭೂಮಾಲಕ ಪಕ್ಷಗಳು ತಪ್ಪು ಸಂದೇಶ ಹರಡುತ್ತಿವೆ. ಬಿಹಾರದ ಜನತೆ ಈ ಪಕ್ಷಗಳ ಅಪಪ್ರಚಾರದಿಂದ ದಾರಿ ತಪ್ಪಿದೆ. ಭೂ ಸುಧಾರಣೆಯೂ ಸೇರಿದಂತೆ ಮೂಲಭೂತ ಬದಲಾವಣೆ ಗಳಿಂದಾಗಿ ಹೋರಾಡಬೇಕು ಎಂದು ಸುರ್ಜಿತ್ ಕರೆ ನೀಡಿದರು.

ಎಡ ಮತ್ತು ಧರ್ಮನಿರಪೇಕ್ಷ ಪಕ್ಷಗಳು ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಪ್ರಶ್ನೆಯನ್ನು ಬಲವಾಗಿ ಎತ್ತಿಕೊಂಡಾಗ ಕಾಂಗ್ರೆಸ್ ನಿರ್ವಾಹವಿಲ್ಲದೆ ವಿರುದ್ಧ ಮತ ನೀಡಬೇಕಾಗಿ ಬಂತು. 356ನೇ ಕಲಮಿನ ಮೂಲಕ ಆರ್.ಎಸ್.ಎಸ್. ಅಧಿಕಾರ ವಹಿಸಿಕೊಳ್ಳಲು ಎಂದೂ ಬಿಡಬಾರದು, ದೇಶವನ್ನು ವಿಭಜಿಸಲು ಈ ಸಂಘ ಪರಿವಾರಕ್ಕೆ ಎಂದೂ ಅವಕಾಶ ಕೊಡ ಬಾರದು ಎಂದು ಸುರ್ಜಿತ್ ಹೇಳಿದರು.

ಕೇಂದ್ರದ ವಾಜಪೇಯಿ ಸರಕಾರದ ಪತನ ಖಂಡಿತ. ಏಕೆಂದರೆ ಅವರ ಬಳಿ ಜನರಿಗಾಗಿ ಏನೂ ಕಾರ್ಯಕ್ರಮವಿಲ್ಲ, ಅವರು ದೇಶದ ಸ್ವಾತಂತ್ರ್ಯದ ಬಗ್ಗೆ ಯಾವುದೇ ಬದ್ಧತೆ, ಭಾವನೆಯಿಲ್ಲದವರು ಎಂದು ಸುರ್ಜಿತ್ ಹೇಳಿದರು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ಮಾತನಾಡುತ್ತಾ ಬಿಹಾರದಲ್ಲಿನ ಪ್ರಸಕ್ತ ಹೋರಾಟದ 3 ಪ್ರಶ್ನೆಗಳನ್ನು ಎತ್ತಿದರು - ಭೂಸುಧಾರಣೆ, ರಾಜ್ಯದ ಆರ್ಥಿಕ ಬೆಳವಣಿಗೆ ಮತ್ತು ಬಡವರಿಗೆ ಪರಿಹಾರ ಹಾಗೂ ಬಿಹಾರದ ಇತಿಹಾಸದ ಹಾಗೂ ಈಗಲೂ ಕೂಡಾ ತಳಪಾಯವಾಗಿರುವ ಪರಂಪರೆಯಾಗಿರುವ ಧರ್ಮ ನಿರಪೇಕ್ಷತೆಯ ರಕ್ಷಣೆ ಬಿಹಾರ್ ಬಂದ್ ಮೂಲಕ ರ್‍ಯಾಲಿಯನ್ನು ವಿಫಲಗೊಳಿಸುವ ಕೋಮುವಾದಿಗಳ ಸಂಚನ್ನು ನಿಷ್ಫಲ ಗೊಳಿಸಿದ ಜನಗಳನ್ನು ಅವರು ಅಭಿನಂದಿಸಿದರು. ಸಾಮಾಜಿಕ ನ್ಯಾಯ ವನ್ನು ಕೇವಲ ಮೀಸಲಾತಿಗೆ ಸೀಮಿತ ಗೊಳಿಸಲು ಸಾಧ್ಯವಿಲ್ಲ. ಆರ್ಥಿಕ ಮತ್ತು ಸಾಮಾಜಿಕ ಉದ್ಧಾರದಿಂದ ಮಾತ್ರವೇ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯ. ಮಂಡಲ್ ಆಯೋಗ ಕೂಡಾ ಸಾಮಾಜಿಕ ನ್ಯಾಯ ಅಂತಿಮವಾಗಿ ಭೂಸುಧಾರಣೆ ಯನ್ನು ಅವಲಂಬಿಸಿದೆ ಎಂದಿದೆ. ಆದರೆ ಜಾತಿವಾದಿ ಶಕ್ತಿಗಳು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಕೇವಲ ರಾಜಕೀಯ ಉದ್ದೇಶಗಳಿಗಾಗಿ ಬಳಸಿ ಕೊಳ್ಳುತ್ತಿವೆ ಎಂದ ಯೆಚೂರಿಯವರು ಒಗ್ಗಟ್ಟಿನಿಂದ ನಿಮ್ಮೆಲ್ಲರ ಶತ್ರುವಿನ ವಿರುದ್ಧ ಹೋರಾಟ ಎಂದು ಬಿಹಾರದ ಎಲ್ಲಾ ಶ್ರಮಜೀವಿ ಹಾಗೂ ಬಡ ವಿಭಾಗಗಳಿಗೆ ಕರೆ ನೀಡಿದರು.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಸುಭೋದ್ ರಾಯ್, ಬಿಹಾರ ರಾಜ್ಯ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ವಿಜಯಕಾಂತ್ ಠಾಕೂರ್, ಬಿಹಾರ ಪ್ರಾಂತೀಯ ಖೇತಿಕರ್ ಮಜದೂರ್ ಯೂನಿಯನ್‌ನ ಅಧ್ಯಕ್ಷ ಸಾರಂಗಧರ್ ಪಾಸ್ವಾನ್, ಬಿಹಾರ ಸಿಐಟಿಯು ಪ್ರಧಾನ ಕಾರ್ಯದರ್ಶಿ ಜೆ.ಎಸ್.ಮಜುಂದಾರ್, ಬಿಹಾರದ ಡಿವೈಎಫ್‌ಐ ಅಧ್ಯಕ್ಷ ಅವದೇಶ್ ಕುಮಾರ್, ಜನವಾದಿ ಮಹಿಳಾ ಸಮಿತಿಯ ಪ್ರಧಾನ ಕಾರ್ಯದರ್ಶಿ ರಾಮ್ ಪಾರಿ, ಎಸ್.ಎಫ್.ಐ ಪ್ರಧಾನ ಕಾರ್ಯದರ್ಶಿ ಪ್ರೇಮಕಾಂತ್ ದಾಸ್ ಮತ್ತಿತರರು ಈ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಹಿಮಾಲಯ ಪ್ರದೇಶದಲ್ಲಿ ಮತ್ತೊಮ್ಮೆ ಭೂಕಂಪ

ಉತ್ತರ ಪ್ರದೇಶದ ಪರ್ವತ ಪ್ರದೇಶಗಳಲ್ಲಿ ಜನಗಳನ್ನು ಮತ್ತೊಮ್ಮೆ ಭೀಕರ ಭೂಕಂಪ ಕಕ್ಕಾಬಿಕ್ಕಿಯಾಗಿಸಿದೆ. ಇದುವರೆಗೆ ನೂರಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ವ್ಯಾಪಕವಾಗಿ ಮನೆ-ಮಠಗಳು ಧ್ವಂಸವಾಗಿವೆ. 8 ವರ್ಷಗಳ ಹಿಂದೆ ಉತ್ತರ ಕಾಶಿಯಲ್ಲಿ ಇಂತಹುದೇ ದೊಡ್ಡ ಭೂಕಂಪ ಸಂಭವಿಸಿತ್ತು. ಆದರಿಂದ ಉತ್ತರ ಪ್ರದೇಶ ಸರಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಎಚ್ಚೆತ್ತುಕೊಂಡು ಈ ಭೂಕಂಪದ ಅಪಾಯವಿರುವ ಹಿಮಾಲಯ ಪ್ರದೇಶದಲ್ಲಿ ದೀರ್ಘಕಾಲದ ಕ್ರಮಗಳನ್ನೇನೂ ಕೈಗೊಂಡಿಲ್ಲ. ಈಗಲಾದರೂ ತಕ್ಷಣ ಸಂಕಟಪೀಡಿತ ಜನಗಳಿಗೆ ತಕ್ಷಣ ಪರಿಹಾರ ಒದಗಿಸುವುದರೊಂದಿಗೆ ಈ ಸಮಸ್ಯೆಯ ಪರಿಹಾರಕ್ಕೆ ಸಮಗ್ರ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಪಡಿಸಿದೆ.

ತ್ರಿಪುರಾ:
ಕುಖ್ಯಾತ ಬೀರಚಂದ್ರಮಾನು ಹತ್ಯಾಕಾಂಡ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

ತ್ರಿಪುರಾದಲ್ಲಿ ಪ್ರಗತಿಪರರನ್ನು ರಾಜಕೀಯವಾಗಿ ಮುಗಿಸಿಬಿಡುವ ಅತ್ಯಂತ ದೊಡ್ಡ ಹಾಗೂ ಬರ್ಬರ ಪ್ರಯತ್ನದ ಕಥೆ ಮಾರ್ಚ್ 27 ರಂದು ಮುಕ್ತಾಯಗೊಂಡಿತು. ಸುಮಾರು 11 ವರ್ಷಗಳ ಹಿಂದೆ ಬೀರಚಂದ್ರಮಾನುನಲ್ಲಿ ಸಾಮೂಹಿಕ ಹತ್ಯಾಕಾಂಡ ನಡೆಸಿದ ಮೊಕದ್ದಮೆಯಲ್ಲಿ ಆಪಾದನೆ ಎದುರಿಸುತ್ತಿದ್ದ ಎಲ್ಲಾ 17 ಮಂದಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ತಪ್ಪಿಸಿಕೊಂಡ 11 ಮಂದಿಗೆ ಆಗಲೇ ಬಂಧನದ ವಾರಂಟ್ ಹೋಗಿದೆ.

ಕಾಂಗ್ರೆಸ್(ಐ) - ಟಿಯುಜೆಎಸ್‌ನ ಅರೆ-ಫ್ಯಾಸಿಸ್ಟ್ ಆಳ್ವಿಕೆಯಲ್ಲಿ ಅಕ್ಟೋಬರ್ 12, 1988 ರಂದು 11 ಸಿಪಿಐ(ಎಂ) ಮುಖಂಡರು ಹಾಗೂ ಕಾರ್ಯಕರ್ತರನ್ನು ಕಗ್ಗೊಲೆ ಮಾಡಲಾಯಿತು. ದಕ್ಷಿಣ ತ್ರಿಪುರಾದ ಬೀರಚಂದ್ರ ಮಾನುನಲ್ಲಿ ಕಾಂಗ್ರೆಸ್ ಗೂಂಡಾಗಳ ಅಭೂತಪೂರ್ವ ಭಯೋತ್ಪಾದನೆಯಿಂದಾಗಿ ತಾತ್ಕಾಲಿಕವಾಗಿ ಮುಚ್ಚಿದ್ದ ಪಕ್ಷದ ಸ್ಥಳೀಯ ಸಮಿತಿಯ ಕಚೇರಿಯನ್ನು ಮತ್ತೆ ತೆರೆಯಲು ಕೆಂಬಾವುಟವನ್ನು ಹಾರಿಸುವ ವೇಳೆಗೆ ಈ ಹತ್ಯಾಕಾಂಡವನ್ನು ನಡೆಸಲಾಗಿತ್ತು.

1988 ರಲ್ಲಿ ಮೋಸದಿಂದ ಚುನಾವಣಾ ಫಲಿತಾಂಶಗಳನ್ನು ತಿರುಚಿ ಅಧಿಕಾರಕ್ಕೆ ಬರುತ್ತಲೇ ಕಾಂಗ್ರೆಸ್-ಟಿಯುಜೆಎಸ್ ಕೂಟ ಸಿಪಿಐ(ಎಂ) ನ್ನು ರಾಜ್ಯದ ರಾಜಕೀಯ ನಕಾಶೆಯಿಂದಲೇ ಅಳಿಸಿ ಬಿಡುವ ಪ್ರಯತ್ನವನ್ನು ಬಹಿರಂಗವಾಗಿಯೇ ಆರಂಭಿಸಿತು. ಈ ಹತ್ಯಾಕಾಂಡದ ಸಂಪೂರ್ಣ ಯೋಜನೆಯಲ್ಲಿ ಕಾಂಗ್ರೆಸ್‌ನ ಉನ್ನತ ರಾಜ್ಯ ಮುಖಂಡರು ಭಾಗಿಗಳಾಗಿದ್ದರು. ಹತ್ಯಾಕಾಂಡದ ದಿನದಂದು ಕಾಂಗ್ರೆಸ್ (ಐ) ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಂದಾರ್ ಹತ್ತಿರದ ಡಾಕ್‌ಬಂಗ್ಲೆಯಲ್ಲಿ ಬಿಡಾರ ಮಾಡಿದ್ದರು. ಅದನ್ನೇ ನೆವ ಮಾಡಿಕೊಂಡು ಹತ್ತಿರದ ಹೆದ್ದಾರಿಯಲ್ಲಿ ಈ ಹತ್ಯಾಕಾಂಡ ವೇಳೆಯಲ್ಲಿ ಮತ್ತು ನಂತರ ಹಲವು ಗಂಟೆಗಳ ಕಾಲ ಎಲ್ಲಾ ವಾಹನಸಂಚಾರವನ್ನು ನಿಲ್ಲಿಸಲಾಗಿತ್ತು.

ದಕ್ಷಿಣ ತ್ರಿಪುರಾ ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ ಜನವರಿ 27 ರಂದು ಐಪಿಸಿಯ 302ನೇ ಸೆಕ್ಷನ್‌ನಡಿ ವಿಚಾರಣೆ ಆರಂಭಿಸಲಾಯಿತು. 36 ಮಂದಿ ಸಾಕ್ಷಿ ಹೇಳಿದರು. ಇದರಲ್ಲಿ 16 ಮಂದಿ ಕಣ್ಣಾರೆ ಕಂಡ ಸಾಕ್ಷಿಗಳು. ಮಾರ್ಚ್ 27 ರಂದು ಕಿಕ್ಕಿರಿದ ಕೋರ್ಟ್ ರೂಂನಲ್ಲಿ ಸೆಶನ್ಸ್ ನ್ಯಾಯಾಧೀಶ ಕೆ.ಡಿ. ಭೌಮಿಕ್ ಎಲ್ಲಾ 14 ಆಪಾದಿತರಿಗೆ ಜೀವಾವಧಿ ಶಿಕ್ಷೆ ವಿಧಿಸಿದರು. ಈ ಹತ್ಯಾಕಾಂಡದ ಯೋಜನೆ ಹಾಕಿದವರು ಪ್ರಸಕ್ತ ಕಾನೂನಿನಡಿ ತಪ್ಪಿಸಿಕೊಂಡರು, ಅವರ ಬಂಟರು ಹಾಗೂ ಈ ಅತ್ಯಂತ ರಕ್ತರಂಜಿತ ರಾಜಕೀಯ ಕೊಲೆ ಪ್ರಕರಣದಲ್ಲಿ ಅವರ ದಾಳಗಳಾಗಿದ್ದವರು ಹೇಗೋ ಮರಣದಂಡನೆಯಿಂದ ತಪ್ಪಿಸಿಕೊಂಡರು.

ಡಿವೈಎಫ್‌ಐ ಸಮ್ಮೇಳನಗಳು

ಪುಟ 3 ರಿಂದ

ಎಂದು ಎಸ್.ಎನ್. ಕೃಷ್ಣದಾಸ್ ಅಧ್ಯಕ್ಷರು ಎಂ.ಪಿ. ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. ಅದಕ್ಕೆ ಮುಂಚೆ ರಾಜ್ಯ ಸಮ್ಮೇಳನಗಳು ನಡೆಯಲಿದೆ ಎಂದು ಕೃಷ್ಣ ದಾಸ್ ತಿಳಿಸಿದರು.

5 ನೇ ಅಖಿಲ ಭಾರತ ಸಮ್ಮೇಳನದ ನಂತರ ಡಿ.ವೈ.ಎಫ್.ಐ. ಸದಸ್ಯತ್ವ ಜಾಸ್ತಿಯಾಗಿದೆ. 1 ಕೋಟಿ, 3 ಲಕ್ಷ ಸದಸ್ಯರನ್ನು ಡಿ.ವೈ.ಎಫ್.ಐ. ಸಂಘಟನೆ ಹೊಂದಿದೆ 1996 ರಲ್ಲಿ 92 ಸದಸ್ಯರಿದ್ದರು. ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ಯುವಜನ ಪೆಡರೇಷನ್‌ಗಳಲ್ಲಿ 1 ಕೋಟಿಗೂ ಹೆಚ್ಚು ಸದಸ್ಯರಿರುವ 2 ನೇ ದೊಡ್ಡ ಸಂಘಟನೆ ಡಿ.ವೈ.ಎಫ್.ಐ. ಆಗಿದೆ. ಚೀನಿ ಯೂತ್ ಲೀಗ್ ಅಂತರಾಷ್ಟ್ರೀಯ ಮಟ್ಟದಲ್ಲಿ ಅತಿದೊಡ್ಡ ಸಂಘಟನೆ.

1991 ರ ನಂತರ ಯುವಜನ ಸಂಘಟನೆ ಒಂದು ರೀತಿಯ ಮಂದಗತಿಯಲ್ಲಿತ್ತು. ಆದರೆ ಕಳೆದ 2 ವರ್ಷಗಳಿಂದ ಸಮ್ರಾಜ್ಯಶಾಹಿಗೆದುರಾಗಿ ಹಾಗೂ ಉಗ್ರಗಾಮಿ ವಿರುದ್ಧದ ಹೋರಾಟ ಸಂಘಟನೆಯನ್ನು ಶಕ್ತಿಗೊಳಿಸಿದೆ.

ಈ ಸಮ್ಮೇಳನಕ್ಕೆ ಅಂತರಾಷ್ಟ್ರೀಯ ಯುವಜನ ಪೆಡರೇಷನ್ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

"ರಾಮ-ಸಾಗರದಲ್ಲಿ ನೂತನ ಡಿ.ವೈ.ಎಫ್.ಐ. ಘಟಕ ಸ್ಥಾಪನೆ

ಇತ್ತೀಚೆಗೆ ಹೊಸಪೇಟೆ ತಾಲೂಕಿನ ರಾಮಸಾಗರದಲ್ಲಿ ನೂತನ ಡಿ.ವೈ.ಎಫ್.ಐ. ಘಟಕವನ್ನು ಸ್ಥಾಪನೆ ಮಾಡಲಾಯಿತು. ಘಟಕ ಸ್ಥಾಪನೆಯ ಸಂದರ್ಭದಲ್ಲಿ ಹಾಜರಿದ್ದ ಡಿ.ವೈ.ಎಫ್.ಐ.ನ ತಾಲೂಕು ಅಧ್ಯಕ್ಷರಾದ ಎ. ಕರುಣಾನಿಧಿ ಮಾತನಾಡಿ ಸರ್ಕಾರಗಳು ಇತ್ತೀಚಿನ ದಿನಗಳಲ್ಲಿ ತನ್ನ ಕನಿಷ್ಠ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಸಂದರ್ಭದಲ್ಲಿ ವಿದ್ಯಾವಂತರಾದ ನಾವುಗಳು ಈ ಬಗ್ಗೆಯೋಚನೆ ಮಾಡದಿದ್ದರೆ ಜನತೆ ನಮ್ಮನ್ನು ಖಂಡಿತಾ ಕ್ಷಮಿಸಲಾರರು. ಆದ್ದರಿಂದ ಡಿ.ವೈ.ಎಫ್.ಐ. ಸಂಘಟನೆಯು ಜನಪರವಾಗಿ ಯೋಚಿಸುವ ಯುವಕರಿಗೆ ಅವರು ಕ್ರಿಯಾಶೀಲವಾಗಲು ಸಾಧ್ಯವಾಗುವಂತೆ ಒಂದು ವೇದಿಕೆಯನ್ನುಂಟು ಮಾಡಿಕೊಡುತ್ತದೆ ಎಂದರು.

ನಂತರ ಡಿ.ವೈ.ಎಫ್.ಐ.ನ ಉಪಾಧ್ಯಕ್ಷರಾದ ಎಸ್. ಅಶೋಕ ಮತ್ತೋರ್ವ ಮುಖಂಡರಾದ ಹೆಚ್.ಎಂ. ಜಂಬುನಾಥ ಮಾತನಾಡಿದರು. ಮುಖಂಡರುಗಳಾದ ಆರ್.ಭೀಮಸೇನ ರಾವ್, ಹೆಚ್. ರೇವಣ್ಣ, ಕೆ. ಗುರುರಾಜ ಮೊದಲಾದವರು ಹಾಜರಿದ್ದರು.

ಡಿ.ವೈ.ಎಫ್.ಐ.ನ ಸ್ಥಳೀಯ ಘಟಕದ ಅಧ್ಯಕ್ಷರಾಗಿ ಶ್ರೀ ಬಿ.ಟಿ. ಉಡುಚಲ ಹಾಗೂ ಕಾರ್ಯದರ್ಶಿಯಾಗಿ ಎಂ. ಸೋಮನಾಥ ಆಯ್ಕೆಯಾದರು. ಪದಾಧಿಕಾರಿಗಳಾಗಿ ಜೆ.ಜೆ. ಶಂಕರರಾವ್, ಹೆಚ್.ಸಿ. ಶ್ರೀನಿವಾಸ ಹಾಗೂ ಹೆಚ್. ನಾಗರಾಜ ಆಯ್ಕೆಯಾದರು. ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ. ಪಂಪಾಪತಿ, ಮುರಳಿ, ತಾಯಣ್ಣ, ರವಿಕುಮಾರ, ಮಲ್ಲಿಕಾರ್ಜುನ, ಶಿವಾಜಿ, ವಿರೂಪಾಕ್ಷಿ, ಮಂಜುನಾಥ ಹಾಗೂ ಲಕ್ಷ್ಮಣ ಆಯ್ಕೆಯಾದರು.

ಸಭೆಯಲ್ಲಿ ಮೂಲಭೂತ ಸೌಕರ್ಯಗಳಾದ ಬಸ್ ನಿಲುಗಡೆ, ಆಸ್ಪತ್ರೆ, ನ್ಯಾಯ ಬೆಲೆ ಅಂಗಡಿ, ಸೀಮೆಎಣ್ಣೆ, ರಸ್ತೆ ರಿಪೇರಿ, ನೀರಿನ ವ್ಯವಸ್ಥೆ ಮುಂತಾದವುಗಳನ್ನು ಒಂದು ನಿರ್ದಿಷ್ಟ ಸಮಯದೊಳಗೆ ಒದಗಿಸದೇ ಇದ್ದಲ್ಲಿ ಅವುಗಳ ಕುರಿತಾಗಿ ಹಂತ-ಹಂತವಾಗಿ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದೆಂದು ನಿರ್ಣಯಿಸಲಾಯಿತು. ಕೊನೆಯಲ್ಲಿ ನೂತನ ಘಟಕದ ಅಧ್ಯಕ್ಷರಾದ ಬಿ.ಟಿ. ಉಡುಚಲ ವಂದಿಸಿದರು.

ಕೆ.ಜಿ.ಎಫ್.ನಲ್ಲಿ ಯುವಜನ-ವಿದ್ಯಾರ್ಥಿಗಳ ಪ್ರತಿಭಟನೆ

ಮಾರ್ಚ್ 17 ರಂದು ಸಂಜೆ 4.00 ಗಂಟೆಯಿಂದ ಸುಮಾರು ಒಂದು ಗಂಟೆಗಳ ಕಾಲ ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ಕೆ.ಜಿ.ಎಫ್. ಸಮಿತಿಗಳು ಜಂಟಿಯಾಗಿ ವಿದ್ಯುತ್, ರಸ್ತೆ ಹಾಗೂ ಕುಡಿಯುವ ನೀರಿಗಾಗಿ ಪ್ರತಿಭಟನಾ ಕಾರ್ಯಕ್ರಮ ನಡೆಸಿದರು. ಶಾಲಾ ಕಾಲೇಜು ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಈ ಸಂದರ್ಭದಲ್ಲಿ ಆಗಾಗ ವಿದ್ಯುತ್ ಕಡಿತ ಗೊಳ್ಳುವುದರಿಂದ ಅವರ ಅಭ್ಯಾಸಕ್ಕೆ ತೀವ್ರ ತೊಂದರೆಯಾಗುತ್ತಿದೆಯಲ್ಲದೆ ಸಮಾಜ ಘಾತುಕ ಶಕ್ತಿಗಳ ಕಾರ್ಯಚರಣೆಗೆ ಒಳ್ಳೆಯ ಅವಕಾಶವನ್ನು ಕಲ್ಪಿಸುತ್ತದೆ. ರೈತರು ಕೂಡಾ ಇದರಿಂದ ತುಂಬಾ ತೊಂದರೆ ಗೀಡಾಗಿದ್ದಾರೆ. ಕೆ.ಜಿ.ಎಫ್.ನಲ್ಲಿರುವ ಹೆಚ್ಚು ಕಡಿಮೆ ಎಲ್ಲಾ ರಸ್ತೆಗಳೂ ಜಖಂಗೊಂಡು ಯಾರೂ ಕೇಳುವ ಸ್ಥಿತಿಯಲ್ಲಿಲ್ಲ. ಚುನಾಯಿತರಾದ ಜನಪ್ರತಿನಿಧಿಗಳಾಗಲೀ ಸಂಬಂಧಪಟ್ಟ ಅಧಿಕಾರಿಗಳಾಗಲೀ ಈ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿದ್ದಾರೆ. ಬೇತ ಮಂಗಲ ಕೆರೆಯಲ್ಲಿ ಬೇಕಾದಷ್ಟು ನೀರಿದ್ದರೂ, ಕೊಳವೆ ಬಾವಿಗಳಲ್ಲಿ ಯಥೇಚ್ಛ ನೀರು ದೊರಕುತ್ತಿದ್ದರೂ ಕೆ.ಜಿ.ಎಫ್.ನಲ್ಲಿ ಕುಡಿಯುವ ನೀರಿನ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಈ ಸಮಸ್ಯೆಗಳ ಬಗ್ಗೆ ಸರಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನ ಸೆಳೆಯಲು ಹಾಗೂ ಸಮಸ್ಯೆ ಬಗೆಹರಿಸದಿದ್ದಲ್ಲಿ ಮುಂದೆ ಉಗ್ರ ಹೋರಾಟ ಕೈಗೊಳ್ಳುವ ಎಚ್ಚರಿಕೆಯಾಗಿ ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ.ನ ಸುಮಾರು 60 ಕ್ಕೂ ಹೆಚ್ಚು ಮಂದಿ ಕಾರ್ಯಕರ್ತರು ರಾಬರ್ಟ್‌ಸನ್ ಪೇಟೆಯ ಗಾಂಧೀ ವೃತ್ತದ ಬಳಿ ಘೋಷಣೆಗಳನ್ನು ಕೂಗಿ, ಬಿತ್ತಿ ಫಲಕಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ಇದರ ನೇತೃತ್ವವನ್ನು ಡಿ.ವೈ.ಎಫ್.ಐ. ಸಮಿತಿಯ ಅಧ್ಯಕ್ಷ ಶ್ರೀ ಎ.ಆರ್. ಬಾಬು, ಕಾರ್ಯದರ್ಶಿ ಕೆ. ರವೀಂದ್ರ, ಉಪಾಧ್ಯಕ್ಷ ಶ್ರೀ ವಿಜಯ ಕುಮಾರ್, ಜಂಟೀಕಾರ್ಯದರ್ಶಿ ಎಸ್. ಆನಂದನ್ ಖಜಾಂಚಿ ನಿಕ್ಸನ್, ರಾಜಕ್ರೂಸ್, ಕಣ್ಣನ್, ಚಂದ್ರಮೂರ್ತಿ, ದಕ್ಷಿಣಾ ಮೂರ್ತಿ ಮತ್ತು ಎಸ್.ಎಫ್.ಐ.ನ ಅಧ್ಯಕ್ಷರಾದ ಪಿ. ತಂಗರಾಜ್, ಕಾರ್ಯದರ್ಶಿ ತೆನ್ನರಸು ರವರು ವಹಿಸಿದ್ದರು.

ಯುರೋಪಿಯನ್ ಒಕ್ಕೂಟ ಕಮೀಶನರುಗಳ ಸಾಮೂಹಿಕ ರಾಜೀನಾಮೆ

ಯುರೋಪಿಯನ್ ಕಮೀಶನ್‌ನ ಎಲ್ಲಾ ಇಪ್ಪತ್ತು ಕಮೀಶನರುಗಳು ಸಾಮೂಹಿಕವಾಗಿ ರಾಜೀನಾಮೆ ನೀಡಿದ್ದಾರೆ-ಅಧ್ಯಕ್ಷರು ಸೇರಿದಂತೆ ಈ ಅಭೂತಪೂರ್ವ ರಾಜೀನಾಮೆಗೆ ಕಾರಣ ಕಮೀಶನರುಗಳ ಮೇಲೆ ಸ್ವತಂತ್ರ ತನಿಖಾ ತಂಡ ಅವರ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಧ್ಯಕ್ಷತೆಯ ಅಪಾದನೆಗಳನ್ನು ಖಚಿತಗೊಳಿಸಿದ್ದು ಯುರೋಪಿಯನ್ ಕಮೀಶನ್‌ನ 40 ವರ್ಷಗಳ ಇತಿಹಾಸದಲ್ಲಿ ಇಂತಹ ಗುರುತರ ಅಪಾದನೆ, ಸಾಮೂಹಿಕ ರಾಜೀನಾಮೆ ನಡೆಯುತ್ತಿರುವುದು ಇದೇ ಮೂಲ. ಯುರೋಪಿಯನ್ ಕಮೀಶನ್‌ನ ಸದಸ್ಯರ ಮೇಲೆ ಗುರುತರ ಆಪಾದನೆ ಹಿನ್ನೆಲೆಯಲ್ಲಿ ಯುರೋಪಿಯನ್ ಪಾರ್ಲಿಮೆಂಟು ಸ್ವತಂತ್ರ ತನಿಖಾ ತಂಡವೊಂದನ್ನು ನೇಮಿಸಿತ್ತು. ಅದರ ವರದಿ ಹಿನ್ನೆಲೆಯಲ್ಲಿ ಕಮೀಶನರುಗಳ ವಜಾ ಬದಲು ಛೀಮಾರಿ ಹಾಕುವತ್ತ ಯುರೋಪಿಯನ್ ಪಾರ್ಲಿಮೆಂಟು ನಡೆಯುತ್ತಿತ್ತು.

ಈ ರಾಜೀನಾಮೆ ಒಬ್ಬ ಅಧ್ಯಕ್ಷ 2 ಕಮೀಶನರುಗಳು 17 ಸಾವಿರ ಸಿಬ್ಬಂದಿ ಹೊಂದಿರುವ ಯುರೋಪಿಯನ್ ಕಮೀಶನ್‌ನ ಅಧಿಕಾರಶಾಹಿಯ ಮೇಲೆ ತೀವ್ರ ಪರಿಣಾಮ ಬೀರಲಿದೆ. ಯುರೋಪಿಯನ್ ಒಕ್ಕೂಟ ಆರ್ಥಿಕ ಹಣಕಾಸು ವಿಷಯದಲ್ಲಿ ಕೇಂದ್ರೀಕೃತ ವ್ಯವಸ್ಥೆಯತ್ತ ಚಲಿಸುತ್ತಿರುವ ಹಿನ್ನೆಲೆಯಲ್ಲಿ ಯುರೋಪಿಯನ್ ಕಮೀಶನ್ ಯುರೋಪಿನ ಸೂಪರ್-ಸರ್ಕಾರ ಬ್ರಿಟನ್, ಫ್ರಾನ್ಸ್ ಜರ್ಮನಿಯ ರಾಷ್ಟ್ರೀಯ ಸರ್ಕಾರಗಳ ಅಧಿಕಾರಿಗಳು ಹೆಚ್ಚು ಹೆಚ್ಚಾಗಿ ಯುರೋಪಿಯನ್ ಕಮೀಶನ್‌ಗೆ ಹಸ್ತಾಂತರವಾಗುತ್ತಿರುವ ಹಿನ್ನೆಲೆಯಲ್ಲಿ ಈಗ ಅದು ಅಪಾರ ಅಧಿಕಾರ ಸಂಪನ್ಮೂಲ ಹೊಂದಿದೆ. ಯುರೋಪಿಯನ್ ಕಮೀಶನ್ ಬ್ಯೂರಾಕ್ರಾಸಿ ಮೇಲೆ ಪಾರ್ಲಿಮೆಂಟಿನ ನಿಯಂತ್ರಣವೂ ದುರ್ಬಲವಾದದ್ದೇ. ಯುರೋಪಿನ ದೇಶಗಳ ಅಭಿವೃದ್ಧಿ ಪ್ರಜಾಸತ್ತೆಗೆ ಹೋಲಿಸಿದರೆ ಕಮೀಶನ್ ಬಹಳ ಅಪ್ರಜಾಸತ್ತಾತ್ಮಕ ವ್ಯವಸ್ಥೆ ಇಂತಹ ವ್ಯವಸ್ಥೆ ತಂದಿರುವುದು, ಯುರೋಪಿನ ಗುತ್ತೇದಾರಿ ಬಹುರಾಷ್ಟ್ರೀಯ ಕಂಪನಿಗಳು ಯುರೋಪನ್ನು ತಮ್ಮ ಅಧಿಪತ್ಯಕ್ಕೆ ಒಳಪಡಿಸುವ ಪ್ರಯತ್ನದ ಭಾಗವಾಗಿ. ಯುರೋಪಿನ ದೇಶಗಳ ಪ್ರಜಾಸತ್ತೆ ವ್ಯವಸ್ಥೆ ಈ ಗುತ್ತೇದಾರಿ ಬಹುರಾಷ್ಟ್ರೀಯ ಕಂಪನಿಗಳಿಗೆ ತೊಡಕಾಗಿ ಕಾಣಿಸುತ್ತಿದೆ. ಈ ಕಂಪನಿಗಳ ಪ್ರಯತ್ನದಲ್ಲಿ ಯುರೋಪಿಯನ್ ಕಮೀಶನ್‌ನ ಈ ಬಿಕ್ಕಟ್ಟು ತೀವ್ರ ಹಿನ್ನಡೆ.




ರಶ್ಯಾದಲ್ಲಿ ಪ್ರತಿಭಟನೆ

ಜರ್ಮನ್ ಸೋಶಲಿಸ್ಟ್ ಆರ್ಥಿಕ ಮಂತ್ರಿ ರಾಜೀನಾಮೆ

ಜರ್ಮನಿಯ ಆರ್ಥಿಕ ಮಂತ್ರಿ ಸೋಶಲಿಸ್ಟ್ ಪಕ್ಷದ ಅಧ್ಯಕ್ಷ ಒಸ್ಕರ್ ಲಾಫೊಂಟೇನ್ ಹಠಾತ್ತಾಗಿ ರಾಜೀನಾಮೆ ನೀಡಿದ್ದಾರೆ. ಜರ್ಮನಿಯಲ್ಲಿ ಸೋಶಲಿಸ್ಟ್-ಗ್ರೀನ್ ಮೈತ್ರಿಕೂಟದ ಮತ್ತು ಆ ಕೂಟದ ಚುನಾವಣೆ ವಿಜಯದ ಕರ್ತಾರ ಎನ್ನಿಸಿಕೊಂಡ ಲಾಫೊಂಟೇನ್‌ಗೂ ಅಧ್ಯಕ್ಷ ಶ್ರೋಡರ್‌ಗೂ ತೀವ್ರ ಸೈದ್ಧಾಂತಿಕ ಭಿನ್ನಾಭಿಪ್ರಾಯ ರಾಜೀನಾಮೆಗೆ ಕಾರಣ ಎನ್ನಲಾಗಿದೆ. ಲಾಫೋಂಟೇನ್‌ರ ತೆರಿಗೆ ಸಲಹೆಗಳಿಗೆ ಅಧ್ಯಕ್ಷ ಶ್ರೊಡರ್ ಮತ್ತು ಜರ್ಮನ್ ಕೈಗಾರಿಕೋದ್ಯಮಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ರಾಜೀನಾಮೆ ನಂತರ ಸಾಮೂಹಿಕ ಕೆಲಸದ ವಾತಾವರಣ ಸಂಪುಟದಲ್ಲಿ ಇಲ್ಲದೆ ಇರುವುದು ತಮ್ಮ ರಾಜೀನಾಮೆಗೆ ಕಾರಣ ಎಂದು ಅವರು ಹೇಳಿದ್ದಾರೆ. ಇದರಿಂದ ಜರ್ಮನ್ ಸರ್ಕಾರ ಹೆಚ್ಚು ಮಧ್ಯಮ ಪಂಥದತ್ತ ವಾಲುತ್ತಿದೆ. ಜರ್ಮನ್ ಕೈಗಾರಿಕೋದ್ಯ ಮಿಗಳು ಮತ್ತು ಅವರ ಮಾಧ್ಯಮಗಳಲ್ಲಿ ಕಂಡ ಹರ್ಷಧ್ವನಿ ಮುಂದೇನು ಬರಲಿದೆ ಎಂದು ಸೂಚಿಸುತ್ತದೆ. ಇದರಿಂದ ಜರ್ಮನಿಯಲ್ಲಿ ಜನಪರ ಆರ್ಥಿಕ ನೀತಿಗಳತ್ತ ಚಲನೆಗೆ ಕುಂಠಿತವಾಗಲಿದೆ. ಲಾಫೊಂಟೇನ್ ಜರ್ಮನಿಯಲ್ಲಿ ಮಾತ್ರ ವಲ್ಲ ಯುರೋಪಿಯನ್ ಒಕ್ಕೂಟ ದಲ್ಲೂ ಜನಪರ ಆರ್ಥಿಕ ನೀತಿಗಳತ್ತ ಚಾಲನೆ ನೀಡಿದ ನಾಯಕರಲ್ಲಿ ಒಬ್ಬರಾಗಿದ್ದರು

‘ಕ್ರಿಮಿನಲ್, ಅಮಾನವೀಯ ಧಾಳಿ’ ವಿಶ್ವ ಯುವ ಸಂಘಟನೆಯ ಖಂಡನೆ

ಯುಗೋಸ್ಲಾವಿಯದ ವಿರುದ್ಧ ಅಮೆರಿಕ ಮತ್ತು ಯುರೋಪಿನ ನಾಟೋ ಸದಸ್ಯರ ಧಾಳಿಗಳು ‘ಕ್ರಿಮಿನಲ್, ಅಮಾನವೀಯ ಹಾಗೂ ಸಂಪೂರ್ಣವಾಗಿ ಅಸಮರ್ಥನೀಯ ಎಂದು ಯುವಜನ ಒಕ್ಕೂಟ (WFDY) ಖಂಡಿಸಿದೆ. ಇದು ಯುಗೋಸ್ಲಾವಿಯಾದ ಜನತೆಗೆ ಮಾರಕವಷ್ಟೇ ಅಲ್ಲ, ಇಡೀ ಬಾಲ್ಕನ್ ಪ್ರದೇಶದ ರಾಜಕೀಯ ಸ್ಥಿತಿಯನ್ನು ಅಸ್ಥಿರಗೊಳಿಸಿ ಈ ಪ್ರದೇಶಗಳಲ್ಲಿ ಅಪಾಯಕಾರಿ ಘರ್ಷಣೆಗಳಿಗೆ ದಾರಿ ಮಾಡಿ ಕೊಡುತ್ತದೆ ಎಂದು ಅದು ಎಚ್ಚರಿಸಿದೆ.

ವಿಶ್ವಸಂಸ್ಥೆಯ ಸದಸ್ಯ ದೇಶವಾದ ಯುಗೋಸ್ಲಾವಿಯಾದ ಮೇಲಿನ ಈ ಧಾಳಿ ಅಂತರ್ರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆ, ಅಂತರ್ರಾಷ್ಟ್ರೀಯ ಸಮುದಾಯದ ಭಾವನೆಗಳಿಗೆ ವಿರುದ್ಧವಾದದ್ದು ಎಂದು WFDY ಹೇಳಿದೆ.

ಸಂಘರ್ಷಗಳನ್ನು ಸಮಸ್ಯೆಗಳನ್ನು ಆಕ್ರಮಣಗಳು, ನಿರ್ಬಂಧಗಳು, ನಿಷೇಧಗಳು ಮತ್ತಿತರ ಹಿಂಸಾತ್ಮಕ ಕ್ರಮಗಳ ಮೂಲಕ ಪರಿಹರಿಸಲು ಖಂಡಿತ ಸಾಧ್ಯವಿಲ್ಲ ಎಂದಿರುವ WFDY ವಿಶ್ವದ ಎಲ್ಲಾ ಶಾಂತಿಪ್ರಿಯ, ಪ್ರಜಾಪ್ರಭುತ್ವವಾದಿ ಯುವ ಜನರು ಈ ಬಾಂಬು ಧಾಳಿಗಳನ್ನು ಖಂಡಿಸಬೇಕು, ಬಾಲ್ಕನ್ ಪ್ರದೇಶದಿಂದ ನಾಟೋ ಪಡೆಗಳನ್ನು ಹಿಂತೆಗೆದುಕೊಳ್ಳಲು ಆಗ್ರಹ ಪಡಿಸಬೇಕು ಎಂದು ಕರೆ ನೀಡಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿ ಆಕ್ರಮಣಕೋರತನದ ನಗ್ನ ಅಭಿವ್ಯಕ್ತಿ

ಪುಟ 1 ರಿಂದ

ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿ ಇತಿಹಾಸದಲ್ಲಿ ಮೊದಲ ಬಾರಿಗೆ ನಾಟೋ ಪಡೆಗಳನ್ನು ನಾಟೋಗೆ ಸೇರದ ಒಂದು ದೇಶದಲ್ಲಿ ನೆಲೆಗೊಳಿಸುವ ಒಂದು ‘ಒಪ್ಪಂದ’ವನ್ನು ಹೇರಬಯಸುತ್ತಿದೆ. ಆತ್ಮಗೌರವವಿರುವ ಯಾವುದೇ ಸ್ವತಂತ್ರ ದೇಶ ಈ ರೀತಿ ತನ್ನ ಸಾರ್ವಭೌಮತೆಯನ್ನು ಹ್ರಾಸಗೊಳಿಸುವುದನ್ನು ಸ್ವೇಚ್ಛೆಯಿಂದ ಒಪ್ಪಲು ಸಾಧ್ಯವಿಲ್ಲ ಎಂದು ಮಾರ್ಚ್ 25 ರಂದು ನೀಡಿದ ಹೇಳಿಕೆಯಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಅಮೆರಿಕಾ-ನಾಟೋ ವಿಮಾನ ಧಾಳಿಗಳಿಂದ ದೊಡ್ಡ ಪ್ರಮಾಣದಲ್ಲಿ ಪ್ರಾಣಹಾನಿಯ ದುರಂತ ನಡೆಯುವುದು ಖಂಡಿತ. ಕೋಸೊವೋ ಅಲ್ಬೇನಿಯನ್ನರ ಕಲ್ಯಾಣದ ಬಗ್ಗೆ ಆತಂಕ ವ್ಯಕ್ತಪಡಿಸುವಾಗ ಅಮೆರಿಕನ್ ಸಾಮ್ರಾಜ್ಯಶಾಹಿ ಇಬ್ಬಂದಿತನ ಪ್ರದರ್ಶಿಸುತ್ತಿದೆ. ತುರ್ಕಿಯಲ್ಲಿ ಕುರ್ದ್ ಜನಗಳು, ಇದೇ ರೀತಿ ಜನಾಂಗೀಯ ಅಲ್ಪಸಂಖ್ಯಾತರು ಇತರ ದೇಶಗಳಲ್ಲೂ ಇದ್ದಾರೆ. ಕೊಸೊವೋ ಅಲ್ಬೇನಿಯನ್ನರ ಬಗ್ಗೆ ಅಮೆರಿಕನ್ ಸಾಮ್ರಾಜ್ಯಶಾಹಿ ತೋರಿಸುತ್ತಿರುವ ಆತಂಕ ನಿಜವಾಗಿ ಬಾಲ್ಕನ್ ಪ್ರದೇಶದಲ್ಲಿ ತನ್ನ ಅಜೆಂಡಾವನ್ನು ಹೇರಲು ಅದಕ್ಕೆ ಒಂದು ನೆಪವಷ್ಟೆ. ಹಿಂದಿನ ಯುಗೋಸ್ಲಾವಿಯವನ್ನು ಈಗಾಗಲೇ ವಿಭಜಿಸಿರುವ ಅಮೆರಿಕದ ಸಾಮ್ರಾಜ್ಯಶಾಹಿ ಮತ್ತು ಅದರ ಪಶ್ಚಿಮ ಯುರೋಪಿನ ನಾಟೋ ಮಿತ್ರರು ಈಗ ಬಾಲ್ಕನ್ ಪ್ರದೇಶವನ್ನು ಸಂಪೂರ್ಣವಾಗಿ ತಮ್ಮ ಹತೋಟಿಗೊಳಪಡಿಸಲು ಪ್ರಯತ್ನಿಸುತ್ತಿದ್ದಾರೆ ಎಂದಿರುವ ಸಿಪಿಐ(ಎಂ) ಪೋಲೀಟ್‌ಬ್ಯೂರೋ ಹಿಂದಿನ ಸೋವಿಯತ್ ಒಕ್ಕೂಟವನ್ನು ಕಳಚಿ ಹಾಕುವುದರೊಂದಿಗೆ ನಾಟೋದ ಅಸ್ತಿತ್ವಕ್ಕೆ ಆಧಾರವೇ ಉಳಿದಿಲ್ಲದಿರುವಾಗ ಅದನ್ನು ಕಳಚಿ ಹಾಕುವ ಬದಲು ಅಮೆರಿಕನ್ ಸಾಮ್ರಾಜ್ಯಶಾಹಿ ಅದನ್ನು ಪೂರ್ವಕ್ಕೆ ವಿಸ್ತರಿಸಿ ಜಗತ್ತಿನ ಮೇಲೆ ತನ್ನ ಯಜಮಾನಿಕೆ ಹೇರುವ ತಂತ್ರದಲ್ಲಿ ಇನ್ನಷ್ಟು ದೇಶಗಳನ್ನು ಒಳಗೊಳ್ಳಲು ಪ್ರಯತ್ನಿಸುತ್ತಿದೆ ಎಂದು ಟೀಕಿಸಿದೆ.

ಭಾರತ ಸರಕಾರ ಈ ಅಮೆರಿಕಾ-ನಾಟೋ ಕಾರ್ಯಾಚರಣೆಯನ್ನು ಯಾವುದೇ ಸಂದಿಗ್ಧಕ್ಕೆ ಒಳಗಾಗದೆ ಖಂಡಿಸಬೇಕು ಎಂದು ಕರೆ ನೀಡಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇದರಲ್ಲಿ ಯಾವುದೇ ಚಂಚಲತೆ ಹುಳುಕು ಹುಡುಕುವ ಸಾಮ್ರಾಜ್ಯಶಾಹಿಯ ಪ್ರಯತ್ನಕ್ಕೆ ತುಪ್ಪ ಸುರಿದಂತಾಗುತ್ತದೆ ಎಂದು ಎಚ್ಚರಿಸಿದೆ.

ಭಾರತೀಯ ಜನತೆ ಅಮೆರಿಕನ್ ಸಾಮ್ರಾಜ್ಯಶಾಹಿ ಈ ಹೆಚ್ಚುತ್ತಿರುವ ಆಕ್ರಮಣಕೋರತನವನ್ನು ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ರಾಜ್ಯ ಸೆಕ್ರೇಟಾರಿಯೆಟ್ ಖಂಡನೆ: ಯುಗೋಸ್ಲಾವಿಯಾದ ಮೇಲೆ ಅಮೇರಿಕಾ ನೇತೃತ್ವದ ನ್ಯಾಟೋ ಕೂಟವು ನಿರಂತರ ವಿನಾಶಕಾರಿ ಮಿಲಿಟರಿ ಧಾಳಿ ನಡೆಸುತ್ತಿರುವುದನ್ನು ಉಗ್ರವಾಗಿ ಖಂಡಿಸಿರುವ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರಟಾರಿಯೇಟ್ ಇದರ ವಿರುದ್ಧ ಭಾರತ ಸರ್ಕಾರವು ಧೃಡವಾಗಿ ನಿಂತು ಪ್ರತಿಭಟಿಸಬೇಕು. ಮತ್ತು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಈ ಆಕ್ರಮಣದ ವಿರುದ್ಧ ರಾಜ್ಯದಾದ್ಯಂತ ಎಲ್ಲಾ ದೇಶಪ್ರೇಮಿ ಸಾಮ್ರಾಜ್ಯಶಾಹಿ ವಿರುದ್ಧ ಜನತೆ ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ.

ಭದ್ರಾವತಿ ಪೇಪರ್ ಮಿಲ್ಲಿನಲ್ಲಿ ಹೊಸದೊಂದು ಕಾನೂನು!

ಜಾಗತೀಕರಣ, ಉದಾರೀಕರಣದ ಭಾಗವಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ಆರ್ಥಿಕ ನೀತಿಯ ವಿರುದ್ಧ ಜನಸಮೂಹದ ಹೋರಾಟದೊಂದಿಗೆ ತಮ್ಮನ್ನು ಸಹ ತೊಡಗಿಸಿಕೊಳ್ಳಬೇಕೆಂದು ಅಧಿಕಾರಿ ವರ್ಗದವರೂ ಮುಂಬರುತ್ತಿರುವಾಗಲೇ ಭದ್ರಾವತಿಯಲ್ಲಿರುವ ಮೈಸೂರು ಪೇಪರ್ ಮಿಲ್ ಆಡಳಿತ ವರ್ಗವು ಅಧಿಕಾರಿಗಳು ಯಾವುದೇ ಸಂಘಟನೆಯನ್ನು ಮಾಡುವಂತಿಲ್ಲ ಎಂದು ಆದೇಶ ಹೊರಡಿಸಿದೆ.

ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿಯಿಂದ 10.3.99 ರಂದು ಹೊರಡಿಸಲಾದ ಸುತ್ತೋಲೆ ನಂ. ಎಂ.ಪಿ.ಎಂ. /ಸಿ/5496/99 ರ ಪ್ರಕಾರ ಎಲ್ಲಾ ಅಧಿಕಾರಿಗಳು ಕೂಡಲೇ ತಮ್ಮ ಸಂಘಟನೆಯಾದ ಎಂ.ಪಿ.ಎಂ. ಆಫೀಸರ್ಸ್ ಅಸೋಸಿಯೇಶನ್‌ಗೆ ರಾಜಿನಾಮೆ ಸಲ್ಲಿಸಿ ಅದರ ವರದಿಯನ್ನು 20.3.99ರ ಮೊದಲು ಮಾನವ ಸಂಪನ್ಮೂಲ ವಿಭಾಗದ ಜನರಲ್ ಮಾನೇಜರ್ ಅವರಿಗೆ ಕಳುಹಿಸಬೇಕು. ಇಲ್ಲವಾದಲ್ಲಿ ಅಂತಹ ಎಲ್ಲಾ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು. ಹಾಗೆ ಅಮಾನತ್ತಿನಲ್ಲಿಡುವ ಪ್ರಕ್ರಿಯೆಯು ಉನ್ನತ ಮಟ್ಟದ ಅಧಿಕಾರಿಗಳಿಂದ ಆರಂಭವಾಗಿ ಕೆಳಗಿನ ಹಂತದವರೆಗೆ ಬರುತ್ತದೆ ಪ್ರಜಾ ಪ್ರಭುತ್ವ ದೇಶದಲ್ಲಿ ಎಂತಹ ಕುರುಡು ಕಾನೂನು. ಸರಕಾರೀ ಕ್ಷೇತ್ರದಲ್ಲಿರುವ ಸಂಸ್ಥೆಯಲ್ಲಿ ಇಂತಹ ಸರ್ವಾಧಿಕಾರ.

ಹಾಗಾದರೆ ಅಧಿಕಾರಿ ವರ್ಗದ ಸಂಘಟನೆ ಮಾಡಿರುವ ತಪ್ಪೇನು? ಆಡಳಿತ ಮಂಡಲಿಯು ನಡೆಸುತ್ತಿರುವ ದುರ್ವ್ಯವಹಾರಗಳನ್ನು ಒಂದೊಂದಾಗಿ ಬಯಲಿಗೆಳೆಯುತ್ತಾ ಬಂದುರು. ಅವರು ಮಾಡಿದ ದೊಡ್ಡ ತಪ್ಪು ಇದಕ್ಕಾಗಿ ಸಂಘಟನೆಯ ಹಿಂದಿನ ಅಧ್ಯಕ್ಷ ಮತ್ತು ಕಾರ್ಯದರ್ಶಿ ತಮ್ಮ ಕೆಲಸವನ್ನೇ ಕಳೆದು ಕೊಳ್ಳ ಬೇಕಾಯಿತು. ಆದರೆ 10.2.99 ರಂದು ಕರ್ನಾಟಕ ರಾಜ್ಯ ಹೈಕೋರ್ಟ್ ಹಿಂದೆ ಅಧಿಕಾರಿ ಸಂಘಟನೆಯ ಅಧ್ಯಕ್ಷರಾದ ಹೆಚ್. ಗೋಪಿನಾಥ್ ಅವರನ್ನು ಕೆಲಸದಿಂದ ತೆಗೆದು ಹಾಕಿರುವುದು ಸರಿಯಲ್ಲವೆಂದು ತೀರ್ಪು ನೀಡಿದೆ. ಹಿಂದಿನ ಕಾರ್ಯದರ್ಶಿ ಎ. ನಜರ್ ಕುಕ್ಕಾಡಿಯವರ ಬಗ್ಗೆ ಹೈ ಕೋರ್ಟಿನಲ್ಲಿ ವಿಚಾರಣೆ ಮುಂದು ವರಿಯುತ್ತಿದೆ.

ಅಧಿಕಾರಿ ವರ್ಗದವರಿಗೆ ಸಂಘಟನೆಯ ಹಕ್ಕು ಇಲ್ಲಿ?: ಜನವರಿ 98 ರಂದು ಮೈಸೂರು ಪೇಪರ್ ಮೀಲ್ ಅಧಿಕಾರಿಗಳ ಸೇವಾ ನಿಯಮದಲ್ಲಿ ಅಧಿಕಾರಿಗಳು ಯಾವುದೇ ಕಾರ್ಮಿಕ ಸಂಘಟನೆಯ ಸದಸ್ಯರಾಗ ಕೂಡದೆಂದು ಬದಲಾವಣೆ ತಂದ ಆಡಳಿತ ವರ್ಗದ ನಿಲುಮೆಯನ್ನು ರಾಜ್ಯ ಹೈಕೋರ್ಟ್ ಎತ್ತಿ ಹಿಡಿದಿದೆ. ಇದರಿಂದ ಉತ್ತೇಜಿತ ಗೊಂಡ ಆಡಳಿತ ವರ್ಗವು ಅಧಿಕಾರಿ ಸಂಘಟನೆಯ ಸದಸ್ಯತ್ವವನ್ನು ಮುಂದುವರಿಸಿದ್ದೇ ಆದರೆ ಉನ್ನತ ಮಟ್ಟದಿಂದ ಹಿಡಿದು ಕೆಳ ಮಟ್ಟದ ವರೆವಿಗೂ ಎಲ್ಲಾ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಶಿಸ್ತು ಕ್ರಮ ಕೈಗೊಳ್ಳುವುದಾಗಿ ತಿಳಿಸಿದೆ.

ಎಂ.ಪಿ.ಎಂ. ನಂತಹ ಆಡಳಿತ ವರ್ಗದ ಬರ್ಬರ ಕೃತ್ಯಗಳು ಹಂತ ಹಂತವಾಗಿ ಕೊನೆಗೊಳ್ಳ ಬೇಕಾದರೆ ಅಧಿಕಾರಿ ವರ್ಗದವರೂ ಇತರ ಸಾಮೂಹಿಕ ಸಂಘಟನೆಯೊಂದಿಗೆ ಐಕ್ಯ ಹೋರಾಟಕ್ಕಿಳಿಯ ಬೇಕಾಗುತ್ತದೆ. ಜಾಗತೀಕರಣ ಉದಾರೀಕರಣದ ಆರ್ಥಿಕ ನೀತಿಗಳು ತೀವ್ರ ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ (ಎನ್.ಪಿ.ಎಂ.ಓ) ಪ್ರಬಲವಾದ ಹೋರಾಟವನ್ನು ನಡೆಸುತ್ತಿದೆ. ಇದೀಗ ಎನ್.ಎ.ಎಂ.ಓ.ದ ಸಂಘಟನೆಗಳನ್ನು ಜಿಲ್ಲಾ ಮಟ್ಟದಲ್ಲೂ ಸ್ಥಳೀಯ ಮಟ್ಟದಲ್ಲೂ ಮಾಲೀಕರ ಆಡಳಿತ ವರ್ಗದ ಕೆಟ್ಟ ನೀತಿಗಳ ವಿರುದ್ಧ ಬಲಗೊಳಿಸಿ ಸ್ಥಳೀಯ ಹೋರಾಟಗಳನ್ನು ನಡೆಸಬೇಕಾಗಿದೆ ○

ಅಮಾನತ್ತು ರದ್ದತಿಗೆ ಒತ್ತಾಯಿಸಿ ಕೆ.ಓ.ಎಫ್. ಕಾರ್ಮಿಕರಿಂದ ಮೆರವಣಿಗೆ ಮತ್ತು ಪ್ರತಿಕೃತಿ ದಹನ

ಹೊಸಪೇಟೆ: ಕೆ.ಓ.ಎಫ್. ಕಾರ್ಮಿಕ ಸಂಘದ ಪದಾಧಿಕಾರಿಗಳನ್ನು ವಿನಾಕಾರಣ ಕೆಲಸದಿಂದ ಅಮಾನತ್ತು ಗೊಳಿಸಿರುವುದನ್ನು ವಿರೋಧಿಸಿ ಹಾಗೂ ಇದಕ್ಕೆ ಸಂಬಂಧಿಸಿದಂತೆ ಮಾರ್ಚ್ 13 ರಂದು ನಡೆಯುವ ವಿಚಾರಣೆಯನ್ನು ವಿರೋಧಿಸಿ ಕಾರ್ಮಿಕ ಸಂಘದವರು ನಗರ ದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ನಂತರ ಕೆ.ಓ.ಎಫ್. ಮ್ಯಾನೇಜಿಂಗ್ ಡೈರೆಕ್ಟರ್ ರವರ ಪ್ರತಿಕೃತಿ ದಹನ ಮಾಡಿದರು

ಸಭೆಯನ್ನುದ್ದೇಶಿಸಿ ಸಂಘದ ಗೌರವಾಧ್ಯಕ್ಷರಾದ ಡಿ. ವೆಂಕಟರಮಣ ಮಾತನಾಡಿ ವಿಚಾರಣೆ ನಡೆಸುತ್ತಿರುವುದು ಕೇವಲ ಬೂಟಾಟಿಕೆಯಾದ್ದರಿಂದ ಇಂತಹ ವಿಚಾರಣೆಯನ್ನು ತಕ್ಷಣ ರದ್ದುಗೊಳಿಸಿ ಕಾರ್ಮಿಕರನ್ನು ಪುನ: ಕೆಲಸಕ್ಕೆ ತೆಗೆದು ಕೊಳ್ಳಬೇಕು ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಹೊಸ ಪೇಟೆ ಬಂದ್ ಕಾರ್ಯಕ್ರಮ ಮಾಡಲಾಗುವುದೆಂದರು.

ನಂತರದಲ್ಲಿ ಡಿ.ವೈ.ಎಫ್.ಐ.ನ ತಾಲೂಕು ಅಧ್ಯಕ್ಷರಾದ ಎ. ಕರುಣಾನಿಧಿ ಮಾತನಾಡಿ ಕಾರ್ಮಿಕರು ವಿಚಾರಣೆಗೆ ಹೆದರಿ ಅದನ್ನು ವಿರೋಧಿಸುತ್ತಿಲ್ಲ ಆದರೆ ವಿನಾಕಾರಣ ಕೆಲಸ ದಿಂದ ವಜಾ ಮಾಡಿರುವುದರಿಂದ ವಿಚಾರಣೆ ಪ್ರಮೇಯವೇ ಬರುವುದಿಲ್ಲ ಎಂದರು. ಎನ್.ವಿ. ಮಂಜುಯ್ಯ ಕಾರ್ಮಿಕರ ಸಂಘದ ಉಪಾಧ್ಯಕ್ಷರು ಮ್ಯಾನೇಜಿಂಗ್ ಡೈರೆಕ್ಟರ್ ರವರ ಪ್ರತಿಕೃತಿಗೆ ಅಗ್ನಿ ಸ್ಪರ್ಷ ಮಾಡಿದರು. ಎಂ. ಗೋಪಾಲ ಸ್ವಾಗತ ಕೋರಿ ಮಾತನಾಡಿದರು ಎಸ್.ಎಫ್.ಐ. ನ ಕೆ. ರಮೇಶ್ ಕೊನೆಯಲ್ಲಿ ವಂದಿಸಿದರು, ಮೆರವಣಿಗೆ ಬೆಂಬಲಿಸಿ ಎಸ್.ಎಫ್.ಐ. ಡಿ.ವೈ.ಎಫ್.ಐ., ಸಿ.ಐ.ಟಿ.ಯು, ಎಲ್.ಐ.ಸಿ. ಸಂಘಗಳು ಡಾಲ್ಮಿಯಾ ಕಾರ್ಮಿಕರು ಟೈಲರಿಂಗ್ ಕಾರ್ಮಿಕರು, ಹಾಗೂ ಇನ್ನಿತರೇ ಸಂಘಗಳ ಮುಖಂಡರುಗಳು ಭಾಗವಹಿಸಿದ್ದರು.

ಅಂಗನವಾಡಿ ನೌಕರರ ತುಮಕೂರು ಜಿಲ್ಲಾ ಸಮ್ಮೇಳನ

ಅಂಗನವಾಡಿ ನೌಕರರು ನಡೆಸಿರುವ ಬಾಲಕಾರ್ಮಿಕರ, ಬಿ.ಪಿ.ಎಲ್. ಸರ್ವೆ ಹಣವನ್ನು ಮತ್ತು ಈಗಾಗಲೇ ಇರುವ ಸರ್ಕಾರಿ ಆದೇಶದಂತೆ ಎಲ್ಲಾ ಕೇಂದ್ರ ಗಳಿಗೂ ಸೌದೆ ಹಣವನ್ನು ನೀಡುವಂತೆ ಆಗ್ರಹಿಸಿ ಮಾರ್ಚ್ 8-9 ರಂದು ನಡೆದ ಅಂಗನವಾಡಿ ನೌಕರರ ಜಿಲ್ಲಾ ಸಮ್ಮೇಳನ ಒತ್ತಾಯಿಸಿದೆ. ಈ ಸಮ್ಮೇಳನದಲ್ಲಿ ಶುಭ ಕೋರಿ ಜೀವ ವಿಮಾ ನಿಗಮ ನೌಕರರ ಸಂಘದ ಮುಖಂಡರಾದ ವೆಂಕಟಕೃಷ್ಣ ನಂಜುಂಡಸ್ವಾಮಿ ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷರಾದ ಸೆನೆಟ್ ಸದಸ್ಯರಾದ ಲಕ್ಷ್ಮಿ ಆಟೋಚಾಲಕರ ಸಂಘಧ ಎಂ.ಎನ್. ಚೆಲುವರಾಜು ಡಿ.ವೈ.ಎಫ್ .ಐ.ನ ಕೆ. ಸುಬ್ರಮಣ್ಯಂ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಮಿತಿಯ ಆಯ್ಕೆ ಮಾಡಲಾಯಿತು ಗೌರವ ಅಧ್ಯಕ್ಷರಾಗಿ ಸೈಯದ್ ಮುಜೀಬ್, ಅಧ್ಯಕ್ಷರಾಗಿ ಪ್ರೇಮ ಬಿ.ಎನ್.ಕಾರ್ಯದರ್ಶಿಯಾಗಿ ಅಲ್ಲಾ ಬಕಾಶ್ ಆಯ್ಕೆಗೊಂಡರು

ಐಕ್ಯರಂಗಕ್ಕೊಂದು ಹೊಸರೂಪ
ಕನ್ನಡ ಪತ್ರಿಕಾರಂಗದಲ್ಲಿ ಹೊಸ ಸವಾಲುಗಳು

ಕನ್ನಡದ ಪತ್ರಿಕಾರಂಗದಲ್ಲಿ ಅದರಲ್ಲಿಯೂ ವಾರಪತ್ರಿಕೆಗಳ ವಿಷಯದಲ್ಲಿ ಹಲವು ಆತಂಕಕಾರಿ ಬೆಳವಣಿಗೆಗಳು ಕಾಣುತ್ತಿವೆ. ಒಂದು ಕಡೆ ಅಶ್ಲೀಲ ಭಾಷೆ ಬಳಸಿ ಕೀಳು ಅಭಿರುಚಿ, ಕೊಲೆ, ದರೋಡೆಗಳನ್ನು ವಿಜೃಂಭಿಸುವ ಪತ್ರಿಕೆಗಳು ಮತ್ತೊಂದು ಕಡೆ ಮಹಿಳಾ ಓದುಗರ ಕಡೆ ಕಣ್ಣಿಟ್ಟು ಕುಟುಂಬ ಪತ್ರಿಕೆಗಳೆನ್ನಿಸಿಕೊಂಡ ವಾರಪತ್ರಿಕೆಗಳಲ್ಲಿ ಓದುಗರನ್ನು ಶತ ಶತಮಾನ ಹಿಂದಕ್ಕೆ ನೂಕುವ ಲೇಖನ, ಕಥೆ, ಕಾದಂಬರಿಗಳು. ಒಂದು ಪತ್ರಿಕೆ ಓದುಗರನ್ನು ಸ್ವಕಾಯ ಬಿಡಿಸಿ ಪರಕಾಯ ಪ್ರವೇಶ ಮಾಡಲು ಪ್ರಯತ್ನಿಸಿದರೆ ಮತ್ತೊಂದು ಪತ್ರಿಕೆ ಮಂತ್ರ ಶಕ್ತಿ ಕಡೆಗೆ ಓದುಗರನ್ನು ದೂಡುತ್ತದೆ.

ಒಂದು ಕಡೆ ನಿರುದ್ಯೋಗಿ ಯುವಜನರಲ್ಲಿ ಮಾನವೀಯತೆ, ನಾಗರೀಕತೆಗಳನ್ನು ನಾಶಮಾಡಿ ಸಮಾಜ ಕಂಟಕ ಪ್ರವೃತ್ತಿಯನ್ನು ಬೆಳೆಸುವ ಪ್ರಯತ್ನ, ಮತ್ತೊಂದು ಕಡೆ ಕೋಮುವಾದಿ, ದೇಶ ಧ್ವಂಸಕ ಚಿಂತನೆಯ ಅಡಿಪಾಯವಾಗಿ ಜ್ಞಾನ ವಿಜ್ಞಾನ ವಿರೋಧಿ ಅವಿಚಾರಗಳನ್ನು ತುಂಬುವ ಪ್ರಯತ್ನ.

ದಿನ ದಿನಕ್ಕೂ ಸಾವಿರಾರು ರೈತರನ್ನು ಆತ್ಮಹತ್ಯೆಯತ್ತ ದೂಡುವ, ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡುವ ಐ.ಎಂ.ಎಫ್-ವಿಶ್ವಬ್ಯಾಂಕ್-ವಿಶ್ವ ವಾಣಿಜ್ಯ ಸಂಸ್ಥೆಗಳ ನೀತಿಗಳ ಬಗ್ಗೆ ಮೋಹ.

ನಮ್ಮ ನೆರೆಯ ದೇಶಗಳಿಗೆ ಥೈಲ್ಯಾಂಡ್, ಇಂಡೋನೇಷಿಯ ಮಲೇಷಿಯಾಗಳಿಗೆ ಹಬ್ಬಿದ ಕಾಡುಕಿಚ್ಚು ನಮ್ಮ ಮನೆಯನ್ನು ಸುಟ್ಟೀತು ಎಂಬ ಅರಿವೇ ಇಲ್ಲದ ಕುರುಡುತನ ಎಲ್ಲ ಪತ್ರಿಕೆಗಳನ್ನು ವಿವಿಧ ಪ್ರಮಾಣದಲ್ಲಿ ಭಾಧಿಸುತ್ತಿದೆ.

ಐಕ್ಯರಂಗದ ಸತ್ವ

ಕರ್ನಾಟಕದ ಈ ಗೊಂದಲಕಾರಿ ಪರಿಸ್ಥಿತಿಯನ್ನು ವಿವರಿಸಲು ವಿಶ್ಲೇಷಿಸಲು ಬೇಕಾದ ಸ್ಪಷ್ಟ ಮತ್ತು ಆಳ ತಿಳುವಳಿಕೆಯನ್ನು, ಈ ಸವಾಲನ್ನು ಎದುರಿಸಲು ಬೇಕಾದ ಧೃಡತೆಯನ್ನು ಕೆಚ್ಚನ್ನು ಪಡೆದ ಪತ್ರಿಕೆ 'ಐಕ್ಯರಂಗ'.

ಎಲ್ಲಾ ಕನ್ನಡ ಪತ್ರಿಕೆಗಳು ಮನಮೋಹನಸಿಂಗರ ಬಜೆಟ್‌ಗಳ ಮನಮೋಹಕತೆಗೆ ಮಾರು ಹೋಗಿದ್ದಾಗ ಅದರ ಹೂರಣವನ್ನು ಬಿಚ್ಚಿಟ್ಟಿದ್ದು, ಗ್ಯಾಟ್-ಡಂಕೆಲ್‌ಗಳನ್ನು ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ ಹಾಗೂ ವಿವರವಾಗಿ ಬಿಚ್ಚಿಟ್ಟಿದ್ದು 'ಐಕ್ಯರಂಗ' ಪತ್ರಿಕೆ. ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಅವಿತು ಕೊಂಡಿರುವ ಕಾವಿ ಮನಸ್ಸುಗಳು ಬಾಬರಿಮಸೀದಿಯ ನಾಶದ ನಂತರದ ಪರಿಸ್ಥಿತಿಯನ್ನು ಅರೆ ಮನಸ್ಸಿನಿಂದ ವಿವರಿಸುತ್ತಿದ್ದಾಗ "ಅಯೋಧ್ಯಾ ಕಾಂಡ"ಕ್ಕೆ ವಾರ ವಾರವೂ ವಿಶೇಷ ಪುಟಗಳನ್ನು ಮೀಸಲಿಟ್ಟು ವಿಶೇಷ ಪುರವಣಿಯನ್ನು ಪ್ರಕಟಿಸಿದ ಕೀರ್ತಿ ಐಕ್ಯರಂಗಕ್ಕೆ ಮಾತ್ರ ಸಲ್ಲುತ್ತದೆ. ಆದ್ದರಿಂದ ಈ ಸವಾಲನ್ನು 'ಐಕ್ಯರಂಗ'ವಲ್ಲದೆ ಮತ್ಯಾರು ಎದುರಿಸಲು ಸಾಧ್ಯ?

ಹೊಸ ಸವಾಲುಗಳನ್ನೆದುರಿಸಲು 'ಐಕ್ಯರಂಗ'ಕ್ಕೆ ಹೊಸರೂಪ

ಕನ್ನಡ ಜನತೆಯ ಮಾನವೀಯತೆ, ವೈಚಾರಿಕ ಶಕ್ತಿ, ಜಾತ್ಯಾತೀತ ಮನೋಭಾವನೆಯ ಮೇಲೆ ಎರಗಿದ ಧಾಳಿಯ ಸವಾಲನ್ನು ಎದುರಿಸಲು 'ಐಕ್ಯರಂಗ' ಸಜ್ಜಾಗಬೇಕಾಗಿದೆ. ಈ ಪ್ರಯತ್ನದಲ್ಲಿ 'ಐಕ್ಯರಂಗ' ಮೇ 1 ರಿಂದ ಹೊಸರೂಪು ತೊಟ್ಟು ನಿಮ್ಮ ಬಳಿ ಸಾರಲಿದೆ. ಕರ್ನಾಟಕದ ದುಡಿಯುವ ಜನರ ಮನಗೆಲ್ಲುವ ಅಭಿಲಾಷೆಯೊಂದಿಗೆ ಹೊಸ ಮುಖಪುಟದೊಂದಿಗೆ 12 ಪುಟಗಳ ವಿಸ್ತಾರ ಪಡೆದು ನಿಮ್ಮ ಕೈಸೇರಲಿದೆ. ಕರ್ನಾಟಕದ ಎಲ್ಲೆಡೆಯ ಜನಜೀವನದ ದು:ಖ ದುಮ್ಮಾನಗಳು, ನೋವು ನಲಿವುಗಳನ್ನು ನಿಮ್ಮದೇ ಭಾಷೆಯಲ್ಲಿ ನಿಮಗೆ ಮುಟ್ಟಿಸುವ ಪ್ರಯತ್ನ ಅದು. ಜನತೆಯ ಹೋರಾಟಗಳು, ಪ್ರತಿಭಟನೆಗಳು, ಅದರ ಹಿಂದಿನ ಕಿಚ್ಚು ಕೆಚ್ಚುಗಳೊಂದಿಗೆ ನಿಮ್ಮನ್ನು ತಟ್ಟಿ ಎಚ್ಚರಿಸುವ ಬಯಕೆಯೊಂದಿಗೆ ನಿಮ್ಮನ್ನು ಸೇರಲಿವೆ. 'ಐಕ್ಯರಂಗ'ದ ಹೊಸ ಸ್ವರೂಪ-ವಿಷಯ ವಿಸ್ತಾರ ನಿಮ್ಮನ್ನು ಸೆಳೆಯಲಿ. 'ಐಕ್ಯರಂಗ' ಬಿತ್ತುವ ಅರಿವು ಕರ್ನಾಟಕದ ಎಲ್ಲೆಡೆಗೆ ಪಸರಿಸಲಿ.

ಜಿ.ಎನ್.ನಾಗರಾಜ್
ಸಂಪಾದಕರು

ಮೇ 1 ಸಂಚಿಕೆ ಕರ್ನಾಟಕದಲ್ಲಿ ಇನ್ನೂ ಜೀವಂತವಿರುವ ಅಸ್ಪೃಶ್ಯತೆಯ ಬಗ್ಗೆ ಗಮನ ಕೇಂದ್ರೀಕರಿಸುತ್ತದೆ. ಈ ವಿಷಯದ ಬಗ್ಗೆ ಮಾಹಿತಿ ಇರುವವರೆಲ್ಲಾ ನಿರ್ದಿಷ್ಟ ಅನುಭವಗಳನ್ನು ಬರೆದು ಕಳಿಸಬೇಕೆಂದು ವಿನಂತಿಸುತ್ತೇವೆ.

ಧಾರವಾಡದಲ್ಲಿ ಇ.ಎಂ.ಎಸ್. ನೆನಪು

ಇ.ಎಂ.ಎಸ್. ನಂಬೂದರಿಪಾಡ್ ಈ ಶತಮಾನದ ಅದ್ವಿತೀಯ ಕ್ರಾಂತಿಕಾರಿ" ಎಂದರು ಕರ್ನಾಟಕ ವಿಶ್ವವಿದ್ಯಾಲಯದ ಭೌತ ಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ.ಎಸ್. ಆರ್. ತೋಂಟದಾರ್ಯ. ಅವರು ದಿ: 19-3-99 ರಂದು ಸಂಜೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಎ.ಕೆ. ಗೋಪಾಲನ್ ಸ್ಮಾರಕ ಸಾಮಾಜಿಕ ಶಿಕ್ಷಣ ಟ್ರಸ್ಟಿನ ಆಶ್ರಯದಲ್ಲಿ "ಇ.ಎಂ.ಎಸ್.- ನೆನಪುಗಳು" ಎಂಬ ಕುರಿತು ಉಪನ್ಯಾಸ ಮಾಡುತ್ತಿದ್ದರು. ಕೇರಳದ ಬ್ರಾಹ್ಮಣ ಜಾತಿ ಮತ್ತು ಭೂ ಮಾಲಕ ವರ್ಗದಿಂದ ಬಂದು ತನ್ನ ಕುಟುಂಬದ ಸಂಪ್ರದಾಯಗಳನ್ನೆಲ್ಲಾ ತ್ಯಜಿಸಿ ಸಮಾಜ ಸುಧಾರಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಸಮಾಜವಾದಿಗಳಾಗಿ ತನ್ನ ಸರ್ವಸ್ವವನ್ನು ದುಡಿಯುವ ಜನರ ಅಭ್ಯುದಯಕ್ಕಾಗಿ ತ್ಯಾಗ ಮಾಡಿದ ಹೋರಾಟಗಾರರಾಗಿ ಮಹಾನ್ ಇ.ಎಂ.ಎಸ್.ರ 90 ವರ್ಷಗಳ ದೀರ್ಘಕಾಲದ ಸ್ಫೂರ್ತಿದಾಯಕ ಹಾಗೂ ವೈವಿಧ್ಯಮಯ ಜೀವನ ಚರಿತ್ರೆಯನ್ನು ಪ್ರೊ|| ತೋಂಟದಾರ್ಯ ಪರಿಚಯಿಸಿದರು.

1930 ರ ದಶಕದಲ್ಲಿ ಜಯಪ್ರಕಾಶ ನಾರಾಯಣ "ಸಮಾಜವಾದ ಏಕೆ?" ಎಂದು ಪ್ರತಿಪಾದಿಸುತ್ತಿದ್ದರೆ, ಇ.ಎಂ.ಎಸ್. ಅಂದಿನಿಂದಲೇ "ಸಮಾಜವಾದ ಹೇಗೆ? ಎಂದು ವಾದಿಸಿ ತೋರಲಾರಂಭಿಸಿದರು ಎಂದು ಪ್ರೊ. ತೋಂಟದಾರ್ಯ ಉದಾಹರಣೆ ಸಹಿತ ವಿವರಿಸಿದರು. ಇ.ಎಂ.ಎಸ್. ಕಮ್ಯುನಿಸ್ಟ್ ಆಂದೋಲನದ ಎಡ-ಬಲ ತಿರುವು ಮುರುವುಗಳ ವಿರುದ್ಧ ರಾಜಿ ಇಲ್ಲದೇ ಹೋರಾಡುತ್ತಾ ಬಂದಿದ್ದರೂ, ಎಡ-ಪ್ರಜಾ ಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿಯೂ ಅವರು ಅನವರತ ಶ್ರಮಿಸಿರುವುದನ್ನು ನೆನಪಿಸಿದರು.

ಕೋಮುವಾದ, ಜಾಗತೀಕರಣಗಳಂಥ ಸಮಕಾಲೀನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಎಡ- ಪ್ರಜಾಪ್ರಭುತ್ವ ಶಕ್ತಿಗಳು ಇತ್ತೀಚೆಗೆ ಒಗ್ಗೂಡುತ್ತಿರುವುದು, ಮೂರನೇ ಪರ್ಯಾಯ ಶಕ್ತಿ ಪುನರ್ ರೂಪುಗೊಳ್ಳುತ್ತಿರುವುದು, ಆಶಾದಾಯಕ ಬೆಳವಣಿಗೆಗಳು ಎಂದರು. ಆ ದಿಸೆಯಲ್ಲಿ ಸಿಪಿಐ(ಎಂ) ನ ಆಶ್ರಯದಲ್ಲಿ ಎಲ್ಲಾ ಎಡ ಪಂಥಗಳ ಚಿಂತನ-ಮಂಥನಗಳಿಗೆ ಅವಕಾಶ ನೀಡಲು ಇತ್ತೀಚೆಗೆ 'ಲೆಫ್ಟ್ ವರ್ಡ್' ಎಂಬ ಪ್ರಕಾಶನ ಪ್ರಾರಂಭ ವಾಗಿರುವುದನ್ನು ಸ್ವಾಗತಿಸಿದರು. ಇತ್ತೀಚೆಗೆ ಸಮಾಜವಾದಿ ಸರಕಾರಗಳಿಗಷ್ಟೇ ಹಿನ್ನಡೆ ಆಗಿದೆ, ಸಮಾಜವಾದ ಸತ್ತಿಲ್ಲ ಅದು ಇನ್ನೂ ಒಂದು ದಶಕದಲ್ಲಿ ದೇಶ ವಿದೇಶಗಳಲ್ಲಿ ತನ್ನ ಮೇಲುಗೈ ಸಾಧಿಸಲಿದೆ ಎಂದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಮನ: ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ|| ಬಿ. ಕೃಷ್ಣಮೂರ್ತಿ ತನ್ನ ಉಪನ್ಯಾಸದಲ್ಲಿ ಎ.ಕೆ. ಗೋಪಾಲನ್ ಮತ್ತು ಇ.ಎಂ.ಎಸ್. ನಂಬೂದರಿಪಾಡ್ ರಂತಹ ಸಮಾಜವಾದಿ ಕ್ರಾಂತಿಕಾರರು ಕರ್ನಾಟಕದ ಹೆಚ್ಚಿನ ಜನತೆಗೆ ಇನ್ನೂ ಕಣ್ಮಣಿಗಳಾಗಿ ಮತ್ತು ಆದರ್ಶ ವ್ಯಕ್ತಿಗಳಾಗಿ ಕಾಣಬೇಕಾಗಿದೆ ಎಂದರು. ಶೋಷಕ ಸಮಾಜದಲ್ಲಿ ರಾಜ್ಯ ಪ್ರಭುತ್ವವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶೋಷಿತರಲ್ಲಿ ಶೋಷಕರ ಜೀವನ ಮೌಲ್ಯಗಳಾದ ಕರ್ಮ ಸಿದ್ಧಾಂತ, ಅಸಮಾನತೆ, ಲಾಭ, ಸ್ವಾರ್ಥ, ಗ್ರಾಹಕ ಸಂಸ್ಕೃತಿ ಮುಂತಾದವುಗಳನ್ನೇ ಮೈಗೂಡಿಸಿಕೊಳ್ಳುವಂತೆ ಮಾಡುವುದು. ಕಾರಣ ಶೋಷಿತರಲ್ಲಿ ವೈಜ್ಞಾನಿಕ ಮನೋಭಾವ ಸಮಾನತೆ, ನಿಸ್ವಾರ್ಥತೆ, ಸರಳತೆ ಗಳಂತಹ ಶ್ರಮ ಸಂಸ್ಕೃತಿಯ ಉದಾತ್ತ ಜೀವನ ಮೌಲ್ಯಗಳನ್ನು ಪ್ರಜ್ಞಾಪೂರ್ವಕವಾಗಿ ಮೂಡಿಸಬೇಕಾಗುತ್ತದೆ ಎಂದರು.

ಎ.ಕೆ.ಜಿ. ಸ್ಮಾರಕ ಸಂಸ್ಥೆಯ ಸದಸ್ಯರು ರೈತ-ಕಾರ್ಮಿಕರ ಧುರೀಣರು ಆದ ನಿತ್ಯಾನಂದ ಸ್ವಾಮಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎ.ಕೆ.ಜಿ. ಮತ್ತು ಇ.ಎಂ.ಎಸ್. ಅವರ ಕೊಡುಗೆಯನ್ನು ಕರ್ನಾಟಕ ಅಧ್ಯಕ್ಷತೆ ವಹಿಸಿದ್ದರು. ಎ.ಕೆ.ಜಿ ಮತ್ತು ಇ.ಎಂ.ಎಸ್. ಅವರ ಅಪಾರ ಕೊಡುಗೆಯನ್ನು ಕರ್ನಾಟಕ ಇಂದಿನ ಮತ್ತು ಮುಂದಿನ ಜನಾಂಗದವರಿಗೆ ತಲುಪಿಸಲು ಮತ್ತು ಅವರಿಗೆ ಅಧ್ಯಯನ ಸಂಶೋಧನೆ ತರಭೇತಿ, ಗ್ರಂಥಾಲಯ ಆಧುನಿಕ ಸಂಪರ್ಕ ಜಾಲ ಮುಂತಾದ ಸೌಕರ್ಯಗಳನ್ನು ಒದಗಿಸಲು, ಎ.ಕೆ.ಜಿ. ಸ್ಮಾರಕ ಸಂಸ್ಥೆಯ ಆಶ್ರಯದಲ್ಲಿ ಕರ್ನಾಟಕಕ್ಕೆ ಬೆಂಗಳೂರಿನಲ್ಲಿ "ಇ.ಎಂ.ಎಸ್. ಭವನ"ವನ್ನು ರೂ. 50 ಲಕ್ಷ ವೆಚ್ಚದಲ್ಲಿ ನಿರ್ಮಿಸುವ ಯೋಜನೆಯ ಕುರಿತು ನಿತ್ಯಾನಂದ ಸ್ವಾಮಿ ಪ್ರಸ್ತಾಪಿಸಿದರು. ಅದಕ್ಕೆ ಸಾರ್ವಜನಿಕರಿಂದ ದೇಣಿಗೆ ಸಂಗ್ರಹದ ಆಂದೋಲನ ನಡೆಯಲಿದೆ ಎಂಬು, ಈ ಪ್ರದೇಶದಲ್ಲಿ ಈ ಮಹತ್‌ಕಾರ್ಯಕ್ಕೆ ಅಭಿಮಾನಿಗಳು ಮತ್ತು ಹಿತೈಷಿಗಳು ಉದಾರ ಧನ ಸಹಾಯ ಮಾಡಬೇಕೆಂದೂ ಕರೆ ನೀಡಿದರು.

ಇದುವರೆಗೆ ಈ ಪ್ರದೇಶದಲ್ಲಿ ಇ.ಎಂ.ಎಸ್. ಭವನಕ್ಕೆ ರೂ.20,000 ನಿಧಿ ಸಂಗ್ರಹಿಸಿದ ವಿವರಗಳನ್ನು ಡಿ.ಜೆ.ಗೋಂದಕರ್ ನೀಡಿದರು. ಸಭೆ ನಡೆದ ಸ್ಥಳದಲ್ಲಿಯೇ ಅತಿಥಿ ಉಪನ್ಯಾಸಕರು ಸೇರಿದಂತೆ ಅನೇಕ ಅಭಿಮಾನಿಗಳು ಒಟ್ಟು ರೂ.5000 ದೇಣಿಗೆ ಘೋಷಿಸಿದರು. ಪ್ರಾರಂಭದಲ್ಲಿ ಸಿ.ಆರ್. ಭಟ್ ಸ್ವಾಗತಿಸಿದರು. ಕೊನೆಯಲ್ಲಿ ಎಂ.ಬಿ.ಕಟ್ಟಿ ವಂದಿಸಿದರು. ಅತಿಥಿ ಉಪನ್ಯಾಸಕರಿಗೆ ಇ.ಎಂ.ಎಸ್. ರ ಕೃತಿಗಳನ್ನು ಡಾ|| ವಿ.ಎನ್. ದೇಶಪಾಂಡೆ ಅವರಿಂದ ನೆನಪಿನ ಕಾಣಿಕೆಯಾಗಿ ಕೊಡಿಸಲಾಯಿತು. ಗಂಗಾಧರ ಗಾಡದ, ಇ.ಎಂ.ಎಸ್. ರ ಪುಸ್ತಕಗಳ ಮತ್ತು ಅವರ ಜೀವನಕ್ಕೆ ಸಂಬಂಧಿಸಿದ ಸುದ್ದಿ ಸಾಹಿತ್ಯದ ಪ್ರದರ್ಶನ ಏರ್ಪಡಿಸಿದ್ದರು. ಬಿ.ಐ. ಈಳಿಗೇರ ಕಾರ್ಯಕ್ರಮದ ಸಿದ್ಧತೆಗಳನ್ನು ನಿರ್ವಹಿಸಿದ್ದರು.

ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ		939, 185-25
ಶ್ರೀರಾಂಪುರ ವಲಯ ಸಮಿತಿ-ಬೆಂಗಳೂರು ಮೂಲಕ		13.369-25
ಸಾಮೂಹಿಕ ನಿಧಿ ಸಂಗ್ರಹ	2368.25	
ಎಸ್.ವಿ. ಶಾಸ್ತ್ರಿ-ವಕೀಲರು- ಮಲ್ಲೇಶ್ವರಂ	1001-00	
ಎ. ಜಯರಾಂ-ನಾಗರಭಾವಿ-ಬೆಂಗಳೂರು	10000-00	
ಹಕ್ಕಲ ಗೌಡ ಪಾಟೀಲ್ ಪೂರ್ಣಾವಧಿ ಕಾರ್ಯಕರ್ತರು ಹಾನಗಲ್		500-00
ಅಣ್ಣರಾಯ ಈಳಗೇರ, ಸಿಂಧಗಿ ಬಿಜಾಪುರ		500-00
ಶಬರಿ ಮೆಟಲ್-ವೈಟ್ ಫೀಲ್ಡ್‌ರೋಡ್ ಬೆಂಗಳೂರು		425-00
ಸಿಪಿಐ(ಎಂ) ವರ್ತೂರು ವಲಯ -ಬೆಂಗಳೂರು-ಸಂಗ್ರಹ		705-00
ಸಿಪಿಐ(ಎಂ)-ಗುಲ್ಬರ್ಗ ಜಿಲ್ಲಾ ಸಮಿತಿ- ಸಂಗ್ರಹ		3050-00
ಡಿಸೆಂಬರ್ ನಲ್ಲಿ ನೀಡಿದ್ದು		40,000-00
ಸಿಪಿಐ(ಎಂ) ಬಿಜಾಪುರ ಜಿಲ್ಲಾ ಸಮಿತಿ ಸಂಗ್ರಹ		15000-00
ಕಾಂ| ಎನ್.ಕೆ. ಉಪಾಧ್ಯಾಯರ ಮೂಲಕ		15024-00
ಡಾ|| ಶಿವರಾಮಪ್ಪ	101	
ಬಿ.ಡಿ. ಶಿವ	500	
ಡಾ|| ಎ.ಎ. ಮಾಗಿ	250	
ಡಾ|| ಎ.ಎಚ್. ಸಾಸನೂರು	500	
ಜೋಶಿ ಬಂಧುಗಳು	101	
ಎಂ.ಜಿ. ಮತಾಲ್ ದಾರ-ವಕೀಲರು	500	
ಜಿ.ಶಂಕರ	5000	
ಜಿ.ವಿ. ಗುಪ್ತಾ	500	
ಬಿ.ಜಿ. ಕಲಗೊಂಡ	50	
ಆರ್.ಎಸ್. ಬಿರಾದಾರ	20	
ಜಿ. ಅವರವಾಡ	2000	
ಡಿ.ವೈ. ಉಪ್ಪಾರ	5000	
ವಿ.ಎಂ. ಕಟ್ಟಿ -ವಕೀಲರು	502	
ಎಂ ವಿಜಯ ಕೃಷ್ಣ-ಎಸ್.ಎಫ್.ಐ. ಕೋಲಾರ ಜಿಲ್ಲಾ ಸಹಕಾರ್ಯದರ್ಶಿ		500-00
ಸಿಪಿಐ(ಎಂ) ಮಲೆನಾಡು ಪ್ರಾದೇಶಿಕ ಸಮಿತಿ ಸಂಗ್ರಹ		500-00
ಗಂಗಾಧರ-ಹಗರಿಬೊಮ್ಮನಹಳ್ಳಿ		100-00
ಸಿಟಿಮ್ಯಾನ್ ಗಾರ್ಮೆಂಟ್ಸ್ ಕಾರ್ಮಿಕರು, ಬೆಂಗಳೂರು		1320-00
ಸಿಪಿಐ(ಎಂ) ಐಟಿಸಿ ಶಾಖೆ		2022-00
ಇ.ಎಂ.ಎಸ್. ಭವನ ನಿಧಿ ಸಂಗ್ರಹ ಸಮಿತಿ ಬಿ.ಇ.ಎ. ಬೆಂಗಳೂರು		1001-00
ಬಿಇಎಲ್(ಮತ್ತಿಕೆರೆ)ಬೆಂಗಳೂರು		1000-00
ಬಿಇಎಲ್ (ಯಶವಂತಪುರ) ಬೆಂಗಳೂರು		2190-00
ಸಿಪಿಐ(ಎಂ) ವರ್ತೂರು ವಲಯ ಸಮಿತಿ ಬೆಂಗಳೂರು ಮೂಲಕ		1000-00
ಬೊಮ್ಮನಹಳ್ಳಿ ಸಮಿತಿ		500-00
ಎಲ್.ಐ.ಸಿ. ಬೆಂಗಳೂರು ಸಂಗಾತಿಗಳಿಂದ		2250-00
ಒಟ್ಟು		10,46,141-50

ತಿದ್ದುಪಡಿ

ಕಳೆದ ಸಂಚಿಕೆಯ ಸಂಖ್ಯೆ ತಪ್ಪಾಗಿ 14-15 ಎಂದು ಮುದ್ರಿತವಾಗಿತ್ತು. 13ನೇ ಸಂಚಿಕೆ ಪ್ರಕಟವಾಗದ್ದರಿಂದ ಅದರ ಸಂಖ್ಯೆ 13-14 ಎಂದಿರಬೇಕಿತ್ತು. ಈ ತಪ್ಪಿಗೆ ವಿಷಾಧಿಸುತ್ತೇವೆ.

- ವ್ಯವಸ್ಥಾಪಕರು

ಇ.ಎಂ.ಎಸ್. ಭವನ

ಇ.ಎಂ.ಎಸ್. ಎಂದೆಂಬ ಕಾರುಣ್ಯ ಸಿಂಧು
ಇಂಡಿಯಾದಿ ಆಗಿದ್ದ ದುಡಿವವರ ಬಂಧು
ಇಂದವರ ಹೆಸರಿಂದ ಭವನವನು ನೋಡಿ
ಕಟ್ಟುವೆವು ಬಂಧುಗಳೆ ಸಹಾಯ ನೀಡಿ

- ವಿಡಂಬಾರಿ

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು:ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ